ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಆಗಸ್ಟ್ 21, 2024

ಸಂಪುಟ : 51 ಸಂಚಿಕೆ : 99 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



## ಕಲ್ಯಾಣವೃಷ್ಟಿ ಮಹಾಭಿಯಾನ-ಸ್ತೋತ್ರ ಸಮರ್ಪಣೆ

**ಶ್ರೀ ಭಾರತೀ ತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕರಿಸಿ ಐವತ್ತು ವರ್ಷ ಪೂರೈಸಿದ ಹಿನ್ನೆಲೆ**

ದಾವಣಗೆರೆ, ಆ.20- ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮಂಗಳವಾರ ಕಲ್ಯಾಣವೃಷ್ಟಿ ಮಹಾಭಿಯಾನ-ಸ್ತೋತ್ರ ಸಮರ್ಪಣೆ ಕಾರ್ಯ ನಡೆಯಿತು. ನೂರಾರು ಮಹಿಳೆಯರು ಶ್ರದ್ಧಾ ಭಕ್ತಿಯಿಂದ ಸ್ತೋತ್ರ ಪಠಿಸಿದರು.

ಶೃಂಗೇರಿ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಸಂನ್ಯಾಸ ಸ್ವೀಕಾರ ಮಾಡಿ ಐವತ್ತು ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಐವತ್ತನೇಯ ವರ್ಷದ ಸ್ವರ್ಣ ಮಹೋತ್ಸವವನ್ನು 'ಸುವರ್ಣಭಾರತೀ' ಎಂಬ ಹೆಸರಿನಲ್ಲಿ ವರ್ಷಪೂರ್ತಿ ಆಚರಿಸಲು ಜಗದ್ಗುರು ಶ್ರೀ ವಿಧುಶೇಖರಭಾರತೀ ಮಹಾಸ್ವಾಮೀಜಿ ನಿರ್ಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಲೋಕಕ್ಷೇಮಾರ್ಥವಾಗಿ ಪಂಚಾಯತನ ದೇವತಾರಾಧನೆ ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಲಿದ್ದು, ಅವುಗಳಲ್ಲಿ ಸ್ತೋತ್ರ ಸಮರ್ಪಣೆಯೂ ಒಂದಾಗಿದೆ.

ಶ್ರೀಮಠದ ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನ ಮತ್ತು ವೇದಾಂತ ಭಾರತೀ ಸಂಸ್ಥೆಗಳು ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರನಕ್ಷತ್ರಮಾಲಾ ಸ್ತೋತ್ರ ಮತ್ತು ಲಕ್ಷ್ಮೀನೃಸಿಂಹಕರಾವಲಂಬಸ್ತೋತ್ರ ಎಂಬ ಈ ಮೂರು ಸ್ತೋತ್ರಗಳ ವಿಶೇಷ ಮಹಾಭಿಯಾನವನ್ನು ರಾಜ್ಯದಾದ್ಯಂತ ಕೈಗೊಂಡಿವೆ. ದಾವಣಗೆರೆ ಜಿಲ್ಲೆಯಲ್ಲೂ ಸಹ ಸಾವಿರಾರು ಮಹಿಳೆಯರು ಸ್ತೋತ್ರಗಳನ್ನು ಕಲಿತಿದ್ದರು. ಶ್ರೀ ಶಂಕರ ಭಗವತ್ಪಾದರಿಂದ ರಚಿತವಾದ ಈ ಮೂರು ಸ್ತೋತ್ರಗಳು ಪ್ರತಿಯೊಬ್ಬರಿಗೂ (2ನೇ ಪುಟಕ್ಕೆ)

## ಹೊನ್ನಾಳಿ: ಭಾರೀ ಮಳೆಗೆ ಆಸ್ಪತ್ರೆ ವಾರ್ಡ್ ಜಲಾವೃತ

ಹೊನ್ನಾಳಿ, ಆ.20- ಮಂಗಳವಾರ ಸಂಜೆ 6.30ರ ವೇಳೆ ಸುರಿದ ಭಾರೀ ಮಳೆಗೆ ಪಟ್ಟಣದ 100 ಹಾಸಿಗೆಗಳ ಸರ್ಕಾರಿ ಆಸ್ಪತ್ರೆಯ ವಾರ್ಡ್‌ಗಳು ಜಲಾವೃತವಾಗಿದೆ.

ಈ ಹಿಂದೆ ಮಳೆ ಬಂದ ಸಂದರ್ಭಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುತ್ತಿತ್ತು. ಆದರೆ ನೀರು ಹೋಗುವ ಜಾಗದಲ್ಲಿ ಆಸ್ಪತ್ರೆಯ ಹಿಂಭಾಗದಲ್ಲಿ 250 ಹಾಸಿಗೆಗಳ ಆಸ್ಪತ್ರೆಯ ಕಾಮಗಾರಿ ನಡೆಯುತ್ತಿದ್ದು ನೀರು ಸರಾಗವಾಗಿ ಹರಿದುಹೋಗುವ ಜಾಗದಲ್ಲಿ ಹೊಸ ಆಸ್ಪತ್ರೆಯ ಕಟ್ಟಡ ಅಡ್ಡವಾಗಿರುವುದರಿಂದ ಐಸಿಯು ವಾರ್ಡ್‌ನ ಬಾತ್ ರೂಂನಿಂದ ನೀರು ಆಸ್ಪತ್ರೆ ವಾರ್ಡ್‌ಗಳಿಗೆ ನುಗ್ಗಿ ರೋಗಿಗಳು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು.

ಐಸಿಯು ವಿಭಾಗದಲ್ಲಿ 6 ರೋಗಿಗಳು, ಹೆರಿಗೆ ವಾರ್ಡ್‌ನಲ್ಲಿದ್ದ 4 ರೋಗಿಗಳನ್ನು ಬೇರೆ ವಾರ್ಡ್‌ಗೆ ಆಸ್ಪತ್ರೆಯ ಸಿಬ್ಬಂದಿಗಳು (3ನೇ ಪುಟಕ್ಕೆ)



# ತೆರೆಮರೆಯಲ್ಲಿ ಸಿಎಂ ಗಾದಿಗೆ ಪೈಪೋಟಿ ?

ಬೆಂಗಳೂರು, ಆ. 20 - ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರಿಗೆ ಬೆಂಬಲ ವ್ಯಕ್ತಪಡಿಸುತ್ತಿರುವ ಸಚಿವರು, ಮುಖಂಡರೇ ತೆರೆಮರೆಯಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಪೈಪೋಟಿ ನಡೆಸಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣದ ತನಿಖೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಆದೇಶ ನೀಡುತ್ತಿದ್ದಂತೆ ಈ ಕಸರತ್ತು ಆರಂಭವಾಗಿದೆ ಎನ್ನಲಾಗುತ್ತಿದೆ.

ಯಡಿಯೂರಪ್ಪ ಅವರ ರೀತಿಯಲ್ಲೇ ಸಿದ್ದರಾಮಯ್ಯ ರಾಜೀನಾಮೆ ನೀಡುವ ಪರಿಸ್ಥಿತಿ ಎದುರಾದರೆ ಅಂತಹ ಸನ್ನಿವೇಶದಲ್ಲಿ ಆ ಸ್ಥಾನ ಗಿಟ್ಟಿಸಿಕೊಳ್ಳಲು ಪ್ರಭಾವಿ ಸಚಿವರು ಹಾಗೂ ಹಿರಿಯ ಶಾಸಕರು ಹೈಕಮಾಂಡ್ ಕದ ತಟ್ಟಿದ್ದಾರೆ.

ಅಧಿಕಾರ ಹಂಚಿಕೆ ಪರಿಸ್ಥಿತಿ ಎದುರಾದರೆ ಅಂತಹ ಸನ್ನಿವೇಶದಲ್ಲಿ ಡಾ.ಪರಮೇಶ್ವರ್ ಇಲ್ಲವೇ ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿ ಎಂದು ಸಚಿವ ಕೆ.ಎನ್.ರಾಜಣ್ಣ (4ನೇ ಪುಟಕ್ಕೆ)

### ಸಿದ್ದರಾಮಯ್ಯ ಕೆಳಗಿಳಿಸುವ ಪ್ರಶ್ನೆಯೇ ಇಲ್ಲ : ಜಾರಕಿಹೊಳಿ

ಬೆಂಗಳೂರು, ಆ. 20 - ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಪ್ರಶ್ನೆಯೇ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ತೆಲಂಗಾಣದಲ್ಲೂ ನಮ್ಮ ಪಕ್ಷ ಅಧಿಕಾರ ಕಳೆದುಕೊಳ್ಳುತ್ತದೆ.

ಇದನ್ನು ಗಮನದಲ್ಲಿ ಇರಿಸಿಕೊಂಡೇ ಕಾಂಗ್ರೆಸ್ ವರಿಷ್ಠರು ಸಿದ್ದರಾಮಯ್ಯ ಬೆಂಬಲಕ್ಕೆ ನಿಂತು ಬಿಜೆಪಿಯಿಂದ 2 ಸರ್ಕಾರಗಳನ್ನು ಉಳಿಸಿಕೊಳ್ಳಲು ಗಟ್ಟಿಯಾಗಿ ನಿಂತಿದ್ದಾರೆ ಎಂದವರು ಹೇಳಿದ್ದಾರೆ. ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, (4ನೇ ಪುಟಕ್ಕೆ)

## ಅಭಿನವ ಕೃಪಾನಂದ ಭಾರತಿ ಸ್ವಾಮೀಜಿ, ಬ್ರಹ್ಮಾನಂದ ಸ್ವಾಮಿ ಮಠಕ್ಕೆ ನೂತನ ಪೀಠಾಧಿಪತಿ

ಹರಿಹರ, ಆ. 20- ನಗರದ ಬ್ರಹ್ಮಾನಂದ ಸ್ವಾಮಿ ಮಠಕ್ಕೆ ನೂತನ ಪೀಠಾಧಿಪತಿಯಾಗಿ ಶ್ರೀ ಅಭಿನವ ಕೃಪಾನಂದ ಭಾರತಿ ಸ್ವಾಮೀಜಿಯವರನ್ನು ಪೀಠಾರೋಹಣ ಮಾಡಲಾಯಿತು.

ಸಿದ್ಧಾರೂಢ ಪರಂಪರೆ ಹೊಂದಿರುವ ಶ್ರೀ ಬ್ರಹ್ಮಾನಂದ ಸ್ವಾಮಿ ಮಠದಲ್ಲಿ ಬ್ರಹ್ಮಾನಂದ ಸ್ವಾಮೀಜಿ ಹಾಗೂ ಶ್ರೀ ದೊಡ್ಡಮ್ಮನವರ, ಶ್ರೀ ಕೃಪಾನಂದ ಭಾರತಿ ಸ್ವಾಮೀಜಿಯವರ ಪುಣ್ಯ ಸ್ಮರಣೋತ್ಸವ ನಿಮಿತ್ಯವಾಗಿ ಶ್ರೀಮಠದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಇದೇ ಸಂದರ್ಭದಲ್ಲಿ ಅರುಣ್ (6ನೇ ಪುಟಕ್ಕೆ)

## ಮುಂದಿನ ಚಂದ್ರಯಾನಗಳ ವಿನ್ಯಾಸ ಸಿದ್ಧ : ಇಸ್ರೋ

ನವದೆಹಲಿ, ಆ. 20 - ಮುಂದಿನ ನಾಲ್ಕು ಹಾಗೂ ಐದನೇ ಚಂದ್ರಯಾನಗಳಿಗೆ ವಿನ್ಯಾಸ ಸಿದ್ಧಗೊಳಿಸಲಾಗಿದೆ. ಸರ್ಕಾರದ ಬಳಿ ಇವುಗಳಿಗೆ ಅನುಮತಿ ಕೋರಲಾಗಿದೆ ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ. ನಾಲ್ಕನೇ ಚಂದ್ರಯಾನದ ಮೂಲಕ ಚಂದ್ರನ ಮೇಲಿನ ಕಲ್ಲು ಹಾಗೂ ಮಣ್ಣನ್ನು ಭೂಮಿಗೆ ತರುವ ಗುರಿಯಿದೆ. ಇದಕ್ಕಾಗಿ ಸರ್ಕಾರದ ಅನುಮತಿ ಕೇಳಲಾಗಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಸೋಮನಾಥ್ ಹೇಳಿದ್ದಾರೆ. 2028ರ ವೇಳೆಗೆ ನಾಲ್ಕನೇ ಚಂದ್ರಯಾನ ಉಡಾವಣೆ ಮಾಡುವ ಗುರಿ ಇದೆ ಎಂದು ಇಸ್ರೋ ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು. (2ನೇ ಪುಟಕ್ಕೆ)

# ರಾಜ್ಯಕ್ಕೆ ಅರಸು ಕೊಡುಗೆ ಅಪಾರ : ಸಂಸದೆ ಪ್ರಭಾ



ದಾವಣಗೆರೆ, ಆ.20- ಮಾಜಿ ಮುಖ್ಯಮಂತ್ರಿ, ಸಾಮಾಜಿಕ ಪರಿವರ್ತನೆಯ ಹರಿಕಾರ ದಿ. ಡಿ. ದೇವರಾಜ್ ಅರಸು ಅವರು ಸರಳ, ಸಜ್ಜನಿಕೆ ವ್ಯಕ್ತಿತ್ವದ, ಹಿಂದುಳಿದ ವರ್ಗಗಳ ಆಶಾಕಿರಣ. ಭೂ ಸುಧಾರಣೆ ಹಾಗೂ ಉಳುವವನೇ ಭೂಮಿ ಒಡೆಯ ಎನ್ನುವ ಕಾನೂನು ಜಾರಿಗೆ ತಂದಿದ್ದರಿಂದ ಹಿಂದುಳಿದ ವರ್ಗದ ಜನರಿಗೆ ಅನುಕೂಲವಾಯಿತು ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಡಿ. ದೇವರಾಜ ಅರಸುರವರ 109 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗದವರಿಗೆ ಮೀಸಲಾತಿ ಜಾರಿ ಮಾಡಿದರು. ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಅರಿವು ಸಾಲ, ಸ್ವಯಂ ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ರಾಜ್ಯಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್ ಬಸವಂತಪ್ಪ ಮಾತನಾಡಿ, ಇಂದಿರಾಗಾಂಧಿ ಅವರ ಅನುಯಾಯಿಯಾಗಿದ್ದ ಡಿ. ದೇವರಾಜು ಅರಸು ದಕ್ಷ, ಪ್ರಾಮಾಣಿಕ ಆಡಳಿತಗಾರರಾಗಿ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದರು ಎಂದು ಹೇಳಿದರು.

ರಾಜಕೀಯದಲ್ಲಿ ಮೀಸಲಾತಿ ಜಾರಿಗೆ ತಂದಿದ್ದರಿಂದ ನನ್ನಂತಹ ಬಡ ವರ್ಗದ ವ್ಯಕ್ತಿ ಕೂಡ ಶಾಸಕನಾಗಲು ಸಾಧ್ಯವಾಯಿತು. ದೇವರಾಜ ಅರಸು ಅವರಂತೆ ದಕ್ಷ ಆಡಳಿತವನ್ನು ಸಿದ್ಧರಾಮಯ್ಯ ನಡೆಸುತ್ತಾ ಬರುತ್ತಿದ್ದಾರೆ. ಅರಸು ಹಾಗೂ ಸಿದ್ಧರಾಮಯ್ಯ ಎರಡು ಕಣ್ಣುಗಳಿದ್ದಂತೆ ಎಂದರು. ಉತ್ತಮ ಆಡಳಿತಗಾರರಾಗಿ ಎಸ್.ಸಿ, .ಎಸ್.ಟಿ ಹಾಗೂ ಹಿಂದುಳಿದ ವರ್ಗದ ಏಳಿಗೆಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರು. ಎಲ್ಲರೂ ಅವರ ಆದರ್ಶಗಳನ್ನು ಪಾಲಿಸಬೇಕೆಂದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ದೇವರಾಜ ಅರಸು ಅವರು ಅನುಷ್ಠಾನಕ್ಕೆ ತಂದ ಜನಪರ ಯೋಜನೆಗಳನ್ನು ಯಾರೂ ಮರೆಯುವಂತಿಲ್ಲ. ಆರ್ಥಿಕ ಸಮಾನತೆಯನ್ನು ತಂದವರು. ಭೂ ಸುಧಾರಣೆ, ಜೀತ ಪದ್ಧತಿ ನಿರ್ಮೂಲನೆ, ಸಮಸಮಾಜ ನಿರ್ಮಾಣಕ್ಕಾಗಿ ಅನೇಕ ಕಾನೂನುಗಳನ್ನು ಜಾರಿಗೆ ತಂದಿದ್ದರಿಂದ ರಾಜ್ಯದ ಎಲ್ಲ ವರ್ಗದವರಿಗೆ ಅನುಕೂಲವಾಗಿದೆ ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಮಲ್ಲಿಕಾರ್ಜುನ ಕಲಮರಳ್ಳಿ ಡಿ. ದೇವರಾಜ ಅರಸು ಕುರಿತು ಉಪನ್ಯಾಸ ನೀಡಿದರು.

ವಿವಿಧ ಸಮುದಾಯಗಳ ಮುಖಂಡರಾದ ಎಸ್. ಮಲ್ಲಿಕಾರ್ಜುನ್, ಕತ್ತಲಗೆರೆ ತಿಪ್ಪಣ್ಣ, ಏಕಾಂತಪ್ಪ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ವಿವಿಧ ಇಲಾಖೆ ಅಧಿಕಾರಿಗಳಾದ ನವೀನ್ ಮಠದ್, ನಾಗರಾಜ್, ಕೆ.ಹೆಚ್. ಗಾಯತ್ರಿ, ಜಿ. ಕೊಟ್ರೇಶ್, ಹುಲ್ಮನಿ ತಿಮ್ಮಣ್ಣ ಸೇರಿದಂತೆ ಅನೇಕರಿದ್ದರು.

## ಕುಮಾರಸ್ವಾಮಿ ವಿರುದ್ಧ ಎಸ್‌ಐಟಿ ತನಿಖೆಗೆ ಮನವಿ



**ಸಾಯಿ ವೆಂಕಟೇಶ್ವರ ಮಿನರಲ್ಸ್‌ನ ಅಕ್ರಮ ಗಣಿಗಾರಿಕೆಗೆ ಪ್ರಕರಣ: ತನಿಖೆಗೆ ರಾಜ್ಯಪಾಲರ ಅನುಮತಿ ಕೋರಲಾಗಿದೆ ಎಂದ ಸಿದ್ಧರಾಮಯ್ಯ**

ಬೆಂಗಳೂರು, ಆ. 20 - ಸಾಯಿ ವೆಂಕಟೇಶ್ವರ ಮಿನರಲ್ಸ್‌ನ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಎಸ್‌ಐಟಿ ತನಿಖೆ ನಡೆಸಲು ಅನುಮತಿ ನೀಡುವಂತೆ ಕೋರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಜುಲೈ ತಿಂಗಳಲ್ಲೇ ರಾಜ್ಯಪಾಲರ ಅನುಮತಿ ಕೋರಿತ್ತು. ಇದೀಗ ಎಸ್‌ಐಟಿ ಮತ್ತೆ ಅದೇ ಪ್ರಕರಣದಲ್ಲಿ ತನಿಖೆಗೆ ಅನುಮತಿ ನೀಡುವಂತೆ ರಾಜ್ಯಪಾಲರನ್ನು ಕೋರಿದೆ ಎಂದರು.

ಮುಡಾ ಪ್ರಕರಣಕ್ಕೆ (3ನೇ ಪುಟಕ್ಕೆ)

**ವಿದೇಶ ಪ್ರಯಾಣ - ಶುಭ ಹಾರೈಕೆ**

ದಿನಾಂಕ 21.8.2024ರ ಬುಧವಾರ ಉನ್ನತ ವಿದ್ಯಾಭ್ಯಾಸಕ್ಕಾಗಿ (M.S) ಬೆಂಗಳೂರಿನಿಂದ ಯುರೋಪ್ ದೇಶದ ಸ್ವೀಡನ್‌ಗೆ ತೆರಳುತ್ತಿರುವ ಶಾಮನೂರಿನ ಬಿಂದಪ್ಪ ಶ್ರೀಮತಿ ಗೀತಾ ಮತ್ತು ಶ್ರೀ ನಾಗರಾಜ್ ಬಿ. ಇವರ ಪುತ್ರ

**ಸಂಜಯ್ ಬಿ.ಎನ್.**

ಇವರ ಪ್ರಯಾಣ ಸುಖಕರವಾಗಿರಲೆಂದು ಹಾರೈಸುವ..



✣ ಬಿಂದಪ್ಪ ಸುನಂದಮ್ಮ ಮತ್ತು ಮಕ್ಕಳು
✣ ಬಿಂದಪ್ಪ ಚಿದಾನಂದಪ್ಪ ಮತ್ತು ಮಕ್ಕಳು
✣ ಬಿಂದಪ್ಪ ದಿ. ಬಿ. ದೇವೇಂದ್ರಪ್ಪನವರ ಮಕ್ಕಳು
✣ ಬಿಂದಪ್ಪ ದಿ. ಬಿ. ಸಿದ್ದಪ್ಪನವರ ಮಕ್ಕಳು
✣ ಬಿಂದಪ್ಪ ವಂಶಸ್ಥರು, ಶಾಮನೂರು.

## ವೈದ್ಯರ ಸುರಕ್ಷತೆಗೆ ಸಮಿತಿ ರಚನೆ

ನವದೆಹಲಿ, ಆ. 20 - ವೈದ್ಯರು ಹಾಗೂ ಆರೋಗ್ಯ ವಲಯದ ಇತರೆ ವೃತ್ತಿಪರರ ಸುರಕ್ಷತೆಗಾಗಿ ಮಾರ್ಗಸೂಚಿಗಳನ್ನು ರೂಪಿಸಲು ಸುಪ್ರೀಂ ಕೋರ್ಟ್ 10 ಸದಸ್ಯರ ಸಮಿತಿಯೊಂದನ್ನು ರಚಿಸಿದೆ.

ಪಶ್ಚಿಮ ಬಂಗಾಳದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದ ಸ್ವಯಂ ಪ್ರೇರಿತ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಆದೇಶ ಹೊರಡಿಸಿದೆ.

ಆಸ್ಪತ್ರೆಯಲ್ಲಿ ನಡೆದ ಘಟನೆ ಭಯಾನಕವಾಗಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಪ್ರಕರಣದ ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ ಹಾಗೂ ಸಾವಿರಾರು ದುಷ್ಕರ್ಮಿಗಳು ಸರ್ಕಾರಿ ಆಸ್ಪತ್ರೆ ಧ್ವಂಸಗೊಳಿಸಲು ಅವಕಾಶ ನೀಡಿದ್ದಕ್ಕಾಗಿ ಪಶ್ಚಿಮ ಬಂಗಾಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

**ಎಫ್.ಐ.ಆರ್. ವಿಳಂಬ, ಆಸ್ಪತ್ರೆ ಧ್ವಂಸ : ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತರಾಟೆ**

ಕೊಲ್ಕತಾ ಆಸ್ಪತ್ರೆಯಲ್ಲಿ ನಡೆದ ಘಟನೆಯ ನಂತರ ಕಾನೂನು ಸುವ್ಯವಸ್ಥೆ ಉಲ್ಲಂಘನೆ ಆಗುವುದನ್ನು ತಡೆಯಲು ರಾಜ್ಯ ಸರ್ಕಾರ ಕ್ರಮ (4ನೇ ಪುಟಕ್ಕೆ)


## ಕುರ್ಕಿಯ ಬಳಿ ನಾಲೆ ಸೇತುವೆ ಕುಸಿತ



ಮಾಯಕೊಂಡ, ಆ.20- ಸಮೀಪದ ಕುರ್ಕಿ ಗ್ರಾಮದ ಬಳಿ ಹರಿಯುತ್ತಿರುವ ಭದ್ರಾ ಕಾಲುವೆಯ ಮುಖ್ಯ ಕಾಲುವೆ ನಿಯಂತ್ರಕದ 3ನೇ ಸೇತುವೆ ಮಂಗಳವಾರ ಕುಸಿದು ಬಿದ್ದಿದೆ.

ಸೇತುವೆ ತೀರಾ ಹಳೆಯದಾಗಿದ್ದು, ಕಾಲಕಾಲಕ್ಕೆ ದುರಸ್ತಿ ಇಲ್ಲದೇ ಶಿಥಿಲಗೊಂಡಿತ್ತು. ಕಳೆದ ವಾರವಿಡೀ ಸುರಿದ ಧಾರಾಕಾರ ಮಳೆಯಿಂದ ನೀರು ಹರಿವಿನ ಪ್ರಮಾಣ ತೀವ್ರ ಹೆಚ್ಚಿದ್ದರಿಂದ ಸೇತುವೆ ಕುಸಿದಿದೆ. ಸೇತುವೆಯ ಮಧ್ಯದಲ್ಲಿ ಸುಮಾರು ಐದಾರು ಅಡಿ ಅಗಲ ಮಣ್ಣು ಕುಸಿದಿದೆ. ವಾಹನ ಸಂಚರಿಸಿದರೆ ಸಂಪೂರ್ಣ ಕುಸಿದು ಬೀಳಬಹುದೆಂದು ಗ್ರಾಮಸ್ಥರು ಸೇತುವೆಗೆ ಅಡ್ಡವಾಗಿ ಮಣ್ಣು ರಾಶಿಹಾಕಿ ಜನ (4ನೇ ಪುಟಕ್ಕೆ)

**ನಿಧನ**



ಜನನ 23.03.1958 ಮರಣ 20.08.2024

ದಾವಣಗೆರೆ ನಗರದ ನಿವಾಸಿ **ಮತ್ತೋಡ್ ಶಾಂತಪ್ಪ ಸುರೇಶ್ ಎಂ.ಎಸ್.** ಮಾಲೀಕರು, ಬನಶಂಕರಿ ಎಲೆಕ್ಟ್ರೀಕಲ್ಸ್ ದಾವಣಗೆರೆ ಇವರು ದಿ: 20.08.2024ರ ಮಂಗಳವಾರ ಸಂಜೆ 4ಕ್ಕೆ ಹೃದಯಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ತಂದೆ-ತಾಯಿ, ಸಹೋದರಿಯರು, ಸಹೋದರ ಹಾಗೂ ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳು, ಸಸ್ನೇತರನ್ನು ಅಗಲಿದ್ದಾರೆ.
ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ:21.08.2024ನೇ ಬುಧವಾರ ಮಧ್ಯಾಹ್ನ 2ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ "ಶ್ರೀ ವೈಕುಂಠಧಾಮ"ದಲ್ಲಿ ನೆರವೇರಿಸಲಾಗುವುದು.

ಸಂತಾಪ ಸೂಚಿಸುವವರು

**ಶ್ರೀ ಗೆಳೆಯರ ಬಳಗ, ದಾವಣಗೆರೆ.**
95353 35732, 98455 67666

**ಬಾಡಿಗೆಗೆ ದೊರೆಯುತ್ತವೆ**



ಕಮರ್ಶಿಯಲ್ (ವಾಣಿಜ್ಯ) ಮಳಿಗೆಗಳು / ಸಿಂಗಲ್ ಬಿ.ಹೆಚ್.ಕೆ. ಮನೆಗಳು / ಅಟ್ಯಾಚ್ ರೂಮ್‌ಗಳು ಬಾಡಿಗೆಗೆ ದೊರೆಯುತ್ತವೆ.

ದಾವಣಗೆರೆ ನಗರದ DCM ಬಡಾವಣೆ 60 ಅಡಿ ಮುಖ್ಯ ರಸ್ತೆಯ ಕಾರ್ನರ್ ಜಾಗದಲ್ಲಿ, ಸಿಟಿ ಬಸ್ ಸ್ಟಾಪ್ ಮತ್ತು ಸಾರ್ವಜನಿಕ ಶುದ್ಧ ಕುಡಿಯುವ ನೀರಿನ ಘಟಕ ಎದುರುಗಡೆ 12x20 / 24x20 / 32x20 ಅಡಿ ಅಳತೆಯ ಸುಸಜ್ಜಿತವಾದ ವಾಣಿಜ್ಯ ಮಳಿಗೆಗಳು/ ಕಮರ್ಷಿಯಲ್ ಶಾಪ್‌ಗಳು ಬಾಡಿಗೆಗೆ ದೊರೆಯುತ್ತವೆ, ಯುಟಿಲಿಟಿ ಸೌಲಭ್ಯವನ್ನು ಹೊಂದಿವೆ.

Suitable to establish Small Banks / ATM / e-lobby/ all kind of Show Rooms / Consultation office's / Doctor's clinic's / Medical laboratories / any kind of Commercial activities.

♦ One BHK House's (suitable for any kind of consulting office's) available in Ground floor
♦ Attach rooms are available in Second floor

House's and attach room's for vegetarian only

Manjunath, ಮೊ : 82175 88730

# ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಆದರ್ಶಗಳು ಯುವ ಪೀಳಿಗೆಗೆ ತಲುಪಲಿ



### ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ಬಿ.ದೇವೇಂದ್ರಪ್ಪ ಆಶಯ

ಜಗಳೂರು, ಆ. 20 - ಸಾಮಾಜಿಕ ನ್ಯಾಯಕ್ಕೆ ಅಡಿಪಾಯ ಹಾಕಿದ ದೂರದೃಷ್ಟಿಯ ನಾಯಕ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ದೇವರಾಜ ಅರಸು ಅವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾಜಿಕ ಸ್ಥಿರದಲ್ಲಿ ಶೋಷಿತ ಮತ್ತು ಮೇಲ್ವರ್ಗದವರ ಮಧ್ಯೆ ಅಸಮಾನತೆ, ಶೋಷಣೆ, ಅಸ್ಪೃಶ್ಯತೆ ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ ಅಂಬೇಡ್ಕರ್ ಸಂವಿಧಾನದ ಆಶಯದಂತೆ ಶೋಷಿತ, ಹಿಂದುಳಿದ ವರ್ಗದವರಿಗೆ ಸಮಾನತೆ, ಮೀಸಲಾತಿ ಒದಗಿಸಿದ ಧೀಮಂತ ರಾಜಕಾರಣಿ ದೇವರಾಜ್ ಅರಸು ಅವರ ಕೊಡುಗೆಯನ್ನು ಭಾಷಣದಲ್ಲಿ ಆಲಿಸಿ ಮರೆತರೆ ಪ್ರಯೋಜನವಿಲ್ಲ.ಪ್ರತಿನಿತ್ಯ ಸ್ಮೃತಿ ಪಟಲದಲ್ಲಿ ಪುನರಾವರ್ತನೆಗೊಳ್ಳಬೇಕಿದೆ ಎಂದರು.

ಕಳೆದ 50 ವರ್ಷಗಳ ಹಿಂದೆ ತಾಲ್ಲೂಕಿನಲ್ಲಿ ಜೀವಂತವಾಗಿದ್ದ ಮನುಕುಲವೇ ತಲೆತಗ್ಗಿಸುವಂತಹ ದಲಿತರು ಮಲಹೋರುವ ಪದ್ದತಿಯನ್ನು ನಾನು ಬಾಲ್ಯಾವಸ್ಥೆಯಲ್ಲಿ ಕಣ್ಣಾರೆ ಕಂಡಿರುವೆ. ಇಂತಹ ಅನಿಷ್ಠ ಪದ್ದತಿ ನಿಷೇಧಗೊಳಿಸಿದ ದೇವರಾಜ ಅರಸು ಅವರ ಆಡಳಿತ ವೈಖರಿಯನ್ನು ಮನಗಂಡು ಪ್ರಸಕ್ತ ಸ್ಪರ್ಧಾತ್ಮಕ ಜಗತ್ತಿನಲ್ಲಿ ದಲಿತ, ಹಿಂದುಳಿದ ಸಮುದಾಯಗಳು ಜಾಗೃತರಾಗಿ ಮೀಸಲಾತಿ ಸದುಪಯೋಗ ಪಡೆದುಕೊಂಡು ಭವಿಷ್ಯರೂಪಿಸಿ ಕೊಳ್ಳಬೇಕು ಎಂದು ಕರೆ ನೀಡಿದರು.

ಖಡ್ಗಕ್ಕಿಂತ ಲೇಖನಿ ಹರಿತವಾದದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದಡಿ ಲೇಖನಿಯಿಂದ ಗುರಿ ಸಾಧಿಸಬೇಕಿದೆ. ಬಡತನದಲ್ಲಿ ಜನಿಸಿದ ನಾನು ಪ್ರೌಢಹಂತದಲ್ಲಿರುವಾಗಲೇ ಕಷ್ಟಅನುಭವಿಸಿದೆ. ಖಡ್ಗಕ್ಕಿಂತ ಹರಿತವಾದ ಲೇಖನಿ ನನ್ನನ್ನು ಶಾಸಕನನ್ನಾಗಿ ಆಯ್ಕೆಗೊಳಿಸಿತು ಎಂದು ಮಾರ್ಮಿಕವಾಗಿ ನುಡಿದರು.

**ಜಗಳೂರು ಉತ್ಸವ ಆಚರಣೆ :** ಐತಿಹಾಸಿಕ ಜಗಳೂರು ಕೆರೆ 50 ವರ್ಷದ ಹಿಂದೆ ಕೋಡಿ ಬಿದ್ದಿದ್ದ ನೆನಪಿದೆ. ಇದೀಗ ಕೋಡಿ ಬೀಳುವ ಹಂತದಲ್ಲಿದೆ. ಕೋಡಿ ಬಿದ್ದ ನಂತರ ಸ್ಮರಣೆಗಾಗಿ ಜಗಳೂರು ಉತ್ಸವ ಆಚರಿಸಲಾಗುವುದು ಎಂದರು.

ವಕೀಲ ಹಾಗೂ ಪತ್ರಕರ್ತ ಡಿ.ಶ್ರೀನಿವಾಸ್ ಉಪನ್ಯಾಸ ನೀಡಿ, ಮೈಸೂರು ಜಿಲ್ಲೆಯ ಕುಗ್ರಾಮದಲ್ಲಿ ಜನಿಸಿದ ದೇವರಾಜ ಅರಸು ಅವರು ಮೈಸೂರು ಅರಸರ ಸಂಬಂಧಿಗಳಾಗಿದ್ದರೂ ಕೂಡ ವೈಭೋಗದ ಜೀವನ ಸಾಗಿಸದೆ ಸರಳ, ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡವರು ಜಾತ್ಯತೀತ, ನಿಷ್ಪಕ್ಷಪಾತ ಸೇವೆಯನ್ನು ಗುರುತಿಸಿ ಅವಿರೋಧವಾಗಿ ಶಾಸಕರಾಗಿ ಆಯ್ಕೆಯಾದರು.ನಂತರ ಎರಡು ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಮುತ್ಸದ್ದಿ ರಾಜಕಾರಣಿ ಎಂದು ಪ್ರಶಂಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸಯ್ಯದ್ ಕಲೀಂ ಉಲ್ಲಾ, ತಾ.ಪಂ. ಇಒ ಕೆಂಚಪ್ಪ, ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮರೇನಹಳ್ಳಿ ಬಸವರಾಜ್, ಪ.ಪಂ.ಸದಸ್ಯರಾದ ರಮೇಶ್ ರೆಡ್ಡಿ, ಲಲಿತ ಶಿವಣ್ಣ, ನಿರ್ಮಲಕುಮಾರಿ, ಲುಕ್ಮಾನ್ ಖಾನ್, ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಬಡಯ್ಯ, ಮುಖಂಡರಾದ ಬಿ.ಮಹೇಶ್ವರಪ್ಪ, ಪಲ್ಲಾ ಗಟ್ಟೆ ಶೇಖರಪ್ಪ, ಸಿ.ತಿಪ್ಪೇಸ್ವಾಮಿ, ಶಂಭುಲಿಂಗಪ್ಪ, ಕುಬೇಂದ್ರಪ್ಪ, ಇಂದಿರಾ, ಹಿಂದುಳಿದ ವರ್ಗಗಳಕಲ್ಯಾಣ ಅಧಿಕಾರಿ ಶಿವಬಸಪ್ಪ ಬಳ್ಳಾರಿ, ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಪೋಲೀಸ್ ನಿರೀಕ್ಷಕ ಶ್ರೀನಿವಾಸ್ ರಾವ್ ಉಪಸ್ಥಿತರಿದ್ದರು.

# ಹಸಿ ಅಡಿಕೆ ಮಾರುಕಟ್ಟೆ ಆರಂಭಕ್ಕೆ ಚಿಂತನೆ

### ಮಲೇಬೆನ್ನೂರಿನ ಶಿವ ಸಹಕಾರ ಸಂಘದಲ್ಲಿ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್



ಮಲೇಬೆನ್ನೂರು, ಆ.20- ಹರಿಹರ ಬೈಪಾಸ್ ಅಥವಾ ಮಲೇಬೆನ್ನೂರಿನಲ್ಲಿ ರೈತರ ಸಹಕಾರ ಸಂಘದ ಮೂಲಕ ಹಸಿ ಅಡಿಕೆ ಮಾರುಕಟ್ಟೆ ಆರಂಭಿಸುವ ಉದ್ದೇಶ ಇದೆ ಎಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್ ಹೇಳಿದರು.

ಇಲ್ಲಿನ ಶಿವ ವಿವಿದೋದ್ದೇಶ ಸಹಕಾರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಚನ್ನಗಿರಿ, ಹೊನ್ನಾಳಿ ನಂತರ ಹರಿಹರ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಡಿಕೆ ಬೆಳೆಗಾರರಿದ್ದು, ಅಡಿಕೆ ಬೆಳೆಗಾರರಿಗೆ ಸೂಕ್ತ ಮಾರುಕಟ್ಟೆಯನ್ನು ಹರಿಹರ ತಾಲ್ಲೂಕಿನಲ್ಲಿಯೇ ಕಲ್ಪಿಸುವ ಉದ್ದೇಶವಿದೆ.

ಈ ನಿಟ್ಟಿನಲ್ಲಿ ಶೀಘ್ರದಲ್ಲಿಯೇ ಅಡಿಕೆ ಬೆಳೆಗಾರರ ಸಭೆ ಕರೆದು ಚರ್ಚಿಸುವುದಾಗಿ ತಿಳಿಸಿದ ಹನಗವಾಡಿ ಕುಮಾರ್ ಅವರು, ಹೊಳೆಸಿರಿಗೆರೆಯಲ್ಲಿ ನಿರ್ಮಿಸುತ್ತಿರುವ ಶಿವ ವಿವಿಧೋದ್ದೇಶ ಸಹಕಾರ ಸಂಘದ ಶಾಖಾ ಕಟ್ಟಡಕ್ಕೆ ಅಗತ್ಯ ಸೌಲಭ್ಯವನ್ನು ಅಪೆಕ್ಸ್ ಬ್ಯಾಂಕಿನ ಅನುದಾನದಲ್ಲಿ ಕಲ್ಪಿಸುವುದಾಗಿ ಭರವಸೆ ನೀಡಿ, ಸಂಘದ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ನಿರ್ದೇಶಕ ಹೆಚ್.ಜಿ. ಚಂದ್ರಶೇಖರ್, ನಿಟ್ಟೂರಿನ ಬಿ.ಜಿ. ಧನಂಜಯ್ ಮಾತನಾಡಿ, ಅವಕಾಶ ಇದ್ದರೆ ನಮ್ಮ ಶಿವ ಸಹಕಾರ ಸಂಘದಿಂದಲೇ ಹಸಿ ಅಡಿಕೆ ಮಾರುಕಟ್ಟೆ ಮಾಡಲು ಸಹಕಾರ ನೀಡಿ ಎಂದು ಹನಗವಾಡಿ ಕುಮಾರ್ ಅವರಿಗೆ ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಡಾ. ಬಿ.ಚಂದ್ರಶೇಖರ್ ಮಾತನಾಡಿ, ಹನಗವಾಡಿ ಕುಮಾರ್ ಅವರು, ಹರಿಹರ ತಾಲ್ಲೂಕಿನಲ್ಲಿ ಎಲ್ಲಾ ಸಹಕಾರ ಸಂಘಗಳ ಏಳಿಗೆಗೆ ಶ್ರಮಿಸಲಿ ಮತ್ತು ರೈತರಿಗೆ ಹೆಚ್ಚುವರಿ ಸಾಲ ಸೌಲಭ್ಯ ಕಲ್ಪಿಸಲಿ ಎಂದರು.

ಸಂಘದ ಉಪಾಧ್ಯಕ್ಷ ಯಲವಟ್ಟಿ ಆಂಜನೇಯ, ನಿರ್ದೇಶಕರಾದ ಕರೇಗೌಡ್ರ ರಂಗನಾಥ್, ಕುಂಬಳೂರಿನ ಹೆಚ್.ಬಿ. ಶಿವಕುಮಾರ್, ಹುಲ್ಲುಮನಿ ಷಣ್ಮುಖಪ್ಪ, ಬೆಳ್ಳೂಡಿಯ ಗೌಡ್ರ ರವಿಶಂಕರ್, ಎ.ಕೆ. ದೇವೇಂದ್ರಪ್ಪ, ಜಿಗಳಿ ಪ್ರಕಾಶ್, ಕೊಕ್ಕನೂರಿನ ಜಿ.ಡಿ.ರಮೇಶ್, ಸಿರಿಗೆರೆಯ ಬಿ.ಶೇಖರಪ್ಪ, ಪಾನಿಪೂರಿ ಸಿದ್ದೇಶ್, ಶ್ರೀಮತಿ ನಾಗರತ್ನ ಧನಂಜಯ, ಕಾರ್ಯದರ್ಶಿ ಜಿ.ಎಂ.ನಳಿನಾ ಮತ್ತು ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾರರು ಈ ವೇಳೆ ಹಾಜರಿದ್ದರು.

## ಜಿಟಿಟಿಸಿ ತರಬೇತಿಗೆ ಅರ್ಜಿ ಆಹ್ವಾನ

**ಹರಿಹರ**

ಹರಿಹರ, ಆ. 20 - ಹರಿಹರ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಲ್ಲಾ ವರ್ಗದ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗಾವಕಾಶದ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿಗಳು ನಡೆಯಲಿವೆ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ, ಬಿ.ಇ ಮತ್ತು ಯಾವುದೇ ಪದವಿ ಪಾಸಾದ ಅಭ್ಯರ್ಥಿಗಳಿಗೆ ವಿವಿಧ ಕೋರ್ಸ್‌ಗಳಿಗೆ ಅಲ್ಪಾವಧಿ ತರಬೇತಿಗಳನ್ನು ನೀಡಲಾಗುವುದು.


ಅರ್ಜಿ ಸಲ್ಲಿಸಲು ಇದೇ ದಿನಾಂಕ 23 ರಂದು ಕೊನೆ ದಿನವಾಗಿದೆ. ವಿವರಗಳಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, 22ಸಿ ಮತ್ತು ಡಿ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ ಹರ್ಲಾಪುರ, ಕೆ.ಎಸ್.ಆರ್.ಟಿ.ಸಿ. ಡಿಪೋ ಹತ್ತಿರ ಹರಿಹರ ಅಥವಾ ದೂ.ಸಂ. 90353 72971, 96110 25932, 88844 88202, 91643 69670ಗೆ ಸಂಪರ್ಕಿಸಬಹುದು.

## ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಆ.20- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಇದೇ ದಿನಾಂಕ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

## ಪ್ರೊ. ಎಸ್.ಬಿ.ರಂಗನಾಥ್ ನಿಧನಕ್ಕೆ ಚನ್ನಗಿರಿ ಕಸಾಪ ಸಂತಾಪ



ಚನ್ನಗಿರಿ, ಆ. 20- ಚನ್ನಗಿರಿ ತಾಲ್ಲೂಕಿನ ಸಿದ್ದನಮಠ ಗ್ರಾಮದ ಪ್ರೊ.ಎಸ್.ಬಿ.ರಂಗನಾಥ್ ನಿಧನದ ಪ್ರಯುಕ್ತ ಚನ್ನಗಿರಿ ಕಸಾಪ ವತಿಯಿಂದ ಸಂತಾಪ ಸೂಚಿಸಲಾಯಿತು.

ರಂಗನಾಥ್ ನಿಧನದಿಂದ ಸಾಹಿತ್ಯ ಲೋಕಕ್ಕೆ ನಷ್ಟವಾಗಿದ್ದು, ಚನ್ನಗಿರಿ ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್ , ತಾಲ್ಲೂಕು ಕಸಾಪ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಎಂ.ಎಸ್.ಬಸವನಗೌಡ , ಪ್ರಭಾಕರ್ ಹೊದಿಗೆರೆ, ಬಿ.ಇ. ಸಿದ್ದಪ್ಪ ,ಎಂ.ಯು.ಚನ್ನಬಸಪ್ಪ, ಬಾ.ರಾ. ಮಹೇಶಣ್ಣ, ಜಿ.ಚಿನ್ನಸ್ವಾಮಿ, ಗುಳ್ಳೆಹಳ್ಳಿ ಮಲ್ಲಿಕಣ್ಣ, ನಲ್ಲೂರು ಮಂಜಪ್ಪ ಟಿ.ವಿ. ಚಂದ್ರಪ್ಪ, ಮಲಹಾಳ್ ತಿಪ್ಪೇಶ್, ಜಗದೀಶ್ ಗೌಡ್ರು, ಪ್ರೇಮ್‌ಚಂದ್, ಮಾದೇನಹಳ್ಳಿ ಓಂಕಾರ ಮೂರ್ತಿ, ಸುವರ್ಣಮ್ಮ ಸ್ವಾಮಿ, ಕುಸುಮ ಡಾ.ರಂಗಪ್ಪ, ಹನುಮಂತರಾಯಪ್ಪ, ಅಬು ಸಾತೀಹ, ಕಂಚಿಗನಾಳ್ ಮಂಜಣ್ಣ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

## ಸುಂಟರಗಾಳಿ ಸಮೇತ ಸುರಿದ ಮಳೆಗೆ ಬೆಳೆ, ಮನೆಗಳಿಗೆ ಹಾನಿ

**ಹೊನ್ನಾಳಿ**

ಹೊನ್ನಾಳಿ, ಆ. 20 - ನಿನ್ನೆ ಸುರಿದ ಸುಂಟರಗಾಳಿ ಸಮೇತ ಭಾರೀ ಮಳೆಗೆ ಹೊನ್ನಾಳಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಬೆಳೆ ಹಾನಿಯುಂಟಾಗಿದೆ ಎಂದು ತಹಶೀಲ್ದಾರ್ ಪಟ್ಟರಾಜೇಗೌಡ ತಿಳಿಸಿದರು.

ಬೆಳೆ ಹಾನಿಯುಂಟಾದ ಪ್ರದೇಶಗಳಿಗೆ ಅಧಿಕಾರಿಗಳ ಜಂಟಿ ತಂಡದೊಂದಿಗೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಕೃಷಿ ಮತ್ತು ತೋಟಗಾರಿಕೆ ಮತ್ತು ಕಂದಾಯ ಇಲಾಖಾ ಅಧಿಕಾರಿಗಳಿಗೆ ಬೆಳೆ ಹಾನಿಯ ಬಗ್ಗೆ ವರದಿ ನೀಡಲು ಸೂಚಿಸಲಾಗಿದ್ದು, ವರದಿ ಕೈ ಸೇರಿದ ತಕ್ಷಣವೇ ಹಾನಿಯುಂಟಾದ ರೈತರಿಗೆ ಬೆಳೆ ಪರಿಹಾರ ನೀಡಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಉಜ್ಜಿನಪುರ ಗ್ರಾಮದ ಲಕ್ಷ್ಮಿಬಾಯಿ ಅವರ ಮನೆ ಸಂಪೂರ್ಣ ಹಾಳಾಗಿದ್ದು, ಹಿರೇಗೋಣಿಗೆರೆ ಗ್ರಾಮದ ರಘು ಅವರ ಮನೆಯು ಭಾಗಶಃ ಹಾನಿಯಾಗಿದ್ದು, ಯಾವುದೇ ಜೀವ ಹಾನಿ ಸಂಭವಿಸಿರುವುದಿಲ್ಲ ಎಂದು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕರಾದ ಪ್ರತಿಮಾ ಮಾಸಡಿ ಗ್ರಾಮದಲ್ಲಿ 30 ಹೆಕ್ಟೇರ್, ಹಿರೇಬಾಸೂರು ಗ್ರಾಮದಲ್ಲಿ 2 ಹೆಕ್ಟೇರ್, ಹಿರೇಗೋಣಿಗೆರೆ ಗ್ರಾಮದಲ್ಲಿ 5 ಹೆಕ್ಟೇರ್ ಮೆಕ್ಕೆಜೋಳದ ಬೆಳೆಯು ಹಾಳಾಗಿದೆ ಎಂದು ಮಾಹಿತಿ ನೀಡಿದರು.

ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರಾದ ರೇಖಾ ಮಳೆಯ ಜೊತೆಗೆ ಭೀಕರ ಸುಂಟರಗಾಳಿ ಬೀಸಿದ್ದರಿಂದ ಮಾಸಡಿ ಗ್ರಾಮದಲ್ಲಿ 6 ಹೆಕ್ಟೇರ್ ಅಡಿಕೆ, 1 ಎಕರೆ ತೆಂಗಿನ ಬೆಳೆ ಹಾಳಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಅಧಿಕಾರಿ ಅತೀಕ್ ಉಲ್ಲಾ, ರಾಜಸ್ವ ನಿರೀಕ್ಷಕರಾದ ದಿನೇಶ್ ಬಾಬು, ಕೆ.ಎಸ್. ಸುಧೀರ್, ರಮೇಶ್, ಗ್ರಾಮ ಆಡಳಿತಾಧಿಕಾರಿ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.



## ಹರಿಹರ : ಸಮಾಜಮುಖಿ ಸೇವೆಯಾಗಿ ಧರ್ಮಸ್ಥಳದ ಸಿರಿಧಾನ್ಯ



ಹರಿಹರ, ಆ. 20 - ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಡಾ ವೀರೇಂದ್ರ ಹೆಗ್ಗಡೆಯವರು ಸಿರಿಧಾನ್ಯಗಳಿಗೆ ಪ್ರೋತ್ಸಾಹ ನೀಡುವ ಮೂಲಕ ರೈತರಿಗೆ ಹಾಗೂ ಸಮಾಜಕ್ಕೆ ಅನುಕೂಲ ಆಗುವಂತೆ ಸಮಾಜ ಸೇವೆಯ ನೆಲೆಯಲ್ಲಿ ಈ ಯೋಜನೆ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಸ್ಥಳೀಯ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಸ್ವಾಮೀಜಿ ಹೇಳಿದರು.

ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಶ್ರೀ ಧರ್ಮಸ್ಥಳ ಸಿರಿ ಮಿಲೆಟ್ ಹೌಸ್ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿದ್ದ ಧರ್ಮಸ್ಥ ಗ್ರಾಮಾಭಿವೃದ್ಧಿ ಯೋಜನೆಯ ಸಿರಿಧಾನ್ಯ ಕಾರ್ಯಕ್ರಮ ನಿರ್ದೇಶಕ ಎಂ.ದಿನೇಶ್ ಮಾತನಾಡಿ, ಸಿರಿಧಾನ್ಯ ಆಹಾರಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆ ಇದ್ದು, ಮಾತೃಶ್ರೀ ಡಾ ಹೇಮಾವತಿ ಅಮ್ಮನವರ ಅಧ್ಯಕ್ಷತೆಯ ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಪೌಷ್ಠಿಕ ಆಹಾರಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಸಿರಿಧಾನ್ಯ ಬೆಳೆ ರೈತರಲ್ಲಿ ಸಂಘಟನೆ, ಸಿರಿಧಾನ್ಯಗಳ ಸಂಸ್ಕರಣೆ, ಸಿರಿಧಾನ್ಯ ಆಹಾರ ಸಂಶೋಧನಾಲಯ, ಸಿರಿಧಾನ್ಯ ಮೌಲ್ಯವರ್ಧನೆ, ಸಿರಿಧಾನ್ಯ ಆರೋಗ್ಯ ವರ್ಧಕ ಆಹಾರಗಳ ಬಿಡುಗಡೆ ಇತ್ಯಾದಿಗಳ ಮೂಲಕ ಮಾದರಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದರು.

ಪಂಚಮಸಾಲಿ ಪೀಠದ ಧರ್ಮ ದರ್ಶಿ ಚಂದ್ರಶೇಖರ್ ಪೂಜಾರ್ ಮಾತನಾಡಿ ಸಮಾಜಕ್ಕೆ ಪೌಷ್ಟಿಕ ಆಹಾರಗಳನ್ನು ಒದಗಿಸುವುದೇ ಈ ಸಿರಿ ಮಿಲೆಟ್ ಹೌಸ್ ಉದ್ದೇಶ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹೊನ್ನಾಳಿ ಬಾಬಣ್ಣ, ಯೋಜನಾಧಿಕಾರಿ ಶ್ರೀಮತಿ ನಂದಿನಿ ಶೇಟ್, ಯೋಜನೆಯ ಕೃಷಿ ಅಧಿಕಾರಿ ರಮೇಶ್ ಮತ್ತು ಇತರರು ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟದ ಹೊಯ್ಸಳ, ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 20 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ನಾವೀನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 5 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಹಾಗೂ 10,000 ನಗದು ಬಹುಮಾನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾಗುವ ಮಕ್ಕಳು ಅಪ್ರತಿಮ ಪ್ರತಿಭೆಯುಳ್ಳವರಾಗಿರ ಬೇಕು, ಸಾಧನೆ ಅಸಾಧಾರಣವೆಂದು ಸಮರ್ಥಿಸಲು ಪೂರಕ ದಾಖಲೆಗಳನ್ನು ಸೆಪ್ಟೆಂಬರ್ 18 ರ ಒಳಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಉಪನಿರ್ದೇಶಕರ ಕಚೇರಿ, ಸರ್ಕಾರಿ ಬಾಲಕರ ಬಾಲಮಂದಿರ ಆವರಣ, ಎಂ.ಸಿ.ಸಿ. 'ಬಿ' ಬ್ಲಾಕ್ ಕುವೆಂಪು ನಗರ ದಾವಣಗೆರೆ ಇಲ್ಲಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ 08192-264056 ಸಂಖ್ಯೆಗೆ ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್ ತಿಳಿಸಿದ್ದಾರೆ.

## ಕಲ್ಯಾಣವೃಷ್ಟಿ ಮಹಾಭಿಯಾನ

(1ನೇ ಪುಟದಿಂದ) ಪುಣ್ಯ, ಫಲಗಳನ್ನು ನೀಡುತ್ತವೆ ಎನ್ನಲಾಗಿದೆ.

ಕಲ್ಯಾಣವೃಷ್ಟಿಸ್ತವದಲ್ಲಿ ಶ್ರೀವಿದ್ಯಾ ಪಂಚದಶಾಕ್ಷರೀ ಮಹಾಮಂತ್ರದ ಅಕ್ಷರಗಳಿಂದ ಪ್ರತಿ ಶ್ಲೋಕವೂ ಪ್ರಾರಂಭ ವಾಗುತ್ತದೆ. ಜಗನ್ಮಾತೆಯನ್ನು ಸ್ತುತಿಸುವ ಈ ಸ್ತೋತ್ರವು ಕಲ್ಯಾಣವೃಷ್ಟಿಯನ್ನು ಸುರಿಸಬಲ್ಲದು.

ಲಕ್ಷ್ಮೀನೃಸಿಂಹಸ್ವಾಮಿ ಯನ್ನು ಸ್ತುತಿಸುವ ಕರಾವಲಂಬಸ್ತೋತ್ರವು ಸಂಸಾರ ದುಃಖವನ್ನು ದಾಟಿಸುತ್ತದೆ. ಪ್ರತಿ ಶ್ಲೋಕದ ನಾಲ್ಕು ಪಂಕ್ತಿಗಳಲ್ಲಿ ಶಿವಪಂಚಾಕ್ಷರೀ ಮಂತ್ರವನ್ನು ಹೊಂದಿರುವ ಶಿವಪಂಚಾಕ್ಷರ ನಕ್ಷತ್ರಮಾಲಾಸ್ತೋತ್ರದಲ್ಲಿ 108 ಬಾರಿ ಶಿವಪಂಚಾಕ್ಷರೀ ಮಂತ್ರವನ್ನು ಉಲ್ಲೇಖಿಸಿ, ಸರಳವಾಗಿ ಶಿವತತ್ತ್ವವನ್ನು ಆಚಾ ರ್ಯರು ಉಪದೇಶಿಸಿದ್ದಾರೆ.

ಈ ಮಂತ್ರದ ಉಚ್ಚಾರಣೆಯಿಂದ ಸಾಧಕನ ಮನೋಭೀಷ್ಟೆಗಳು ನೆರವೇರುತ್ತವೆ ಎನ್ನಲಾಗಿದೆ.

## ಹರಿಹರದಲ್ಲಿಂದು ರಾಯರ ಆರಾಧನೆ

ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದಲ್ಲಿ ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವ ಇಂದು ಮತ್ತು ನಾಳೆ ನಡೆಯಲಿದೆ.


ಇಂದು ಬೆಳಿಗ್ಗೆ 8ಕ್ಕೆ ಫಲ, ಪುಷ್ಪಾದಿಗಳ ಮೆರವಣಿಗೆ ಹಾಗೂ ಗುರುಗಳಿಗೆ ಫಲ-ಪಂಚಾಮೃತ ಅಭಿಷೇಕ, 9.30ರಿಂದ ರಾಯರ ಕನಕಾಭಿಷೇಕ ಮತ್ತು ತುಲಾಭಾರ, ಪಲ್ಲಕ್ಕಿ ಉತ್ಸವ, ಬೆಳ್ಳಿ ರಥೋತ್ಸವ ಹಾಗೂ ಪವಮಾನ ಹೋಮ ನಡೆಯಲಿದೆ.

ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಸಮುದಾಯ ಭವನದಲ್ಲಿ ವಿಶೇಷ ದೀಪಾಲಂಕಾರ ಸೇವೆ, ರಾತ್ರಿ 8ಕ್ಕೆ ಮಹಾಮಂಗಳಾರತಿ ನಡೆಯಲಿದೆ.

## ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಪದವಿ ವಿದ್ಯಾರ್ಥಿಗಳಿಂದ ಅರ್ಜಿ

ದಾವಣಗೆರೆ, ಆ.20- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಸಾಮಾನ್ಯ ಪದವಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 4 ಕೊನೆ ದಿನವಾಗಿದೆ. ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ, ಪ್ರವೇಶಕ್ಕೆ ಇರಬೇಕಾದ ಅರ್ಹತೆ ಹಾಗೂ ಸಲ್ಲಿಸಬೇಕಾದ ದಾಖಲೆಗಳ ವಿವರವನ್ನು https://bcwd.karnataka.gov.in ಇಲ್ಲಿ ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ-ಮೇಲ್ ಮೂಲಕ ಅಥವಾ ಇಲಾಖೆಯ ಜಿಲ್ಲೆ ಹಾಗೂ ತಾಲ್ಲೂಕು ಅಧಿಕಾರಿಗಳನ್ನು ಸಂಪರ್ಕಿಸಬಹುದು. ವಿವರಕ್ಕೆ ಸಂಪರ್ಕಿಸಿ : 8050770004, 8050770005.

## 23ರಂದು ನಗರದಲ್ಲಿ ಸಿದ್ಧ ಕಣ್ಣಿನ ಹನಿ



ದಾವಣಗೆರೆ, ಆ. 20- ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 23 ರ ಶುಕ್ರವಾರ ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿಯಾಲ-ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ. ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಮಹಾರಾಷ್ಟ್ರ : ಬಾಲಕಿಯರ ಮೇಲೆ ಲೈಂಗಿಕ ಹಲ್ಲೆ ಆರೋಪ

**ಶಾಲಾ ಕಟ್ಟಡ ಧ್ವಂಸ, ರೈಲು ತಡೆ, ಕಲ್ಲು ತೂರಾಟ**

ಮುಂಬೈ, ಆ. 20 - ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಬದ್ಲಾಪುರ ಶಾಲೆಯಲ್ಲಿ ನಾಲ್ಕು ವರ್ಷದ ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ಹಲ್ಲೆ ನಡೆದಿದೆ ಎಂದು ಆರೋಪಿಸಿ ಸಾವಿರಾರು ಜನರು ಪ್ರತಿಭಟನೆ ನಡೆಸಿದ್ದಾರೆ. ಶಾಲಾ ಕಟ್ಟಡವನ್ನು ಧ್ವಂಸಗೊಳಿಸಿದ ಜನರು, ನಂತರ ರೈಲ್ವೆ ಹಳಿಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು. ಈ ಬಗ್ಗೆ ತನಿಖೆ ನಡೆಸಲು ಹಿರಿಯ ಐಪಿಎಸ್ ಅಧಿಕಾರಿ ಆರತಿ ಸಿಂಗ್ ನೇತೃತ್ವದ ವಿಶೇಷ ತಂಡ ರಚಿಸಲಾಗುವುದು ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ. ಶಾಲೆಯ ಉದ್ಯೋಗಿ ಈ ಕೃತ್ಯ ಎಸಗಿದ್ದು, ಆತನಿಗೆ ಮರಣ ದಂಡನೆ ವಿಧಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಘಟನೆಯ ಹಿನ್ನೆಲೆಯಲ್ಲಿ ಬದ್ಲಾಪುರ ಶಾಲೆಗೆ ನೋಟಿಸ್ ಕಳಿಸಲಾಗಿದೆ. ಅದರ ಪ್ರಾಂಶುಪಾಲ, ಶಿಕ್ಷಕರು ಹಾಗೂ ಇಬ್ಬರು ಸಹಾಯಕರನ್ನು ಅಮಾನತ್ತುಗೊಳಿಸಲಾಗಿದೆ.

ಕಳೆದ ಆಗಸ್ಟ್ 17ರಂದು ಈ ಬಗ್ಗೆ ದೂರು ದಾಖಲಿಸಲಾಗಿತ್ತು. ನಂತರ ಶಾಲೆಯ ಉದ್ಯೋಗಿಯನ್ನು ಬಂಧಿಸಲಾಗಿತ್ತು. ಈ ಪ್ರಕರಣದ ತನಿಖೆಯಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಮೂವರು ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ.

## ಚಂದ್ರಯಾನಗಳ ವಿನ್ಯಾಸ ಸಿದ್ಧ : ಇಸ್ರೋ

(1ನೇ ಪುಟದಿಂದ) ಮುಂದಿನ ಐದು ವರ್ಷಗಳಲ್ಲಿ 70 ಉಪಗ್ರಹಗಳ ಉಡಾವಣೆಯ ಗುರಿ ಇದೆ. ವಿವಿಧ ಸಚಿವಾಲಯಗಳು ಹಾಗೂ ಇಲಾಖೆಗಳ ಅಗತ್ಯಗಳಿಗೆ ಅನುಗುಣವಾದ ತಳ ಭೂಕಕ್ಷೆಯ ಉಪಗ್ರಹಗಳು ಇದರಲ್ಲಿ ಸೇರಿವೆ ಎಂದೂ ಸೋಮನಾಥ್ ಹೇಳಿದರು.

## ಕಾಂ. ಆನಂದರಾಜ್ ನಿಧನಕ್ಕೆ ಕಮ್ಯುನಿಸ್ಟ್ ಪಕ್ಷದ ಶ್ರದ್ಧಾಂಜಲಿ



ದಾವಣಗೆರೆ, ಆ. 20 -ಹಿರಿಯ ಕಾರ್ಮಿಕ ನಾಯಕರೂ, ಸಿಪಿಐ ಮತ್ತು ಎಐಟಿಯುಸಿ ಜಿಲ್ಲಾ ಸಮಿತಿ ಖಜಾಂಚಿಯೂ ಆಗಿದ್ದ ಕಾಂ. ಆನಂದರಾಜ್ ಅವರ ನಿಧನಕ್ಕೆ ಸಿಪಿಐ ಮತ್ತು ಎಐಟಿಯುಸಿ ಜಿಲ್ಲಾ ಸಮಿತಿಯಿಂದ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.


ನಗರದ ಕಾಂ. ಪಂಪಾಪತಿ ಭವನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಎಚ್. ಅರುಣಕುಮಾರ್, ಜೀವನದುದ್ದಕ್ಕೂ ಸಿದ್ಧಾಂತದಿಂದ ವಿಮುಖರಾಗದೆ ಕಮ್ಯುನಿಸ್ಟ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿದ್ದ ಆನಂದರಾಜ್ ಅವರ ಅಕಾಲಿಕ ನಿಧನ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ, ಅವರ ನೇರ ಮತ್ತು ನಿಷ್ಠೂರ ವ್ಯಕ್ತಿತ್ವ ಎಲ್ಲರಿಗೂ ಮೆಚ್ಚುಗೆಯಾ ಗಿತ್ತು. ಅವರ ಬದುಕಿನ ಆದರ್ಶಗಳು ಎಲ್ಲಾ ಕಾರ್ಯಕರ್ತರಿಗೂ ಮಾರ್ಗದರ್ಶನವಾಗಲಿ ಎಂದು ಅಭಿಪ್ರಾಯಪಟ್ಟರು.

ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಮಾತನಾಡಿ, ಆನಂದ ರಾಜ್ ಅವರು ಅವರ ಬದುಕಿನುದ್ದಕ್ಕೂ ಪಕ್ಷದ ಶಿಸ್ತಿನ ಸಿಪಾಯಿಯಾಗಿ ನಡೆದು ಕೊಂಡವರು. ಅವರ ಅಗಲಿಕೆ ನಮಗೆ ಅಭದ್ರತೆ ತಂದಿದೆ. ಅವರು ಬದುಕಿದ ರೀತಿ ನಮಗೆ ಮಾರ್ಗದರ್ಶನವಾಗಲಿ ಎಂದರು.

ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ವಹಿಸಿದ್ದರು.

ಸಭೆಯಲ್ಲಿ ಭಾಗವಹಿಸಿದ್ದ ಪಿ. ಷಣ್ಮುಖ ಸ್ವಾಮಿ, ಟಿ.ಎಸ್. ನಾಗರಾಜ್, ಸತೀಶ್, ಹೆಗ್ಗೆರೆ ರಂಗಪ್ಪ, ಆವರಗೆರೆ ವಾಸು, ವಿ. ಲಕ್ಷ್ಮಣ, ಐರಣಿ ಚಂದ್ರು, ಯಲ್ಲಪ್ಪ, ಜಯಪ್ಪ, ಕೆ. ಬಾನಪ್ಪ, ಡಿ. ಶಿವಕುಮಾರ್ ಶೆಟ್ಟರ್, ನಿಟುವಳ್ಳಿ ಬಸವರಾಜ್, ಕೆಎಸ್‌ಆರ್‌ಟಿಸಿ ಹನುಮಂತಪ್ಪ, ಮೊಹಮ್ಮದ್ ರಫೀಕ್, ಸಿದ್ದೇಶ್, ಪರಶುರಾಮ್, ಚಿನ್ನಪ್ಪ, ಸಿ. ರಮೇಶ್, ಹೆಚ್. ಜಿ. ಉಮೇಶ್, ಎಂ.ಬಿ. ಶಾರದಮ್ಮ ಸೇರಿದಂತೆ ಎಲ್ಲರೂ ಮೃತರಿಗೆ ಸಂತಾಪ ಸೂಚಿಸಿ, ಮಾತನಾಡಿದರು.

# ಕೆನರಾ ಬ್ಯಾಂಕಿನಿಂದ ಕೆನರಾ ವಿದ್ಯಾ ಜ್ಯೋತಿ ವಿದ್ಯಾರ್ಥಿ ವೇತನ ವಿತರಣೆ



ದಾವಣಗೆರೆ, ಆ. 20 - ಕೆನರಾ ಬ್ಯಾಂಕಿನ ಸಾಂಸ್ಥಿಕ, ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮಗಳ ಭಾಗವಾಗಿರುವ 'ಕೆನರಾ ವಿದ್ಯಾ ಜ್ಯೋತಿ' ಯೋಜನೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಪ್ರತಿಭಾನ್ವಿತ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಡ ವಿದ್ಯಾರ್ಥಿನಿಯರಿಗೆ ಕೆನರಾ ವಿದ್ಯಾಜ್ಯೋತಿ ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮವು ನಗರದ ಕೆನರಾ ಬ್ಯಾಂಕ್ ವಿದ್ಯಾನಗರ ಶಾಖೆಯಲ್ಲಿ ನಡೆಯಿತು.

ಕೆನರಾ ಬ್ಯಾಂಕ್ ದಾವಣಗೆರೆ ಪ್ರಾದೇಶಿಕ ಕಚೇರಿಯ ಸಹಾಯಕ ಮಹಾ ಪ್ರಬಂಧಕ ವೈ.ವಿ.ಎನ್. ಶಿವಪ್ರಸಾದ್ ವಿದ್ಯಾರ್ಥಿ ವೇತನವನ್ನು ವಿತರಿಸಿ ಅವರು ಮಾತನಾಡಿದರು.

1906 ರಲ್ಲಿ ಅಮ್ಮೆಂಬಳ ಸುಬ್ಬರಾವ್ ಪೈ ಅವರು ಕೆನರಾ ಬ್ಯಾಂಕ್ ಸ್ಥಾಪಿಸುವಾಗ ಹೊಂದಿದ್ದ ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿಯನ್ನು ಕೆನರಾ ಬ್ಯಾಂಕ್ ಇಂದಿಗೂ ಮುಂದುವರೆಸಿಕೊಂಡು ಬರುತ್ತಿದೆ. ಈ ಯೋಜನೆಯಡಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪಂಗಡದ 5, 6, 7 ನೇ ತರಗತಿಯ ವಿದ್ಯಾರ್ಥಿನಿಯರಿಗೆ ತಲಾ ರೂ. 2,500 ಹಾಗೂ 8, 9, 10 ನೇ ತರಗತಿಯ ವಿದ್ಯಾರ್ಥಿನಿಯರಿಗೆ ತಲಾ ರೂ. 5000 ವಿದ್ಯಾರ್ಥಿ ವೇತನ ವಿತರಿಸುತ್ತಿದ್ದೇವೆ ಎಂದರು.

ಸ್ಥಳೀಯ ಕೆನರಾ ಬ್ಯಾಂಕ್ ವಿದ್ಯಾನಗರ ಶಾಖೆ, ವಿನೋಬ ನಗರ ಶಾಖೆ, ಪಿಜೆ ಬಡಾವಣೆ ಶಾಖೆ ಹಾಗೂ ಎಸ್‌ಎಂಇ ಶಾಖೆಗಳು ಗುರುತಿಸಿರುವ ವಿವಿಧ ಶಾಲೆಗಳ 40 ವಿದ್ಯಾರ್ಥಿನಿಯರನ್ನು ಕೆನರಾ ಬ್ಯಾಂಕಿಗೆ ಬರ ಮಾಡಿಕೊಂಡು ವಿದ್ಯಾರ್ಥಿ ವೇತನವನ್ನು ಅವರು ವಿತರಿಸಿ ಮಾತನಾಡಿದರು.

ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಿ.ಕೊಟ್ರೇಶ್, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿ ಎಮ್.ಹೆಚ್. ಬಸವರಾಜ್, ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧಿಕಾರಿ ನವೀನ್ ಮಠದ್ ಅವರು ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೆನರಾ ಬ್ಯಾಂಕಿನ ಪ್ರಾದೇಶಿಕ ಕಛೇರಿಯ ವಿಭಾಗೀಯ ಪ್ರಬಂಧಕರಾದ ರವಿಕಲಾ ಮಾತನಾಡಿ, ದೇಶದ ಎಲ್ಲಾ ಕೆನರಾ ಬ್ಯಾಂಕ್ ಶಾಖೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಈ ಯೋಜನೆಯ ಫಲಾನುಭವಿ ವಿದ್ಯಾರ್ಥಿನಿಯರು ಮುಂದೆ ಕೆನರಾ ಬ್ಯಾಂಕಿನ ಜೊತೆಯೇ ವ್ಯವಹಾರಗಳನ್ನು ನಡೆಸಲು ಮನವಿ ಮಾಡಿದರು.

ಬ್ಯಾಂಕಿನ ವಿದ್ಯಾನಗರ ಶಾಖೆಯ ಮುಖ್ಯ ಪ್ರಬಂಧಕರಾದ ಶಿಲ್ಪಾ ಎಂ. ಗಾಯಕವಾಡ್, ವಿನೋಬನಗರ ಶಾಖೆಯ ಮುಖ್ಯ ಪ್ರಬಂಧಕರಾದ ಚಂಚಲಾ ಕುಮಾರಿ, ಪಿ.ಜೆ.ಬಡಾವಣೆ ಶಾಖೆಯ ಮುಖ್ಯ ಪ್ರಬಂಧಕ ಶಬೀರ್ ಬಶೀರ್, ಎಸ್‌ಎಂಇ ಶಾಖೆಯ ಮುಖ್ಯ ಪ್ರಬಂಧಕ ಎಸ್. ವಿ.ಕಿರುಬ ಶಂಕರ್ ಹಾಗೂ ಬ್ಯಾಂಕಿನ ಹಿರಿಯ ಅಧಿಕಾರಿಗಳಾದ ಅನಿಲ್ ನಾಯಕ್, ಗೋಪಾಲ ಕೃಷ್ಣ, ವಿ.ಆರ್.ಹರೀಶ್, ಕೆ. ಭಾರ್ಗವಿ, ಸಿ.ಸುವೇಶ್ ಚಂದ್ರ, ಎನ್. ಪಾರ್ವತಿ, ಹೆಚ್.ಜೆ.ಆಶಾ, ಡಿ.ಎ.ಸಾಕಮ್ಮ ಮತ್ತಿತರರು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

**ವೈದ್ಯರು ಕೆಲಸಕ್ಕೆ ಮರಳಲು ಸುಪ್ರೀಂ ಕೋರ್ಟ್ ಕರೆ**

ನವದೆಹಲಿ : ಕೊಲ್ಕತಾ ವೈದ್ಯೆಯ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ವೈದ್ಯರು ಕೆಲಸಕ್ಕೆ ಮರಳಬೇಕು ಎಂದು ಸುಪ್ರೀಂ ಕೋರ್ಟ್ ಕರೆ ನೀಡಿದೆ. ನಮ್ಮ ಮೇಲೆ ನಂಬಿಕೆ ಇಟ್ಟು ಕೆಲಸಕ್ಕೆ ಮರಳುವಂತೆ ಸುಪ್ರೀಂ ಕೋರ್ಟ್ ವೈದ್ಯರನ್ನು ಕೇಳಿದೆ.

**ಉಗ್ರರ ಅಡಗುದಾಣ ಪತ್ತೆ**

ಜಮ್ಮು : ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಉಗ್ರರು ಹೊಂದಿದ್ದ ಭೂಗತ ಅಡಗು ತಾಣವನ್ನು ಭದ್ರತಾ ಪಡೆಗಳು ಮಂಗಳವಾರ ಪತ್ತೆ ಮಾಡಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಮುಷ್ಕರ ಮುಂದುವರೆಸಿದ ವೈದ್ಯರು**

ನವದೆಹಲಿ : ಕೊಲ್ಕೊತಾದಲ್ಲಿ ವೈದ್ಯೆಯ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ ಹಲವು ರಾಜ್ಯಗಳ ಕಿರಿಯ ವೈದ್ಯರು ಈಗಲೂ ಮುಷ್ಕರ ಮುಂದುವರೆಸಿದ್ದಾರೆ. ಕೆಲಸಕ್ಕೆ ಮರಳುವಂತೆ ಸುಪ್ರೀಂಕೋರ್ಟ್ ಕರೆ ನೀಡಿದ್ದರ ಹೊರತಾಗಿಯೂ ಮುಷ್ಕರ ಮುಂದುವರೆಸಲಾಗಿದೆ. ಇದರಿಂದಾಗಿ ರೋಗಿಗಳು ತೀವ್ರ ಸಮಸ್ಯೆ ಎದುರಿಸುವಂತಾಗಿದೆ.

**ಜನರು ಸರ್ಕಾರದ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ : ಪಶ್ಚಿಮ ಬಂಗಾಳ ರಾಜ್ಯಪಾಲ**

ಕೊಲ್ಕತಾ : ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯೆಯ ಮೇಲೆ ಅತ್ಯಾಚಾರ ಹಾಗೂ ಹತ್ಯೆ ನಡೆದಿರುವುದು ಅತ್ಯಂತ ನಾಚಿಕೆಗೇಡಿನ ಘಟನೆ. ಪ್ರಸಕ್ತ ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಉಲ್ಬಣಿಸಿದ್ದು, ಜನರು ಸರ್ಕಾರದ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ ಎಂದು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಹೇಳಿದ್ದಾರೆ.

**ರಾಜ್ಯಸಭೆಗೆ ಬಿಜೆಪಿಯಿಂದ ಬಿಟ್ಟು ಹಾಗೂ ಕುರಿಯನ್ ಸ್ಪರ್ಧೆ**

ನವದೆಹಲಿ : ಸೆಪ್ಟೆಂಬರ್ 3ರಂದು ನಡೆಯಲಿರುವ ರಾಜ್ಯಸಭೆಯ 9 ಸ್ಥಾನಗಳ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಅವರು ರಾಜಸ್ಥಾನದಿಂದ ಹಾಗೂ ಜಾರ್ಜ್ ಕುರಿಯನ್ ಅವರು ಮಧ್ಯಪ್ರದೇಶದಿಂದ ಸ್ಪರ್ಧಿಸಲಿದ್ದಾರೆ.

**ಮಹತ್ವದ ಒಪ್ಪಂದಕ್ಕೆ ಭಾರತ ಮತ್ತು ಮಲೇಶಿಯಾ ಸಹಿ**

ನವದೆಹಲಿ : ಭಾರತ ಮತ್ತು ಮಲೇಶಿಯಾಗಳು ಸಮಗ್ರ ವ್ಯೂಹಾತ್ಮಕ ಸಹಭಾಗಿತ್ವ ಒಪ್ಪಂದಕ್ಕೆ ಸಹಿ ಹಾಕಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮಲೇಶಿಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ಉಭಯ ದೇಶಗಳ ಸಹಕಾರಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ ನಂತರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

**ಭೂಕುಸಿತದಿಂದ ತ್ರಿಪುರಾದಲ್ಲಿ ಏಳು ಸಾವು**

ಅಗರ್ತಲ : ಧಾರಾಕಾರ ಮಳೆಯಿಂದಾಗಿ ತ್ರಿಪುರದ ನಾಲ್ಕು ಕಡೆ ಭೂಕುಸಿತ ಉಂಟಾಗಿದ್ದು ಏಳು ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ಮೂವರು ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಇಬ್ಬರು ಗ್ರಾಮಸ್ಥರು ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮಂಕಿಪಾಕ್ಸ್ ಲಸಿಕೆಗೆ ಕ್ರಮ**

ನವದೆಹಲಿ : ಮಂಕಿಪಾಕ್ಸ್ ಲಸಿಕೆ ಅಭಿವೃದ್ಧಿ ಪಡಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಿಳಿಸಿದೆ. ಈ ವರ್ಷದ ಅಂತ್ಯಕ್ಕೆ ಸಕಾರಾತ್ಮಕ ಫಲಿತಾಂಶ ದೊರೆಯುವ ನಿರೀಕ್ಷೆ ಇದೆ ಎಂದು ಸಂಸ್ಥೆ ತಿಳಿಸಿದೆ.

# ತನ್ನ 'ಬುದ್ಧಿವಂತಿಕೆ'ಯಿಂದ ತಾನೇ ಕುಸಿಯಲಿದೆಯೇ ಎ.ಐ.?

ನವದೆಹಲಿ, ಆ. 20 - ಕೃತಕ ಬುದ್ಧಿವಂತಿಕೆ ಕಾರಣದಿಂದಾಗಿ ಆಗಬಹುದಾದ ಬದಲಾವಣೆಗಳ ಬಗ್ಗೆ ವಿಶ್ವದೆಲ್ಲೆಡೆ ಚರ್ಚೆಗಳು ನಡೆಯುತ್ತಿವೆ. ಆದರೆ, ಕೃತಕ ಬುದ್ಧಿವಂತಿಕೆ ಜನರೇಟಿವ್ ಎಐ ಮಾದರಿಗಳು ತಮ್ಮ ಹೊರೆಗೆ ತಾವೇ ಕುಸಿಯುವ ಕುತೂಹಲ ಮೂಡಿರುವುದು ಇತ್ತೀಚಿನ ಬೆಳವಣಿಗೆ.

ಮನುಷ್ಯರ ಜೊತೆ ಸಹಜವಾಗಿ ಪ್ರತಿಕ್ರಿಯಿಸುವ, ಮನುಷ್ಯರಂತೆ ಪ್ರತಿಕ್ರಿಯೆ ನೀಡುವ ಕೃತಕ ಬುದ್ಧಿವಂತಿಕೆಗೆ ಜನರೇಟಿವ್ ಎ.ಐ. ಎಂದು ಕರೆಯಲಾಗುತ್ತದೆ. ಆದರೆ, ಇಂತಹ ಜನರೇಟಿವ್ ಎ.ಐ. ಮಾದರಿಗಳು ಕುಸಿಯುವ ಸಾಧ್ಯತೆ ಇದೆಯೇ?

2023ರಲ್ಲೇ ಈ ಬಗ್ಗೆ ಚರ್ಚೆಗಳು ಆರಂಭವಾಗಿದ್ದವು. ಆದರೆ, ಇತ್ತೀಚಿನ ದಿನಗಳಲ್ಲಿ ಈ ಕುರಿತ ಚರ್ಚೆ ವ್ಯಾಪಕವಾಗಿದೆ. ಅಂತರ್ಜಾಲದಲ್ಲಿ ದಿನೇ ದಿನೇ ಕೃತಕ ಬುದ್ಧಿವಂತಿಕೆ (ಎ.ಐ.) ಮಾಹಿತಿ ಹೆಚ್ಚಾಗುತ್ತಿದೆ. ಮುಂದಾನೊಂದು ಕಾಲದಲ್ಲಿ ಎ.ಐ. ಮಾಹಿತಿಯೇ ತುಂಬಿಕೊಂಡು, ಇದರಿಂದ ಎ.ಐ. ಆಧರಿತ ಮಾದರಿಗಳು ಮೂರ್ಖವಾಗಲಿವೆ ಎಂದು ಕೆಲವರು ಹೇಳುತ್ತಿದ್ದಾರೆ. ಇದನ್ನೇ ಎ.ಐ. ಮಾದರಿಗಳ ಕುಸಿತ ಎಂದು ಬಣ್ಣಿಸಲಾಗುತ್ತಿದೆ.

ಆಧುನಿಕ ಎ.ಐ. ವ್ಯವಸ್ಥೆಗಳು ಅಂತರ್ಜಾಲದಲ್ಲಿ ದೊರೆಯುವ ವಿಷಯಗಳನ್ನು ತಿಳಿದುಕೊಂಡು ಕಾರ್ಯನಿರ್ವಹಿಸುತ್ತವೆ. ಈ ಮಾಹಿತಿಯನ್ನು ಎ.ಐ. ವ್ಯವಸ್ಥೆಗಳು ಯಾವ ರೀತಿ ಬಳಸುತ್ತವೆ ಎಂಬುದರ ಮೇಲೆ ಅವುಗಳ ಬುದ್ಧವಂತಿಕೆ ನಿರ್ಧಾರವಾಗುತ್ತದೆ.

ಆದರೆ, ಎಲ್ಲ ಮಾಹಿತಿಗಳೂ ಉಪಯುಕ್ತವಾಗಿರುವುದಿಲ್ಲ. ಗುಣಮಟ್ಟದ ಮಾಹಿತಿ ಮಾತ್ರ ಬುದ್ಧಿವಂತಿಕೆಗೆ ಉಪಯುಕ್ತ. ಓಪನ್‌ಎಐ, ಗೂಗಲ್, ಮೆಟಾ ಹಾಗೂ ಎನ್‌ವಿಡಿಯಾ ಸೇರಿದಂತೆ ದೈತ್ಯ ಟೆಕ್ ಕಂಪನಿಗಳು ಗುಣಮಟ್ಟದ ಮಾಹಿತಿಯನ್ನು ತಮ್ಮ ಎ.ಐ. ವ್ಯವಸ್ಥೆಗೆ ಒದಗಿಸುತ್ತಿವೆ. ಆದರೆ, 2022ರ ನಂತರ ದೊಡ್ಡ ಪ್ರಮಾಣದಲ್ಲಿ ಅಂತರ್ಜಾಲದಲ್ಲಿ ಎ.ಐ. ಒದಗಿಸಿದ ಮಾಹಿತಿ ಹರಡಿದೆ. ಎ.ಐ. ಮೂಲಕ ಪಡೆಯಲಾದ ಮಾಹಿತಿಯನ್ನು ಜನರು ದೊಡ್ಡ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮನುಷ್ಯರು ರೂಪಿಸುವ ಮಾಹಿತಿಗಿಂತ ಎ.ಐ. ರೂಪಿಸುವ ಮಾಹಿತಿ ಕಡಿಮೆ ವೆಚ್ಚದ್ದಾಗಿದೆ.

ಆದರೆ, ಮನುಷ್ಯರು ರೂಪಿಸುವ ಗುಣಮಟ್ಟದ ಮಾಹಿತಿ ಇಲ್ಲದಿದ್ದರೆ ಎ.ಐ. ವ್ಯವಸ್ಥೆಗಳು ಬುದ್ಧಿವಂತವಾಗುವ ಬದಲು ಮೂರ್ಖವಾಗುತ್ತಾ ಹೋಗುತ್ತವೆ ಎಂದು ಸಂಶೋಧಕರು ತಿಳಿಸುತ್ತಾರೆ. ಎ.ಐ. ಮಾಹಿತಿ ಅತಿಯಾದರೆ ಎ.ಐ.ಗೇ ತೊಂದರೆ ಎಂಬುದು ಇದರರ್ಥ.

ಹಾಗೆಂದ ಮಾತ್ರಕ್ಕೆ ಬೃಹತ್ ಜನರೇಟಿವ್ ಎ.ಐ. ಕುಸಿಯುತ್ತದೆ ಎಂದೇನೂ ಅಲ್ಲ. ಟೆಕ್ ಕಂಪನಿಗಳು ಈಗಾಗಲೇ ಗುಣಮಟ್ಟದ ಮಾಹಿತಿಗಾಗಿ ಸಾಕಷ್ಟು



ಸಮಯ ಹಾಗೂ ಹಣ ವಿನಿಯೋಗಿಸುತ್ತಿವೆ. ಗುಣಮಟ್ಟದ್ದಲ್ಲದ ಹಾಗೂ ಎ.ಐ. ರೂಪಿಸಿದ ಮಾಹಿತಿಯನ್ನು ಶುದ್ಧೀಕರಿಸಲು ಕಂಪನಿಗಳು ಕ್ರಮ ತೆಗೆದುಕೊಳ್ಳುತ್ತಿವೆ. ಆದರೆ, ದೀರ್ಘಾವಧಿಯಲ್ಲಿ ಮನುಷ್ಯ ರೂಪಿಸಿದ ಹಾಗೂ ಎ.ಐ. ರೂಪಿಸಿದ ಮಾಹಿತಿಯನ್ನು ಪ್ರತ್ಯೇಕಿಸುವುದು ಕಠಿಣವಾಗಲಿದೆ.

ಈಗಾಗಲೇ ಸಮಸ್ಯೆಯ ಬಿಸಿ ಜನರೇಟಿವ್ ಎ.ಐ. ಸಂಸ್ಥೆಗಳಿಗೆ ತಟ್ಟುತ್ತಿದೆ. ಅತಿ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಯನ್ನು ಮಾಹಿತಿ ಶುದ್ಧೀಕರಣಕ್ಕೆ ನಿಯೋಜಿಸಿಕೊಳ್ಳುವ ಅಗತ್ಯ ಎದುರಾಗುತ್ತಿದೆ.

ಇದರ ಜೊತೆಗೆ, ಎ.ಐ. ಮಾದರಿಗಳಿಗೆ ಮನುಷ್ಯರು ರೂಪಿಸುವ ಮಾಹಿತಿ ಒದಗಿಸಲು ಕಂಪನಿಗಳು ಇನ್ನಷ್ಟು ಶ್ರಮ ವಹಿಸಬೇಕಾಗಲಿದೆ. ಈ ವ್ಯವಸ್ಥೆಗಳು ಭಾರೀ ಪ್ರಮಾಣದಲ್ಲಿ ಮಾನವ ರೂಪಿತ ಮಾಹಿತಿ ಬಯಸುತ್ತವೆ.

ಇಷ್ಟಾದರೂ, ಇದುವರೆಗೂ ಎ.ಐ. ಮಾದರಿಗಳು ಕುಸಿತದ ಗಂಭೀರ ಅಪಾಯ ಎದುರಿಸುವುದು ಕಂಡು ಬಂದಿಲ್ಲ. ಮಾನವ ರೂಪಿತ ಹಾಗೂ ಎ.ಐ. ರೂಪಿತ ಮಾಹಿತಿಗಳು ಜೊತೆ ಜೊತೆಗೆ ಸಾಗುತ್ತಿವೆ.

ಎ.ಐ. ರೂಪಿಸುವ ಅಪಾರ ಮಾಹಿತಿಯಿಂದ ಸದ್ಯಕ್ಕೆ ಮನುಷ್ಯರಿಗೇ ಹೆಚ್ಚು ತೊಡಕುಗಳು ಎದುರಾಗುತ್ತಿವೆ. ಕೋಡಿಂಗ್ ವೆಬ್ ತಾಣವಾದ ಸ್ಟಾಕ್‌ಓವರ್‌ಫ್ಲೋದಲ್ಲಿ ಕಳೆದ ವರ್ಷ ಚಟುವಟಿಕೆಗಳು ಶೇ.16ರಷ್ಟು ಕಡಿಮೆಯಾಗಿವೆ. ಇದು ಕೆಲ ಆನ್‌ಲೈನ್ ಸಮುದಾಯದಲ್ಲಿ ಮಾನವ ಸಂಪರ್ಕ ಕಡಿಮೆಯಾಗುವುದನ್ನು ತೋರಿಸುತ್ತಿದೆ.

ಅತಿಯಾದ ಎ.ಐ. ಮಾಹಿತಿ ಕಾರಣದಿಂದ ಅಂತರ್ಜಾಲದಲ್ಲಿ ಕಿರಿಕಿರಿಯ ಜಾಹೀರಾತುಗಳು ಹಾಗೂ ತಪ್ಪು ಮಾಹಿತಿಗಳ ಸಮಸ್ಯೆ ಹೆಚ್ಚಾಗಲಿದೆ. ಎ.ಐ. ಮಾಹಿತಿ ಹಾಗೂ ಮಾನವ ಮಾಹಿತಿಗಳ ನಡುವಿನ ವ್ಯತ್ಯಾಸ ಗುರುತಿಸಲಾಗದೇ ಜನರು ಸಮಸ್ಯೆಗೆ ಸಿಲುಕುತ್ತಿದ್ದಾರೆ. ಹೀಗಾಗಿ ಎ.ಐ. ರೂಪಿಸಿದ ಮಾಹಿತಿಯನ್ನು ಗುರುತಿಸಲು ಸಾಧ್ಯವಾಗುವ ಅಗತ್ಯದ ಬಗ್ಗೆ ಪರಿಣಿತರು ಒತ್ತಿ ಹೇಳುತ್ತಿದ್ದಾರೆ.

ಮಾನವ ಸಂವಾದ ಹಾಗೂ ಮಾನವ ರೂಪಿತ ಮಾಹಿತಿ ಅಮೂಲ್ಯವಾಗಿದ್ದು, ಇದನ್ನು ರಕ್ಷಿಸಬೇಕಿದೆ. ನಮ್ಮದೇ ಹಿತಕ್ಕಾಗಿ ಈ ಬಗ್ಗೆ ಕ್ರಮಗಳ ಅಗತ್ಯವಿದೆ ಎಂದು ಪರಿಣಿತರು ಹೇಳುತ್ತಿದ್ದಾರೆ.

# ನವದೆಹಲಿ : ಮಾದಕ, ಏಡ್ಸ್ ಸುಳಿಯಲ್ಲಿ ಫಿಜಿ

ನವದೆಹಲಿ, ಆ. 20 - ಮಾದಕ ಹಾಗೂ ಏಡ್ಸ್‌ಗಳು ಪೆಸಿಫಿಕ್‌ನ ಪುಟ್ಟ ದ್ವೀಪವಾದ ಫಿಜಿಯಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿವೆ. ಕೊರೊನಾ ಕಾರಣದಿಂದ ಪ್ರವಾಸೋದ್ಯಮಕ್ಕೆ ಬಿದ್ದ ಹೊಡೆತ ಮಾಸುವ ಮುನ್ನವೇ, ಮಾದಕದ ಹಾವಳಿ ಹರಡಿದೆ.

ವಿದೇಶಿ ಮಾದಕ ಜಾಲಗಳು ಫಿಜಿ ಮೂಲಕ ನ್ಯೂಜಿಲ್ಯಾಂಡ್ ಹಾಗೂ ಆಸ್ಟ್ರೇಲಿಯಾಗಳಿಗೆ ಮಾದಕ ರವಾನೆ ಮಾಡುತ್ತಿವೆ. ಈಗ ಮಾದಕ ಸ್ಥಳೀಯ ಸಮುದಾಯದಲ್ಲೂ ಹರಡಿದೆ. ಮಾದಕಕ್ಕೆ ಬಳಸಲಾಗುವ ಚುಚ್ಚುಮದ್ದಿನ ಕಾರಣದಿಂದ ಹೆಚ್.ಐ.ವಿ. ಸೋಂಕು ಹರಡುತ್ತಿದೆ.

ಮೆತಂಫೆಟಮೈನ್ (ಮೆತ್) ಎಂಬ ಮಾದಕ ಅತಿ ಹೆಚ್ಚು ವ್ಯಸನಕಾರಿಯಾಗಿದೆ. ಇದನ್ನು ಹಲವು ವ್ಯಕ್ತಿಗಳು ಒಂದೇ ಸೂಜಿಯ ಮೂಲಕ ಬಳಸುತ್ತಿರುವುದರಿಂದ ಹೆಚ್.ಐ.ವಿ. ಸೋಂಕಿನ ಅಪಾಯ ಹೆಚ್ಚಾಗಿದೆ.

ಇತ್ತೀಚೆಗೆ ಒಂಭತ್ತು ವರ್ಷದ ಮಕ್ಕಳೂ ಸಹ ಮಾದಕ ವ್ಯಸನಕ್ಕೆ ಸಿಲುಕಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆಚ್.ಐ.ವಿ. ಹಾಗೂ ಏಡ್ಸ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಪೊಲೀಸರು ಇದನ್ನು ತುರ್ತು ಪರಿಸ್ಥಿತಿ ಎಂದು ಹೇಳುತ್ತಿದ್ದಾರೆ, ಆದರೆ, ಪೊಲೀಸರ ವಿರುದ್ಧವೂ ಮಾದಕ ಭ್ರಷ್ಟಾಚಾರದಲ್ಲಿ ಭಾಗಿಯಾದ ಆರೋಪವಿದೆ.

ಈ ವರ್ಷ ಹೆಚ್.ಐ.ವಿ. ಪ್ರಕರಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗುವ ಸಾಧ್ಯತೆ ಇದೆ. ಯುವಕರು ಹಾಗೂ ಬಡ ಸಮುದಾಯಗಳು ಇದರಿಂದ ಅತಿ ಹೆಚ್ಚಿನ ಪರಿಣಾಮಕ್ಕೆ ಸಿಲುಕಲಿದ್ದಾರೆ.

ಮೆಥ್ ಮಾದಕದ ಬಳಕೆಯಿಂದ ರೋಗ ನಿರೋಧಕ ಶಕ್ತಿ ಕುಂದುತ್ತದೆ. ಇದು ಇತರೆ ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗುತ್ತದೆ. ಅಲ್ಲದೇ, ಹೆಚ್.ಐ.ವಿ. ಕಳಂಕ ಎಂಬ ಭಾವನೆ ಇರುವುದರಿಂದ, ಬಹಿರಂಗವಾಗಿ ಈ ಬಗ್ಗೆ ಮಾತನಾಡಲು ಸೋಂಕಿತರು ಹಿಂಜರಿಯುತ್ತಿದ್ದಾರೆ.

ಹಲವು ವರ್ಷಗಳಿಂದ ಫಿಜಿ ಆರೋಗ್ಯ ವ್ಯವಸ್ಥೆ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಆಸ್ಪತ್ರೆಗಳು ಆಧುನಿಕ ಉಪಕರಣಗಳನ್ನು ಹೊಂದಿಲ್ಲ. ಆರೋಗ್ಯ ವೃತ್ತಿಪರರ ವಲಸೆಯಿಂದಾಗಿ ಸಿಬ್ಬಂದಿ ಕೊರತೆಯೂ ಇದೆ. ಇದೆಲ್ಲದರ ಕಾರಣದಿಂದ ಫಿಜಿಯ ಶೇ.80ರಷ್ಟು ಸಾವುಗಳು ಅವಧಿಗೆ ಮುಂಚೆ ಸಂಭವಿಸುತ್ತಿವೆ.

ಮಾದಕ, ಹೆಚ್‌ಐವಿ ಹಾಗೂ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಸಮಸ್ಯೆಯ ವಿಷವರ್ತುಲ ದೇಶವನ್ನು ಆವರಿಸಿದೆ. ಈ ಹಿನ್ನೆಲೆಯಲ್ಲಿ, ವಿಶ್ವ ಸಂಸ್ಥೆಯ ಏಡ್ಸ್ ಯೋಜನೆ ಮೂಲಕ ನೆರವಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್ ಹಾಗೂ ಬ್ರಿಟನ್ ಪೊಲೀಸರೂ ಸಹ ಫಿಜಿ ಮಾದಕ ತಂಡಗಳ ವಿರುದ್ಧ ಹೋರಾಟಕ್ಕೆ ತಂಡ ರೂಪಿಸಿವೆ.

ಸ್ಥಳೀಯ ಸಮುದಾಯಗಳನ್ನು ಬಲಗೊಳಿಸದೇ, ಪ್ರಾಂತೀಯ ಹಾಗೂ ಜಾಗತಿಕ ಸಮನ್ವಯತೆ ಇರದೇ ಫಿಜಿ ರೀತಿಯ ದೇಶಗಳು ಬಿಕ್ಕಟ್ಟು ಎದುರಿಸಲು ಸಾಧ್ಯವಾಗದು ಎಂದು ಅಭಿಪ್ರಾಯ ಪಡಲಾಗುತ್ತಿದೆ.

## ಹೊನ್ನಾಳಿ ಸಿಪಿಐ ಸುನೀಲ್‌ಕುಮಾರ್‌ಗೆ ಜಿಲ್ಲಾ ನ್ಯಾಯಾಧೀಶರ ಮೆಚ್ಚುಗೆ ಪತ್ರ



ದಾವಣಗೆರೆ, ಆ. 20 - ಲೋಕ ಅದಾಲತ್‌ನಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳ ಪಟ್ಟಿಗೆ ಹೆಚ್ಚು ಸಂಖ್ಯೆಗಳನ್ನು ಸೇರಿಸುವಲ್ಲಿ ನಿರಂತರವಾಗಿ ಪ್ರಯತ್ನಿಸಿದ ಹೊನ್ನಾಳಿ ಪೊಲೀಸ್ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಹುಲ್ಮನಿ ಅವರನ್ನು ಸೋಮವಾರ ನಗರದ ಜಿಲ್ಲಾ ಮುಖ್ಯ ನ್ಯಾಯಾಲಯದಲ್ಲಿ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಅವರು ಮೆಚ್ಚುಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು.

## ಕುಮಾರಸ್ವಾಮಿ ವಿರುದ್ಧ ಎಸ್‌ಐಟಿ ತನಿಖೆಗೆ ಮನವಿ

**(1ನೇ ಪುಟದಿಂದ)** ಸಂಬಂಧಿಸಿದಂತೆ ಟಿ.ಜೆ.ಅಬ್ರಹಾಂ ತಮ್ಮ ವಿರುದ್ಧ ನೀಡಿದ ದೂರಿಗೆ ಒಂದೇ ತಾಸಿನಲ್ಲಿ ನನಗೆ ನೋಟಿಸ್ ನೀಡುತ್ತಾರೆ. ಆದರೆ, ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಸೇರಿದಂತೆ ಕೆಲವರ ವಿರುದ್ಧ ಬಂದ ದೂರುಗಳಿಗೆ ಇದುವರೆಗೂ ನೋಟಿಸ್ ಜಾರಿ ಮಾಡಿಲ್ಲ. ರಾಜ್ಯಪಾಲರು ಗುರಿಯಾಗಿಸಿಕೊಂಡು ತಮಗೆ ನೋಟಿಸ್ ನೀಡಿದ್ದಾರೆ, ಇದು ತಾರತಮ್ಯವಲ್ಲವೇ, ಸಂವಿಧಾನಬಾಹಿರವಾಗಿ ನಡೆದುಕೊಳ್ಳುತ್ತಿರುವ ಇವರ ನಡೆಯ ಬಗ್ಗೆ ಸಾರ್ವಜನಿಕರು ಪ್ರಶ್ನೆ ಮಾಡಬಾರದೇ ಎಂದರು.

ಸಾಯಿ ಮಿನರಲ್ಸ್ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧ ಚಾರ್ಜ್‌ಶೀಟ್ ಆಗಿದೆ. ಅವರು ಕೇಂದ್ರದಲ್ಲಿ ಮಂತ್ರಿಯಾಗಿ ಮುಂದುವರೆಯಬಹುದೇ? ಎಂದು ಪ್ರಶ್ನಿಸಿದರು.

ವಿನಯ್ ಗೋಯಲ್ ಎಂಬುವರು ಗಣಿಗಾರಿಕೆಗೆ ಅರ್ಜಿ ಹಾಕಿರಲಿಲ್ಲ, ಅವರಿಗೆ ಅನುಕೂಲ ಮಾಡಲು ಅನುಮತಿ ನೀಡಿದರು. ಲೋಕಾಯುಕ್ತ ತನಿಖಾ ಸಂಸ್ಥೆ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದೆ, ಇದನ್ನು ತಿರುಚಿ ಅವರು ಮಾತನಾಡುತ್ತಿದ್ದಾರೆ ಎಂದರು.

## ಮಳೆಗೆ ಆಸ್ಪತ್ರೆ ವಾರ್ಡ್ ಜಲಾವೃತ



**(1ನೇ ಪುಟದಿಂದ)** ಸ್ಥಳಾಂತರಿಸಿದರು. ಆಸ್ಪತ್ರೆಯ ಹಿಂಭಾಗ ಟ್ರೆಂಚ್ ಹೊಡೆಸಿ ನೀರು ಸರಾಗವಾಗಿ ಹರಿದುಹೋಗುವ ವ್ಯವಸ್ಥೆಯಾದರೆ ನೀರು ಎಂದಿಗೂ ಆಸ್ಪತ್ರೆಯ ಒಳಗೆ ನುಗ್ಗುವುದಿಲ್ಲ. ನೀರು ಆಸ್ಪತ್ರೆಯ ಒಳಗೆ ನುಗ್ಗಿ ಕೆಲ ಹೊತ್ತು ಅವಾಂತರ ನಿರ್ಮಾಣವಾಗಿತ್ತು. ಆದರೆ ಆಸ್ಪತ್ರೆಯ ಸಿಬ್ಬಂದಿ ನೀರನ್ನು ಹೊರಹಾಕಿದರು ಎಂದು ಆಸ್ಪತ್ರೆಯ ತಜ್ಞ ವೈದ್ಯ ಡಾ.ಸಂತೋಷ್ ಪತ್ರಿಕೆಗೆ ಮಾಹಿತಿ ನೀಡಿದರು.

ಆದರೆ ರಾತ್ರಿ ಮತ್ತೆ ಮಳೆ ಬಂದರೆ ಇದೇ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಾಗಲೇ ಐಸಿಯು ಮತ್ತು ಹೆರಿಗೆ ವಾರ್ಡ್‌ಗಳಿಗೆ ನೀರು ನುಗ್ಗಿ ಸಮಸ್ಯೆ ಎದುರಿಸಿದ್ದೇವೆ ಎಂದು ರೋಗಿಗಳ ಕಡೆಯವರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ತಡರಾತ್ರಿಯವರೆಗೂ ನೀರನ್ನು ಆಸ್ಪತ್ರೆಯ ವಾರ್ಡ್‌ಗಳಿಂದ ಹೊರ ಹಾಕಲು ಸಿಬ್ಬಂದಿ ಶ್ರಮಪಡಬೇಕಾಯಿತು.

# ಪೋಷಕಾಂಶಯುಕ್ತ ತರಕಾರಿಗಳಿಂದ ಮನುಷ್ಯನಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿ



ಜಗಳೂರು, ಆ.20- ಮನುಷ್ಯ ಪೋಷಕಾಂಶ ಹೊಂದಿದ ತರಕಾರಿಗಳನ್ನು ಸೇವಿಸಿದಾಗ ಮಾತ್ರ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬಹುದು ಎಂದು ಐಸಿಎಆರ್ - ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಹೇಳಿದರು.

ತಾಲ್ಲೂಕಿನ ಬಸಪ್ಪನಹಟ್ಟಿ ಗ್ರಾಮದಲ್ಲಿ ಈಚೆಗೆ ಆಯೋಜಿಸಿದ್ದ 'ಪೌಷ್ಟಿಕ ಕೈತೋಟ ತರಬೇತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಹು ವಾರ್ಷಿಕ ತರಕಾರಿಗಳಾದ ನುಗ್ಗೆ ಮತ್ತು ಹಲವು ಬಗೆಯ ತರಕಾರಿಗಳನ್ನು ಮನೆಯ ಕೈ ತೋಟದಲ್ಲಿ ಬೆಳೆಸಿ, ಅವುಗಳನ್ನು ಆಹಾರ ಕ್ರಮದಲ್ಲಿ ಬಳಸಿಕೊಂಡಾಗ ದೇಹಕ್ಕೆ ಉತ್ತಮ ಪೋಷಕಾಂಶವನ್ನು ಪಡೆಯಬಹುದು ಎಂದು ತಿಳಿಸಿದರು.

ನುಗ್ಗೆ ಬೆಳೆಯುವುದರಿಂದ ವರ್ಷ ಪೂರ್ತಿ ಸೊಪ್ಪು ಸಿಗಲಿದ್ದು, ಇದರ ಸೇವನೆಯಿಂದ ದೇಹದಲ್ಲಿ ಕಬ್ಬಿನಾಂಶ ಹಾಗೂ ಹಿಮೋಗ್ಲೋಬಿನ್ ಪ್ರಮಾಣ

**ಜಗಳೂರು ತಾಲ್ಲೂಕಿನ 'ಪೌಷ್ಟಿಕ ಕೈತೋಟ ತರಬೇತಿ' ಕಾರ್ಯಕ್ರಮದಲ್ಲಿ ದಾವಣಗೆರೆ ಐಸಿಎಆರ್ - ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ**

ದ್ವಿಗುಣಗೊಂಡು ರೋಗ ನಿರೋಧಕ ಶಕ್ತಿ ಹೆಚ್ಚಲಿದೆ ಮತ್ತು ಮಾನಸಿಕ ಸದೃಢತೆಗೆ ಇದು ಅನುಕೂಲಕರ ಎಂದು ಹೇಳಿದರು.

ಕೇಂದ್ರದ ಗೃಹ ವಿಜ್ಞಾನಿ ಡಾ. ಸುಪ್ರಿಯಾ ಪಿ. ಪಾಟೀಲ್ ಮಾತನಾಡಿ, ಆರೋಗ್ಯವೇ ಆದಾಯ ಎಂಬುದನ್ನು ಎಲ್ಲರೂ ತಿಳಿಯಬೇಕಿದೆ. ಇತ್ತೀಚಿನ ದಿನಮಾನಗಳಲ್ಲಿ ಮಹಿಳೆಯರಲ್ಲಿ ಅಪೌಷ್ಟಿಕತೆ ಹೆಚ್ಚಾಗುತ್ತಿದ್ದರಿಂದ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದ ಅವರು, ನುಗ್ಗೆ ಸೊಪ್ಪಿನ ಮೌಲ್ಯವರ್ಧನೆ ಹಾಗೂ ಅದರ ಸೇವನೆಯಿಂದ ಆರೋಗ್ಯಕ್ಕಾಗುವ ಲಾಭ ತಿಳಿಸಿದರು.

ಕೇಂದ್ರದ ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ. ಅವಿನಾಶ್ ಮಾತನಾಡಿ, ಮನೆಯ ಸದಸ್ಯರ ಸ್ವಾಸ್ಥ್ಯ ಕಾಪಾಡಲು ಆಹಾರ ಪದ್ಧತಿ ಎಷ್ಟು ಮುಖ್ಯವೋ, ಅದೇ ರೀತಿ ನಮ್ಮ ಸುತ್ತ ಮುತ್ತಲಿನ ವಾತಾವರಣದ ಸ್ವಚ್ಛತೆ ಕಾಪಾಡುವುದು ಅಷ್ಟೇ ಮುಖ್ಯ ಎಂದು ತಿಳಿಸಿದರು.

ಪರಿಸರ ಸ್ವಚ್ಛತೆಗಾಗಿ ಎಲ್ಲರೂ ಕೈ ಜೋಡಿಸಿದರೆ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣ ಮಾಡಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ಪೌಷ್ಠಿಕ ಕೈ ತೋಟ ಯೋಜನೆ'ಯಡಿ 30 ರೈತ ಮಹಿಳೆಯರಿಗೆ ನುಗ್ಗೆ ಸಸಿಯನ್ನು ವಿತರಿಸಿದರು. ಬಸಪ್ಪನಹಟ್ಟಿ ಗ್ರಾಮದ ಪ್ರಗತಿಪರ ರೈತರಾದ ಕೃಷ್ಣಮೂರ್ತಿ, ಶಶಿಕುಮಾರ ಹಾಗೂ ಮಹಿಳಾ ರೈತರು ಉಪಸ್ಥಿತರಿದ್ದರು.

# ರಾಘವೇಂದ್ರ ಸ್ವಾಮಿಗಳು - ಕಲಿಯುಗದ ಕಾಮಧೇನು

**3ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮರತಾಯಚ**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ**

ರಾಘವೇಂದ್ರ ಸ್ವಾಮಿಗಳು ಎಂದ ತಕ್ಷಣ ನಮ್ಮ ಮನಸ್ಸಿಗೆ ಮೊದಲು ಬರುವುದು ಅತ್ಯಂತ ದಯಾಳುಗಳು, ಕಾರುಣ್ಯ ಮೂರ್ತಿಗಳು, ಕೇಳಿದ್ದನ್ನೆಲ್ಲ ಕೊಡುವವರು.


ಕಲಿಯುಗದ ಭೀಕರ ಕಷ್ಟಗಳನ್ನು ಅನುಭವಿಸುತ್ತಿರುವ ಪಾಪರಾಶಿಗಳ ದೊಡ್ಡ ದೊಡ್ಡ ಹೊರೆಗಳನ್ನು ಹೊತ್ತಂತಹ ಜೀವಿಗಳ ಉದ್ಧಾರಕ್ಕಾಗಿ ಅವತಾರ ಮಾಡಿದಂಥವರು ರಾಘವೇಂದ್ರ ಸ್ವಾಮಿಗಳು. ಇವರು ಪ್ರಹ್ಲಾದ ರಾಜರ ಅವತಾರ.

ಭಕ್ತಿ ,ನಿಷ್ಠೆ ,ಶ್ರದ್ಧೆ, ಏಕಾಗ್ರತೆ, ಏಕ ನಿಷ್ಠೆ ಎಲ್ಲದಕ್ಕೂ ಪ್ರತೀಕವಾಗಿರುವಂತಹ ಬಾಲಕರು ಪ್ರಹ್ಲಾದ ರಾಜರು. ಘೋರ ರಾಕ್ಷಸನಾದ ಹಿರಣ್ಯ ಕಶ್ಯಪುವಿನ ಮಗನಾದರೂ ಪರಮಾತ್ಮನಾದ ನಾರಾಯಣನಲ್ಲಿ ಅತ್ಯಂತ ಭಕ್ತಿ ಶ್ರದ್ಧೆ ಉಳ್ಳವನಾಗಿ, ನಾರದರಿಂದ ತಿಳಿದಂತಹ ಜ್ಞಾನದಿಂದ, ತನ್ನ ಸಹಪಾಠಿಗಳು ಉದ್ಧಾರವಾಗಲೀ ಎಂಬ ಉದ್ದೇಶದಿಂದ, ಅವರಿಗೆ ಭಗವಂತನ ಬಗ್ಗೆ ತಿಳುವಳಿಕೆಕೊಟ್ಟ ಶ್ರೇಷ್ಠರು.

ಇವರ ಭಕ್ತಿಗೆ ಒಲಿದು ಭಗವಂತ ಕಂಬದಿಂದ ಪ್ರಾಧುರ್ಭವಿಸಿ ತಾನು ಎಲ್ಲೆಲ್ಲೂ ಇರುವೆನೆಂಬ ಸತ್ಯ ತೋರಿಸಿದ. ಸಿಂಹ ಮುಖ ಮತ್ತು ಮನುಷ್ಯ ದೇಹ ಧರಿಸಿ ಹೇಗೆ ಬೇಕಾದರೂ ತಾನು ಕಾಣಬಹುದು ಎಂದು ತೋರಿಸಿದ. ಉಗುರಿನಿಂದ ಕರುಳು ಸೀಳಿ, ತನಗೆ ಆಯುಧವೇ ಬೇಡ ಎಂದು ತೋರಿಸಿದರೆ. ತನ್ನ ಕಣ್ಣು ದೃಷ್ಟಿಯಿಂದ ಕೊಲ್ಲಬಲ್ಲವನು ಭಕ್ತನಿಗೆ ಕೊಟ್ಟ ಕಷ್ಟಕ್ಕೆ ಸಿಟ್ಟಿನಿಂದ ಈ ಘೋರ ರೂಪದಲ್ಲಿ ಪ್ರತ್ಯಕ್ಷನಾದ.

ನರಸಿಂಹ ರೂಪದಲ್ಲಿ ಭಗವಂತ ಬಂದರೂ ಒಂದು ಸ್ವಲ್ಪವೂ ಭಯಪಡದೆ, ದೇವಾನು ದೇವತೆಗಳೆಲ್ಲ ಹೆದರಿ ಗಡಗಡ ನಡುಗುತ್ತಿರುವಾಗ, ಸ್ತೋತ್ರ ಮಾಡಿ ಅವನನ್ನು ಶಾಂತ ಮಾಡಿದಂತಹ ಭಕ್ತಾಗ್ರೇಸರರು ಇವರು!

ಏನೇ ಕಷ್ಟ ಕೊಟ್ಟರೂ, ವಿಷವನ್ನೇ ತಿನ್ನಿಸಿದರು, ಬೇಸರವಿಲ್ಲದೆ, ಒಂದೇ ನಂಬಿಕೆಯಿಂದ ಬಾಳಿದಂತಹ ಮುಗ್ಧ ಬಾಲಕರು.



**ಶ್ರೀ ರಾಘವೇಂದ್ರ ಸ್ವಾಮಿಗಳ 353 ನೇ ಆರಾಧನಾ ಮಹೋತ್ಸವ**

ಸತತ ಹರಿನಾಮ ಸ್ಮರಣೆ, ಮನಸ್ಸಿನಲ್ಲಿ ಅವನ ಚಿಂತನೆ, ಕೈಗಳನ್ನು ಮುಗಿದು ಕೊಂಡು ಅವನ ಪ್ರಾರ್ಥನೆ ಮಾಡಿದ ಆ ಬಾಲನ ಭಕ್ತಿಗೆ ದೇವ ಮೆಚ್ಚಿದ.

ಸಾಧಕರಿಗೆ ಒಂಭತ್ತು ವಿಧದ ಭಕ್ತಿಯನ್ನೂ ಪ್ರಹ್ಲಾದರು ಬೋಧಿಸಿದರು.ಭಗವಂತನ ಬಗ್ಗೆ ಕೇಳುವುದು -ಶ್ರವಣ, ಅವನ ಗುಣಗಾನ ಮಾಡುವುದು –ಕೀರ್ತನ, ಅವನ ಬಗ್ಗೆ ಚಿಂತಿಸುವುದು-ಸ್ಮರಣ, ಅವನ ಪಾದ ಸೇವೆ ಮಾಡುವುದು-ಪಾದಸೇವನ, ಅವನನ್ನು ಹೂವು, ಕುಂಕುಮ ಇತ್ಯಾದಿಯಿಂದ ಅರ್ಚನೆ ಮಾಡಿ ಪೂಜಿಸುವುದು -ಅರ್ಚನ, ಅವನಿಗೆ ನಮಸ್ಕರಿಸುವುದು –ವಂದನ, ಅವನ ದಾಸ ನಾನು ಎಂದು ಅವನಿಗಾಗಿ ಜೀವನ ಮಾಡುವುದು. – ದಾಸ್ಯ, ಅವನ ಸ್ನೇಹಿತನಂತೆ ಪ್ರೀತಿಸುವುದು (ಉದಾಹರಣೆಗೆ ಅರ್ಜುನ ಕೃಷ್ಣರ ಸ್ನೇಹ ) - ಸಖ್ಯ .ಮತ್ತು ಅವನಲ್ಲಿ ಸಂಪೂರ್ಣ ಶರಣಾಗತಿ. ನೀನೇ ಕಾಪಾಡಬೇಕು ಎಂಬ ಆಗ್ರಹ. ನೀನಿಲ್ಲದೇ ಗತಿ ಇಲ್ಲ ಎಂಬ ಭಾವ- ಆತ್ಮನಿವೇದನೆ.ಈ ಭಕ್ತಿ ಭಾವದಿಂದ ಎಲ್ಲರೂ ಭಕ್ತಿ ಮಾಡುವ ಒಂದು ಮಾರ್ಗದರ್ಶನ ಕೊಟ್ಟಿದ್ದಾರೆ.

ರಾಕ್ಷಸನನ್ನು ಸಂಹರಿಸಿದ ನಂತರ, ಏನು ಬೇಕು ಎಂದು ಕೇಳಿದಾಗ, ಕೇವಲ ನಿನ್ನ ಭಕ್ತಿಯನ್ನು ಕೊಡು ಎಂದು ಪ್ರಾರ್ಥಿಸಿದಂತಹ ಪ್ರಹ್ಲಾದರು, ಭಗವಂತನು ಮೋಕ್ಷ ಕೊಡುತ್ತೇನೆ ಎಂದಾಗ, ನನ್ನ ಜೊತೆ ಇರುವ ಈ ಅಸುರ ಬಾಲಕರಿಗೂ, ಜ್ಞಾನದ ಮಾರ್ಗವನ್ನು ತೋರಿಸಿ ಮೋಕ್ಷದ ದಾರಿಗೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿದಂತಹ ನಿಸ್ವಾರ್ಥ ಪುಣ್ಯಾತ್ಮರು. ತನಗೆ ಸಿಕ್ಕಂತಹ ಜ್ಞಾನವನ್ನು ಎಲ್ಲರಿಗೂ ಹಂಚಬೇಕು ಎಂಬ ಸದುದ್ದೇಶ ಅವರದು.

ಆದ್ದರಿಂದಲೇ ಕಲಿಯುಗದ ಮನುಷ್ಯರನ್ನು ಉದ್ಧಾರ ಮಾಡಲು ಭಗವಂತನು ರಾಯರನ್ನು ಕಳಿಸಿದ್ದಾನೆ. ಅವರ ಗ್ರಂಥಗಳಲ್ಲಿ ಭಗವಂತನ ಮಹಿಮೆಗಳ ಅತ್ಯುತ್ತಮ ಚಿತ್ರಣವಿದೆ. ತಮ್ಮ ಜ್ಞಾನ ಭಂಡಾರವನ್ನೇ ತಮ್ಮ ರಚನೆಗಳಲ್ಲಿ ತುಂಬಿದ್ದಾರೆ.

ನೊಂದು ಬೆಂದು ಹೋದವರ ಎಲ್ಲ ಕಷ್ಟಗಳನ್ನು ಪರಿಹರಿಸುತ್ತಾರೆ. ಅವರ ಸನ್ನಿಧಾನದಲ್ಲಿ ಪವಾಡಗಳು ಇಂದಿಗೂ ನಡೆಯುತ್ತಿವೆ. ಅವರ ಭಕ್ತರ ಒಂದು ದೊಡ್ಡ ಸಾಗರವೇ ಈ ಜಗತ್ತಿನಲ್ಲಿ ತುಂಬಿದೆ. ವಿಶ್ವದಾದ್ಯಂತ ಅವರ ಮಠಗಳು, ಸಂಸ್ಕಾರ, ಸಂಸ್ಕೃತಿ, ಅಧ್ಯಾತ್ಮಿಕ ಆನಂದವನ್ನು ಹಂಚುತ್ತಿವೆ. ಜ್ಞಾನಮಾರ್ಗವನ್ನು ಬೋಧಿಸುತ್ತಿವೆ.

ಅವರ ನಾಮಜಪ, ಮಂತ್ರಾಕ್ಷತೆ, ಮೃತ್ತಿಕೆಗಳಿಗೆ ಅಪಾರ ಶಕ್ತಿ. ರೋಗಗಳನ್ನು ಕಳೆವುದರಿಂದ ರೋಗಹರನೆ ಕೃಪಾಸಾಗರ ಶ್ರೀ ಗುರು ರಾಘವೇಂದ್ರ ಎಂದು ಭಕ್ತರು ಹಾಡಿದ್ದಾರೆ.

ರಾಯರಿಗೆ ಎಲ್ಲರೂ ಒಂದೇ, ಜಾತಿ, ಮತ ಬೇಧ ಮಾಡದೆ ಎಲ್ಲರೊಳಗೆ ಇರುವ ಆತ್ಮ ಭಾವಕ್ಕೆ ಬೆಲೆ ಕೊಡುವವರು. ಎಲ್ಲರ ಉನ್ನತಿಗಾಗಿ ಶ್ರಮಿಸಿದ್ದಾರೆ.ಇಂದಿಗೂ ಬೃಂದಾವನದಲ್ಲಿ ಕುಳಿತು ಆಶೀರ್ವಾದ ನೀಡುತ್ತಿದ್ದಾರೆ ಎಂಬ ನಂಬಿಕೆ ಇದೆ .

ಕೇಳಿದ್ದನ್ನೆಲ್ಲ ಕೊಡುವ ರಾಯರನ್ನು ಕಲ್ಪವೃಕ್ಷ ಎಂದು ಕರೆದಿದ್ದಾರೆ. ಇಂತಹ ರಾಯರು ಎಲ್ಲರಿಗೂ ನೆಮ್ಮದಿ ಸಂತೃಪ್ತಿ ಆನಂದ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**-ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಜನರ ಮನಸ್ಸಲ್ಲಿ ದೇವರಾಜ ಅರಸರು ಅಜರಾಮರ

ಹರಿಹರ, ಆ.20- ಸಮಾಜದ ಎಲ್ಲಾ ವರ್ಗದ ಜನರ ಧ್ವನಿಯಾಗಿ ಸೇವೆ ಸಲ್ಲಿಸಿದ ಡಿ. ದೇವರಾಜ್ ಅರಸ್ ಅವರು ಜನರ ಮನಸ್ಸಲ್ಲಿ ಅಜರಾಮರ ಆಗಿದ್ದಾರೆ ಎಂದು ಎಸ್‌ಜಿಟಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಬಿ.ಬಿ. ರೇವಣನಾಯ್ಕ್ ಹೇಳಿದರು.

ತಾಲ್ಲೂಕು ಆಡಳಿತ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ನಗರಸಭೆಯಿಂದ ನಗರದ ಗಿರಿಯಮ್ಮ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ನಡೆದ ಡಿ. ದೇವರಾಜ ಅರಸು ಅವರ 109ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ದೇವರಾಜ್ ಅರಸ್ ಅವರು ಸಮಾಜವಾದ ಮತ್ತು ಸಮಾನತಾವಾದದ ಚಿಂತನೆ ಹೊಂದಿದ್ದರು. ಇವರು ತಮ್ಮ ಆಡಳಿತಾವಧಿಯಲ್ಲಿ ಸಮಾಜದಲ್ಲಿನ ಅಸಮಾನತೆ ಮತ್ತು ಅಸ್ಪ ಶ್ಯತೆ ನಿವಾರಣೆ ಮಾಡುವ ಮೂಲಕ ಧ್ವನಿಯಿಲ್ಲದವರಿಗೆ ಧ್ವನಿಯಾಗಿದ್ದರು ಎಂದು ಹೇಳಿದರು.

1952ರಲ್ಲಿ ರಾಜಕೀಯ ಪ್ರವೇಶಿಸಿದ ಅರಸ್ ಶ್ರೇಷ್ಠ ಚಿಂತಕರ ಸಾಲಿಗೆ ಸೇರಿದ್ದಾರೆ. ಮೊದಲು ಶಾಸಕರಾಗಿದ್ದಾಗ ಎಸ್. ನಿಜಲಿಂಗಪ್ಪ ಅವರ ಆಡಳಿತದಲ್ಲಿ ಸಾರಿಗೆ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದರು. ತದನಂತರ 1972ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಬಡವರಿಗೆ ಹೆಚ್ಚಿನ ಅನುಕೂಲ ಮಾಡಿದರು ಎಂದು ತಿಳಿಸಿದರು.

ಜೀತ ಪದ್ಧತಿ ಹಾಗೂ ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆ ಮತ್ತು ಉಳುವವನೇ ಭೂಮಿಯ



**ದೇವರಾಜ ಅರಸು 109ನೇ ಜಯಂತಿ ಕಾರ್ಯಕ್ರಮದಲ್ಲಿ ಬಿ.ಬಿ. ರೇವಣನಾಯ್ಕ್ ಉಪನ್ಯಾಸ**

ಒಡೆಯ ಯೋಜನೆ ಸೇರಿದಂತೆ ಅನೇಕ ಕಾರ್ಯಗಳ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಹಿಂದುಳಿದ ವರ್ಗಗಳ ಸಮಿತಿಯ ಗೌರವ ಅಧ್ಯಕ್ಷ ಹೆಚ್.ಕೆ. ಕೊಟ್ರಪ್ಪ ಮಾತನಾಡಿ, ಅರಸು ಅವರು ಬಡವರ ಪಾಲಿನ ಕಾಮಧೇನು ಆಗಿದ್ದರು. ಇಂತಹ ವಿಶೇಷ ವ್ಯಕ್ತಿಯ ಆದರ್ಶಗಳನ್ನು ಇಂದಿನ ಯುವಕರು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ತಹಶೀಲ್ದಾರ್ ಗುರು ಬಸವರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ತಾ.ಪಂ ಇಓ ಸುಮಲತಾ ಎಸ್.ಪಿ. ಚಂದ್ರಶೇಖರ್, ಸಿಪಿಐ ಎಸ್. ದೇವಾನಂದ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಇಇ ಆಸ್ಮಾಬಾನು, ಕೃಷಿ ಇಲಾಖೆಯ ಎಇಇ ನಾರನಗೌಡ, ಲೋಕೋಪಯೋಗಿ ಇಲಾಖೆಯ ಎಇಇ ಸುಂದರೇಶ್, ಕಾಡಾ ಇಲಾಖೆಯ ಎಇಇ ಕವನ, ಹಿಂದುಳಿದ ವರ್ಗಗಳ ಇಲಾಖೆಯ ಪಟೇಲ್, ಹಿಂದುಳಿದ ವರ್ಗಗಳ ಸಮಿತಿಯ ಮುಖಂಡರಾದ ವೈ. ಕೃಷ್ಣಮೂರ್ತಿ, ಕೆ.ಬಿ. ರಾಜಶೇಖರ್, ಚಂದ್ರಪ್ಪ, ಬಸಪ್ಪ, ಹನುಮಂತಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ಮಾಜಿ ಅಧ್ಯಕ್ಷ ಎ.ಕೆ. ಭೂಮೇಶ್, ಎಂ. ಉಮ್ಮಣ್ಣ, ವಿ.ಎ. ಸಮೀರ್, ಸಂತೋಷ್ ಇತರರಿದ್ದರು.

ಭೂಮಿಕಾ ಪ್ರಾರ್ಥಿಸಿದರು. ಆಸ್ಮಾಬಾನು ಸ್ವಾಗತಿಸಿದರು. ಮಂಜುನಾಥ್ ವಂದಿಸಿದರು. ಯಶೋಧ ಮತ್ತು ತಂಡ ನಾಡಗೀತೆ ಗಾಯನ ಮಾಡಿದರು.

# ವಿವಿಧೆಡೆಯಲ್ಲಿ 78ನೇ ಸಂಭ್ರಮದ ಸ್ವಾತಂತ್ರ್ಯೋತ್ಸವ

ದಾವಣಗೆರೆ, ಆ. 20- ನಗರ ಹಾಗೂ ನಗರದ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶ ಸೇರಿದಂತೆ ವಿವಿಧೆಡೆ 78ನೇ ಸ್ವಾತಂತ್ರ್ಯೋತ್ಸವವನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

**ದಾವಣಗೆರೆ**

**ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ :** ಪೊಲೀಸ್ ಡಿವೈಎಸ್ಪಿ ಪದ್ಮಶ್ರೀ ಗುಂಜಿಕರ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಪ್ರಾಚಾರ್ಯೆ ಜೆ.ಎಸ್. ವನಿತಾ, ಶಾಲೆಯ ಮುಖ್ಯಸ್ಥ ಮಂಜುನಾಥ್ ರಂಗರಾಜು, ಶೈಕ್ಷಣಿಕ ಮುಖ್ಯಸ್ಥ ಎಂ. ವಾಸಿಮ್ ಪಾಷಾ, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಶೀಬಾರಾಣಿ, ಪಿ.ವಿ. ಪ್ರಭು, ಆರ್. ಸವಿತಾ ಮತ್ತು ಸಿಬ್ಬಂದಿ ಇದ್ದರು.

**ಜೈನ್ ವಿದ್ಯಾಲಯ :** ವಿದ್ಯಾಲಯದ ಸ್ಟೇಟ್ ಸಿಲಬಸ್, ಸಿಬಿಎಸ್‌ಸಿಇ ಹಾಗೂ ಪಿಯು ಕಾಲೇಜಿನಿಂದ ಧ್ವಜಾರೋಹಣ ನೆರವೇರಿಸಲಾಯಿತು. ಕಾಲೇಜಿನ ಅಧ್ಯಕ್ಷ ಎಚ್. ರಮೇಶ ಕುಮಾರ್, ಕಾರ್ಯದರ್ಶಿ ಜೆ. ರಮೇಶ ಕುಮಾರ್ ಹಾಗೂ ಇತರೆ ಆಡಳಿತ ಮಂಡಳಿಯ ಸದಸ್ಯರು, ಮುಖ್ಯೋಪಾಧ್ಯಾಯರು, ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿದ್ದರು.

**ವೀರಮಾಹೇಶ್ವರ ಕ್ರೆಡಿಟ್ ಕೋ-ಆಪ್ ಸೊಸೈಟಿ :** ಸೊಸೈಟಿಯ ಅಧ್ಯಕ್ಷ ವೀರಭದ್ರಸ್ವಾಮಿ ತ್ಯಾವಣಿಗೆ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷ ಸಿ. ಪಂಚಾಕ್ಷರಯ್ಯ ಬಸಾಪುರ, ನಿರ್ದೇಶಕರಾದ ಎಂ.ಎಲ್.ಆರ್. ಬಸವರಾಜಯ್ಯ, ಬಿ.ಎಂ. ರವಿ, ಆರ್.ಎಂ ವೀರಯ್ಯ, ರೇಖಾ, ಪ್ರಭಾರಿ ಕಾರ್ಯದರ್ಶಿ ನಾಗರಾಜಯ್ಯ ಐನಳ್ಳಿ ಮಠ, ಸಿಬ್ಬಂದಿ ತನುಜಾ, ವಿನಯ್ ಕುಮಾರ್, ರಾಜೇಂದ್ರ ಪ್ರಸಾದ್, ಗಣೇಶ್, ಚಂದ್ರಿಕಾ, ಪಿಗ್ಮಿ ಸಂಗ್ರಾಹಕರಾದ ಸುರೇಶ್, ನಾಗರಾಜ್, ಮಂಜು, ವೀರಯ್ಯ ಇದ್ದರು.

**ಮಹಿಳಾ ಬಸವ ಕೇಂದ್ರ :** ಸತೀಶ್ ಪೂಜಾರಿ ಧ್ವಜಾರೋಹಣ ನೆರವೇರಿಸಿ ದರು. ಬಸವ ಕೇಂದ್ರದ ಅಧ್ಯಕ್ಷೆ ಮಹಾದೇವಮ್ಮ ಮಲ್ಲಿಕಾರ್ಜುನ, ಕೇರಂ ಗಣೇಶ್, ಎಸ್. ಮನು, ಹನುಮಂತ ಬಾಲ, ಕಾರ್ತಿಕ್, ಶ್ರೀನಿವಾಸ ರೆಡ್ಡಿ, ಮಹಾಂತೇಶ್, ಸುನೀಲ್ ಕುಮಾರ್, ರಾಜು, ವಿಶಾಲ, ರಿಯಾಜ್ ಗಿಡ್ಡಣ್ಣ, ಲಲಿತ, ಸುಜಾತ, ನಸೀರ್, ಶಾಂತಲಾ, ಶಾಂತ, ಸುಜನ, ಲೀಲಾ, ಲಕ್ಷ್ಮಿ, ಸುಜಾತಾ ಇದ್ದರು. ಗಗನ್, ತೇಜಸ್ವಿನಿ, ಅಯಾನ್ ಸ್ವಾತಂತ್ರ ಹೋರಾಟಗಾರರ ವೇಷ ಧರಿಸಿ ಎಲ್ಲರ ಗಮನ ಸೆಳೆದರು.

**ಮಹಾಲಕ್ಷ್ಮಿದೇವಿ ಮಹಿಳಾ ಸ್ವಸಹಾಯ ಸಂಘ :** ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಧ್ವಜಾರೋಹಣ ನೆರವೇರಿಸಿದರು. ಸಂಘದ ಸದಸ್ಯರಾದ ಮಹಾಲಕ್ಷ್ಮೀದೇವಿ, ಪೂರ್ಣಿಮಾ, ಶಾಂತಮ್ಮ ಮಂಜಮ್ಮ ಚೈತ್ರಾ, ಎಸ್. ನೇತ್ರಾ, ಎನ್. ಶ್ವೇತಾ, ತ್ರಿವೇಣಿ, ನಳಿನಮ್ಮ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಮಂಜುನಾಥ, ಕೇರಂ ಗಣೇಶ್, ಎಸ್. ಮಾನು, ಸುರೇಶ್, ಗುರು, ಹನುಮಂತ ಬಾಲ, ಚಂದ್ರು, ಲಕ್ಷ್ಮಣಪ್ಪ, ಬಸವರಾಜಪ್ಪ ಮತ್ತಿತರರಿದ್ದರು.


**ಕರ್ನಾಟಕ ರಕ್ಷಣಾ ವೇದಿಕೆ :** ಸಂಗೊಳ್ಳಿ ರಾಯಣ್ಣ ಜನ್ಮ ದಿನೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಶ್ರೀನಿವಾಸ್ ಚಿನ್ನಿಕಟ್ಟೆ, ನಾಗರಾಜ್, ಗಿರೀಶ್ ಕುಮಾರ್, ಖಾದರ್ ಭಾಷಾ, ಈಶ್ವರ್, ಸುರೇಶ್, ಧೀರೇಂದ್ರ, ಚಂದ್ರು, ಗುರುಮೂರ್ತಿ, ಜಬಿವುಲ್ಲಾ, ಆಟೋ ರಫೀಕ್, ದಾದಾಪೀರ್, ಅಯೂಬ್, ಗೋಪಾಲ್ ದೇವರ ಮನೆ, ಪ್ರದೀಪ್, ಭಾಷಾ ಸಾಬ್, ಧರ್ಮರಾಜ್, ಪರಮೇಶ್, ಮಂಜು, ಪ್ರಕಾಶ್, ಕರಿಬಸಪ್ಪ, ಸಂಜು, ಪರಶುರಾಮ್, ಚಂದ್ರು, ತುಳಸಿ ರಾಮ್, ಮಂಜುನಾಥ್, ಬಸವರಾಜ್, ಜಿ.ಎಸ್. ಸಂತೋಷ್, ಎನ್.ಬಿ.ಎ. ಲೋಕೇಶ್, ತನ್ವೀರ್, ಮುಸ್ತಫಾ, ಬಾಷಾ, ಬಿ. ಮಂಜುಳಾ ಗಣೇಶ್, ಮಂಜುಳಾ ಮಾಂತೇಶ್, ಶಾಂತಮ್ಮ, ಕವಿತಾ, ಆಲೂರ್ ನಾಗಮ್ಮ, ಅರುಣ, ಸಂಜು ಇದ್ದರು.

**ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ :** ವಿಶ್ರಾಂತ ಪ್ರಾಧ್ಯಾಪಕ ಗಂಗಾಧರಯ್ಯ ಹಿರೇಮಠ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಎಂ.ಬಿ ಸಂಗಮೇಶ್ವರ ಗೌಡ ಮಾತನಾಡಿದರು. ಸಂಸ್ಥೆಯ ಆಡಳಿತಾಧಿಕಾರಿ ಎಸ್.ಆರ್. ಶಿರಗಂಬಿ, ಶಾಲಾ ಮುಖ್ಯಸ್ಥರಾದ ಎ.ಎಸ್. ಕುಸುಮ, ಎಸ್. ಮಂಜುನಾಥ್, ಡಾ.ಪಿ.ಎಂ. ಪ್ರೇಮಾ, ಡಾ.ಜಿ.ಎನ್.ಎಚ್. ಕುಮಾರ್, ಎಸ್. ಪ್ರಸಾದ್ ಬಂಗೇರ ಮತ್ತು ಶಿಕ್ಷಕರಿದ್ದರು.

**ಡಾ. ಎಸ್. ಎಸ್. ಎನ್. ಪಿ. ಶಾಲೆ :** ವಿದ್ಯಾಸಂಸ್ಥೆಯ ಡೀನ್ ಮಂಜುನಾಥ ರಂಗರಾಜು ಅಧ್ಯಕ್ಷತೆ ವಹಿಸಿದ್ದರು. ಬಿಎಸ್‌ಎಫ್ ಅಕಾಡೆಮಿಯ ಟ್ರೈನಿಂಗ್ ಇನ್‌ಸ್ಪೆಕ್ಟರ್ ಮಂಜಾನಾಯ್ಕ ಧ್ವಜಾ ರೋಹಣ ನೆರವೇರಿಸಿದರು. ಪ್ರಾಚಾರ್ಯೆ ಕಮಲ್ ಬಿ. ನಾರಾಯಣ್ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಮಾತನಾಡಿದರು. ಉಪಪ್ರಾಚಾರ್ಯ ರಮೇಶ್ ಬಾಬು, ಶಾಲಾ ಸಂಯೋಜಕಿ ರುತಿಕಾ ಮತ್ತು ಇತರರು ಉಪಸ್ಥಿತರಿದ್ದರು.

**ರಾಮನಗರದ ಗಾಂಧಿ ಭವನ :** ಬಳ್ಳಾರಿ ಸಿದ್ದಮ್ಮನವರ ಮೊಮ್ಮಗ ಚಿತ್ರಿಕಿ ಶಿವಕುಮಾರ್ ಧ್ವಜಾರೋಹಣ ನೆರವೇರಿಸಿದರು.

**ತರಳಬಾಳು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ :** ಶಾಲೆಯ ಸಲಹಾ ಸಮಿತಿಯ ಅಧ್ಯಕ್ಷ ಎಸ್. ಸುರೇಂದ್ರಪ್ಪ ಧ್ವಜಾರೋಹಣ ನೆರವೇರಿಸಿ, ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನದ ಬಗ್ಗೆ ತಿಳಿಸಿದರು. ಉಪಾಧ್ಯಕ್ಷ ಬಿ.ಟಿ. ಮರುಳ ಸಿದ್ದಪ್ಪ, ಸದಸ್ಯರಾದ ಕೆ.ಎನ್. ಕಲ್ಲಪ್ಪ, ಸಿ. ವಿಜಯ ಕುಮಾರ್, ಟಿ. ರೇವಣಸಿದ್ದಪ್ಪ, ಕೆ.ಬಿ. ಲಿಂಗರಾಜ್, ಕೆ.ಬಿ. ಪ್ರಕಾಶ್, ಕೆ.ಬಿ. ಮರುಳಪ್ಪ, ಪ್ರದೀಪ್ ಕುಮಾರ್, ಮಹೇಂದ್ರ, ಶಾಲಾ ಸಿಬ್ಬಂದಿ, ಪಾಲಕರು, ವಿದ್ಯಾರ್ಥಿಗಳಿದ್ದರು.



**ಆವರಗೆರೆ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆ :** ಕೃಷಿ ಪತ್ತಿನ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಪರಮೇಶ್ವರಪ್ಪ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಪ್ರಾಥಮಿಕ ವಿಭಾಗದ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಧರಿಸಿ, ಎಲ್ಲರನ್ನೂ ಆಕರ್ಷಿಸಿದರು. ಸಹ ಶಿಕ್ಷಕಿ ತೇಜಶ್ವಿನಿ ಹಾಗೂ ಸುಗ್ಗಲಾದೇವಿ ಸ್ವಾತಂತ್ರ್ಯೋತ್ಸವದ ಬಗ್ಗೆ ಮಾತನಾಡಿದರು.

**ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ :** ಕಲಾಕುಂಚ ಸಮಿತಿ ಸದಸ್ಯ ವಿ. ಶಾಂತಪ್ಪ ಪೂಜಾರಿ ಧ್ವಜಾರೋಹಣ ನೆರವೇರಿಸಿದರು. ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮ ನಿರೂಪಿಸಿ ಮಾತನಾಡಿದರು. ಶ್ರೀಮತಿ ಚಂದ್ರಶೇಖರ ಅಡಿಗ ಪ್ರಾರ್ಥಿಸಿದರು. ಕೆ.ಸಿ. ಉಮೇಶ್ ಸ್ವಾಗತಿಸಿದರು. ಶ್ರೀಮತಿ ಜ್ಯೋತಿ ಗಣೇಶ್ ಶೆಣೈ, ಶ್ರೀಮತಿ ವಾಸಂತಿ ಮಂಜುನಾಥ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ, ಕೆ.ಹೆಚ್. ಮಂಜುನಾಥ್, ಶ್ರೀಮತಿ ಪ್ರಭಾ ರವೀಂದ್ರ, ವಿ. ಕೃಷ್ಣಮೂರ್ತಿ, ಅಬ್ದುಲ್ ಸತ್ತಾರ್ ಸಾಬ್, ಮುಕ್ತಾ ಶ್ರೀನಿವಾಸಪ್ರಭು, ಲೀಲಾ ಸುಭಾಷ್, ಭಾರತಿ ರಾಮನಾಥ್ ಖಮಿತ್ಕರ್, ನಿರ್ಮಲ ರಾಜೇಂದ್ರಬಾಬು, ಸುಚಿತ್ರ ಗಣೇಶ್ ರಾವ್, ಶೋಭಾ ಸುರೇಶ್‌ಬಾಬು, ಮಮತಾ ಕೊಟ್ರೇಶ್, ಸುಮಾ ಏಕಾಂತಪ್ಪ, ಲಕ್ಷ್ಮಿ ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

ಕಲಾಕುಂಚ ಕಛೇರಿಯ ಹೊರಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಕಛೇರಿ ಕಾರ್ಯದರ್ಶಿ ಎಂ.ಎನ್.ಪ್ರಸಾದ್ ವಂದಿಸಿದರು.

**ಶ್ರೀ ಜಗದ್ಗುರು ಜಯವಿಭವ ವಿದ್ಯಾ ಸಂಸ್ಥೆ :** ಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್.ಚಿಗಟೇರಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರು ಸ್ವಾತಂತ್ರ್ಯೋತ್ಸವ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಮುಖ್ಯ ಶಿಕ್ಷಕ ಸುರೇಶ್‌ನಾಯ್ಕ್, ಗುರುಬಸಮ್ಮ ವಿ.ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಹೆಚ್. ನಿಂಗಪ್ಪ, ಗುರುಬಸಮ್ಮ ವಿ. ಚಿಗಟೇರಿ ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ವೀರಮ್ಮ ಎಂ.ಎಸ್. ಸೇರಿದಂತೆ ಎಲ್ಲಾ ಶಾಲೆಗಳ ಶಿಕ್ಷಕ ಸಿಬ್ಬಂದಿಗಳು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಕೊನೆಯಲ್ಲಿ ಸಿಹಿ ವಿತರಿಸಲಾಯಿತು.

**ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ ಹಾಗೂ ಶ್ರೀ ಬೀರಲಿಂಗೇಶ್ವರ ಪ.ಪೂ. ಕಾಲೇಜು :** ಸಂಘದ ಜಿಲ್ಲಾಧ್ಯಕ್ಷ ಹೆಚ್.ಜಿ. ಗಣೇಶಪ್ಪ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಬಿ.ಬಿ. ಮಲ್ಲೇಶಪ್ಪ, ಎಲ್.ಬಿ. ಭೈರೇಶ್, ವೈ. ಶಶಿಧರ್, ದೇವಿಕುಮಾರ್, ಶ್ರೀ ಬೀರಲಿಂಗೇಶ್ವರ ಪ.ಪೂ. ಕಾಲೇಜಿನ ಪ್ರಾಂಶುಪಾಲ ಹೆಚ್.ಎಸ್. ರಾಜಶೇಖರಪ್ಪ ಉಪಸ್ಥಿತರಿದ್ದು, ಮಾತನಾಡಿದರು. ಕಾರ್ಯಕ್ರಮದಲ್ಲಿ ಪಿ.ಬಿ. ಬೀರಪ್ಪ, ವೈ. ವಿರೂಪಾಕ್ಷಪ್ಪ, ಬಿ. ಗುಡ್ಡಪ್ಪ, ಕೆ. ರೇವಣಸಿದ್ದಪ್ಪ, ಮನು, ರಮೇಶ್, ವಿದ್ಯಾವರ್ಧಕ ಸಂಘ, ಕಾಲೇಜು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಮಾನಸಧಾರಾ ಸಮುದಾಯ ಮಾನಸಿಕ ಆರೋಗ್ಯ ಕೇಂದ್ರ :** ಆರೋಗ್ಯ ಇಲಾಖೆಯ ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ ಎಂ. ಸಂತೋಷ್‌ಕುಮಾರ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಮಲ್ಲೇಶಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಶ್ರೀಮತಿ ಜಯಲಕ್ಷ್ಮಿ, ಸಂಸ್ಥೆಯ ನಿರ್ದೇಶಕರಾದ ದಿವ್ಯ ಸಂತೋಷ್, ಆರೋಗ್ಯ ಇಲಾಖೆಯ ಆಪ್ತ ಸಮಾಲೋಚಕ ಚಂದನ್, ಎಪಿಡಿ ಸಂಸ್ಥೆಯ ಸಿಬ್ಬಂದಿ ಶಂಕ್ರಮ್ಮ, ಮಾನಸಧಾರಾ ಸಂಸ್ಥೆಯ ಸಿಬ್ಬಂದಿಗಳಾದ ಹರೀಶ್, ಮಂಜುನಾಥ್, ವಿಜಯ, ದಿನೇಶ್ ಉಪಸ್ಥಿತರಿದ್ದರು.

**ರೋಟರಿ ಕ್ಲಬ್ - ಇನ್ನರ್‌ವ್ಹೀಲ್ ಕ್ಲಬ್ :** ರೋಟರಿ ಕ್ಲಬ್ ಹಾಗೂ ಇನ್ನರ್‌ವ್ಹೀಲ್ ಸಮೂಹ ಸಂಸ್ಥೆಗಳ ವತಿಯಿಂದ ಸ್ವಾತಂತ್ರ್ಯೋತ್ಸವ ಆಚರಿಸಲಾ ಯಿತು. ನಿವೃತ್ತ ಯೋಧ ಓ.ಬಿ. ಶಶಿಕಾಂತ್ ಧ್ವಜಾರೋಹಣ ನೆರವೇರಿಸಿದರು.

ಹಿರಿಯ ರೋಟೇರಿಯನ್ ಚಿಗಟೇರಿ ಮುರುಗೇಶ್ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದಾವಣಗೆರೆಯ ಕೊಡುಗೆ ಬಗ್ಗೆ ಮಾತನಾಡಿದರು.

ರೋಟರಿಯ ರಾಜ್ಯಪಾಲ ನಯನ್ ಪಾಟೀಲ್, ಅಧ್ಯಕ್ಷ ಕಿಶನ್, ಇನ್ನರ್‌ವ್ಹೀಲ್ ಅಧ್ಯಕ್ಷೆ ಪ್ರತಿಭಾ ಪಡೆಗಲ್, ಸಿ.ಕೆ. ರಂಗಪ್ಪ, ವಿಶ್ವಜಿತ್ ಜಾಧವ್, ಗಜಾನನ ಭೂತೆ, ರಮೇಶ್ ಅಂಬರ್‌ಕರ್, ಬ್ರಿಜೇಶ್, ನಾಗರಾಜ್ ಜಾಧವ್, ಮೃತ್ಯುಂಜಯ, ಸುನೀತ ಮೃತ್ಯುಂಜಯ, ಪವನ್, ಅಶೋಕ್ ರಾಯಭಾಗಿ, ಸುಜೀತ್ ಕುಮಾರ್, ಬಸವರಾಜ, ಈಶ್ವರ್‌ಸಿಂಗ್, ಪುಟ್ಟೇಶ್, ಶಂಕರ್ ಪಾಟೀಲ್, ಮಹಮ್ಮದ್ ಗೌಸ್, ಸಮೀರಾಬಾನು, ಉಮೇಶ್ (ಸಿ.ಎ), ಎ.ಎನ್. ಶಿವಕುಮಾರ್ ಇನ್ನಿತರರಿದ್ದರು.

**ಕರ್ನಾಟಕ ರಾಜ್ಯ ಸರ್ವ ಜನಾಂಗದ ಏಕತಾ ರಕ್ಷಣಾ ಸಮಿತಿ :** 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಕರ್ನಾಟಕ ರಾಜ್ಯ ಸರ್ವ ಜನಾಂಗದ ಏಕತಾ ರಕ್ಷಣಾ ಸಮಿತಿ ವತಿಯಿಂದ ಕೇಂದ್ರ ಕಚೇರಿಯಲ್ಲಿ ಆಚರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ನಗರ ಪಾಲಿಕೆ ಆಶ್ರಯ ಸಮಿತಿ ಸದಸ್ಯರೂ ಆದ ಸರ್ವ ಜನಾಂಗದ ಏಕತಾ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಶಾಮನೂರಿನ ಕಣ್ಣಾಳ ಅಂಜಿನಪ್ಪ ಅವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸರ್ಕಾರಿ ಶಾಲೆಯ ಬಡ ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಬಿಜೆಪಿ ಮುಖಂಡ ಶ್ರೀನಿವಾಸ ದಾಸಕರಿಯಪ್ಪ, ಪಾಲಿಕೆ ಸದಸ್ಯ ಎಲ್.ಡಿ. ಗೋಣಪ್ಪ, ಮಹಿಳಾ ಅಧ್ಯಕ್ಷರಾದ ಶ್ರೀಮತಿ ಮಂಜುಳಮ್ಮ, ಗೌರವಾಧ್ಯಕ್ಷ ಮಾರುತಿ ರಾವ್, ಜಿಲ್ಲಾಧ್ಯಕ್ಷ ಹನುಮಂತ್, ಗಿರೀಶ್, ಯುಸೂಫ್, ಸಮೀರ್, ಅಳಗವಾಡಿ ನಿಂಗರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಿಕ್ಷಕಿ ಶ್ರೀಮತಿ ರತ್ನಮ್ಮ ವಂದಿಸಿದರು.

**ಶಿರಮಗೊಂಡನಹಳ್ಳಿ**

**ಅನ್‌ಮೋಲ್ ವಿದ್ಯಾ ಸಂಸ್ಥೆ :** ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಜಂಟಿ ಕಾರ್ಯದರ್ಶಿ ಕೆ.ಇ. ಭೈರೇಶ್ ಧ್ವಜಾರೋಹಣ ನೆರವೇರಿಸಿದರು. ಶಾಲೆಯ ಪ್ರಾಚಾರ್ಯ ಯು. ಕೊಟ್ರೇಶ್ ಹಾಗೂ ಸಹ ಶಿಕ್ಷಕ ಅಶೋಕ ಗೌಡ ಸ್ವಾತಂತ್ರ್ಯೋತ್ಸವದ ಬಗ್ಗೆ ಮಾತನಾಡಿದರು. ಎಲ್. ಸುಬ್ರಮಣ್ಯ, ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿದ್ದರು.

**ಹರಿಹರ**

**ಬನ್ನಿಕೋಡು : ಜ್ಞಾನ ದೀಕ್ಷಾ ಸೆಂಟ್ರಲ್ ಸ್ಕೂಲ್ :** ಶಾಲೆಯ ಕಾರ್ಯದರ್ಶಿ ಹಾಗೂ ತಾ.ಪಂ. ಮಾಜಿ ಸದಸ್ಯರಾದ ಮಂಜುಳಾ ಅಣಬೇರು ಶಿವಮೂರ್ತಿ ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು.

**ರಾಣೇಬೆನ್ನೂರು**

**ಖನ್ನೂರು ವಿದ್ಯಾನಿಕೇತನ ಸ್ಕೂಲ್ :** ಸಂಸ್ಥೆಯ ಅಧ್ಯಕ್ಷ ಡಾ.ಎಂ. ಪ್ರವೀಣ ಖನ್ನೂರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಡಾ. ಶೈಲಶ್ರೀ ಪಿ. ಖನ್ನೂರ ಮಾತನಾಡಿದರು. ಶಾಲಾ ವಿದ್ಯಾರ್ಥಿಗಳಿಂದ ಭಾಷಣ, ದೇಶಭಕ್ತಿ ಗೀತೆ ಹಾಗೂ ಮನರಂಜನೆ ಕಾರ್ಯಕ್ರಮ ನಡೆಯಿತು. ಗಾಯತ್ರಿ ವಂದಿಸಿದರು. ಲಕ್ಷ್ಮಿ ಆಡೂರ ಮತ್ತು ಪರ್ಣಿಕಾ ನಿರೂಪಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ನಾಗೇಶ ಮುರುಡಣ್ಣ, ಶಾಲೆಯ ಪ್ರಾಚಾರ್ಯ ಮನೀಶ್ ಅರಿಂಬಿಲ್, ಪಿಯು ಕಾಲೇಜಿನ ಪ್ರಾಚಾರ್ಯ ಸುಬ್ಬರಾವ ಕಟಕಮ್, ಪೂರ್ವ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಬೆರಿಲ್ ಡಾಸನ್, ಬಿ.ಸಿ. ಮೋನಶ್ರೀ, ಸಂಸ್ಥೆಯ ಸಿಬ್ಬಂದಿ, ಪಾಲಕರು ಹಾಗೂ ವಿದ್ಯಾರ್ಥಿಗಳಿದ್ದರು.

# ವೈದ್ಯರ ಸುರಕ್ಷತೆಗೆ ಸಮಿತಿ ರಚನೆ

**(1ನೇ ಪುಟದಿಂದ)** ತೆಗೆದುಕೊಳ್ಳಬೇಕಿತ್ತು. ಆಸ್ಪತ್ರೆಯ ಆವರಣದಲ್ಲಿ ತನಿಖೆ ನಡೆಯಬೇಕಿದ್ದ ಕಾರಣ ಈ ವಿಷಯ ಮತ್ತಷ್ಟು ಪ್ರಾಮುಖ್ಯತೆ ಪಡೆದುಕೊಂಡಿತ್ತು. ಆಸ್ಪತ್ರೆಯ ಆವರಣ ಧ್ವಂಸಗೊಳಿಸುವ ಪರಿಸ್ಥಿತಿ ಎದುರಿಸಲು ಸರ್ಕಾರ ಏಕೆ ಸಿದ್ಧವಾಗಿರಲಿಲ್ಲ ಎಂಬುದನ್ನು ಊಹಿಸಲು ಆಗುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವೈದ್ಯಕೀಯ ಕಾಲೇಜಿನ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರು, ಈ ಪ್ರಕರಣವನ್ನು ಆತ್ಮಹತ್ಯೆ ಎಂದು ಬಿಂಬಿಸಲು ಪ್ರಯತ್ನ ನಡೆಸಿದ್ದು ಹಾಗೂ ಮೃತ ವೈದ್ಯೆಯ ಪೋಷಕರು ಹಲವು ಗಂಟೆಗಳ ಕಾಲ ಮೃತ ದೇಹವನ್ನು ನೋಡಲು ಬಿಡದೇ ಇದ್ದ ಬಗ್ಗೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ.

ಪ್ರಾಂಶುಪಾಲ ಏನು ಮಾಡುತ್ತಿದ್ದರು? ಈ ಪ್ರಕರಣ ಆತ್ಮಹತ್ಯೆ ಎಂದು ಹೇಳಿ ಏಕೆ ನಿರ್ಲಕ್ಷಿಸಲಾಗಿತ್ತು ಹಾಗೂ ಎಫ್ಐಆರ್ ಏಕೆ ದಾಖಲಿಸಿರಲಿಲ್ಲ? ತಡರಾತ್ರಿ ಏಕೆ ಪೋಷಕರಿಗೆ ಮೃತ ದೇಹ ಹಸ್ತಾಂತರಿಸಲಾಗಿತ್ತು? ಆಸ್ಪತ್ರೆ ಮೇಲೆ ಮರುದಿನ ದಾಳಿ ನಡೆದಾಗ ಪೊಲೀಸರು ಏನು ಮಾಡುತ್ತಿದ್ದರು? ವಿಧ್ವಂಸಕರು ಆಸ್ಪತ್ರೆ ಪ್ರವೇಶಿಸಲು ಪೊಲೀಸರು ಅವಕಾಶ ನೀಡಲು ಹೇಗೆ ಸಾಧ್ಯವಾಯಿತು? ಪ್ರಾಂಶುಪಾಲ ರಾಜೀನಾಮೆ ನೀಡಿದ ನಂತರ ಮತ್ತೊಂದು ಆಸ್ಪತ್ರೆಗೆ ಹೇಗೆ ಕಳಿಸಲಾಯಿತು? ಅವರ ವರ್ತನೆಯೇ ಪ್ರಶ್ನಾರ್ಹವಾಗಿರುವಾಗ ತಕ್ಷಣವೇ ಮತ್ತೊಂದು ಕಡೆ ಏಕೆ ನೇಮಿಸಲಾಯಿತು? ಎಂದು ಸುಪ್ರೀಂ ಕೋರ್ಟ್ ಪ್ರಶ್ನೆಗಳನ್ನು ಮುಂದಿಟ್ಟಿದೆ.

ಕೊಲ್ಕತ್ತಾದ ಘಟನೆ ಕೇವಲ ಭಯಾನಕ ಹತ್ಯೆಯಷ್ಟೇ ಅಲ್ಲ, ವೈದ್ಯರ ಸುರಕ್ಷತೆ ವ್ಯವಸ್ಥೆಗಳ ಕುರಿತು ಪ್ರಶ್ನೆಗಳನ್ನು ಹುಟ್ಟು ಹಾಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆಸ್ಪತ್ರೆಯಲ್ಲಿ ಗುಂಪು ಹಿಂಸಾಚಾರ ನಡೆದಿದ್ದು ಹಾಗೂ ಈ ವೇಳೆ ಸ್ಥಳದಿಂದ ಕೊಲ್ಕತ್ತಾ ಪೊಲೀಸರು ಪರಾರಿಯಾಗಿದ್ದರು ಎಂಬ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ವೈದ್ಯರು ಕೆಲಸ ಪುನರಾರಂಭಿಸುವಂತೆ ಮಾಡಲು ಆಸ್ಪತ್ರೆಗೆ ಸಿ.ಐ.ಎಸ್.ಎಫ್. ಪಡೆಗಳನ್ನು ನಿಯೋಜಿಸಲು ತಿಳಿಸಿದೆ.

ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿರುವವರ ಮೇಲೆ ಸರ್ಕಾರಿ ಬಲ ಬಳಸಬಾರದು. ಈ ಹಂತದಲ್ಲಿ ಸಂವೇದನೆಯಿಂದ ನಡೆದುಕೊಳ್ಳಬೇಕು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

ವೈಸ್ ಅಡ್ಮಿರಲ್ ಆರತಿ ಸಾರಿನ್ ಅವರ ನೇತೃತ್ವದ ಹತ್ತು ಸದಸ್ಯರ ರಾಷ್ಟ್ರೀಯ ಕಾರ್ಯ ಪಡೆ ರಚಿಸಿರುವ ಸುಪ್ರೀಂ ಕೋರ್ಟ್, ಆರೋಗ್ಯ ವಲಯದ ವೃತ್ತಿಪರರ ಸುರಕ್ಷತೆ ಕುರಿತು ಮೂರು ವಾರಗಳಲ್ಲಿ ಮಧ್ಯಂತರ ವರದಿ ನೀಡುವಂತೆ ತಿಳಿಸಿದೆ.

ಈ ಬಗ್ಗೆ ತನಿಖೆ ನಡೆಸಿರುವ ಸಿಬಿಐ, ತನಿಖೆ ಯಾವ ಹಂತದಲ್ಲಿದೆ ಎಂಬ ಕುರಿತ ವಿವರಗಳನ್ನು ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆಸ್ಪತ್ರೆಯಲ್ಲಿ ವಿಧ್ವಂಸಕ ಕೃತ್ಯ ನಡೆಸಿದವರ ವಿರುದ್ಧ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಪಶ್ಚಿಮ ಬಂಗಾಳ ಸರ್ಕಾರ ವರದಿ ನೀಡಬೇಕು ಎಂದು ತಿಳಿಸಲಾಗಿದೆ.

ಸಂತ್ರಸ್ತೆಯ ಹೆಸರು, ಚಿತ್ರಗಳು ಹಾಗೂ ಮೃತ ದೇಹದ ವಿಡಿಯೋಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಿರುವ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

## ಕುರ್ಕಿ ಬಳಿಯ ನಾಲೆ ಸೇತುವೆ ಕುಸಿತ

**(1ನೇ ಪುಟದಿಂದ)** ಸಂಚಾರ, ವಾಹನ ಸಂಚಾರ ತಡೆದಿದ್ದಾರೆ.

ಶಾಸಕ ಕೆ.ಎಸ್.ಬಸವಂತಪ್ಪ ಸ್ಥಳಕ್ಕೆ ಭೇಟಿ ನೀಡಿ ಕುಸಿದು ಬಿದ್ದ ಸೇತುವೆ ಪರಿಶೀಲನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತು ದುರಸ್ತಿ ಮಾಡಲು ಸೂಚಿಸಿದರು. ನೀರಾವರಿ ಇಲಾಖೆಯ ಎಇಇ ಮನೋಜ್, ಇಇ ಮಂಜುನಾಥ್, ಇಂಜಿನಿಯರ್ ಸತೀಶ್, ಗ್ರಾಮಸ್ಥರಾದ ನಂದ್ಯಪ್ಪ, ವೀರೇಂದ್ರ, ಚಾರ್ಯ, ಶಿವಜ್ಜ, ಮರುಳಸಿದ್ದಪ್ಪ, ಹಾಲೇಶ್, ಕಾಟೇಹಳ್ಳಿ ಹನುಮಂತಪ್ಪ, ಹಾಲೇಶಪ್ಪ, ರಾಮಗೊಂಡಹಳ್ಳಿ ಮಲ್ಲಿಕಾರ್ಜುನ್ ಮತ್ತಿತರರಿದ್ದರು.

# ತೆರೆಮರೆಯಲ್ಲಿ ಸಿಎಂ ಗಾದಿಗೆ ಪೈಪೋಟಿ?

**(1ನೇ ಪುಟದಿಂದ)** ಸೇರಿದಂತೆ ಕೆಲವು ಮಂತ್ರಿಗಳು ಬಹಿರಂಗವಾಗಿ ಹೇಳಿಕೆ ನೀಡಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ನಾವು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲ. ನಮಗೆ ಸಿದ್ದರಾಮಯ್ಯ ಅವರೇ ನಾಯಕರು, ಅವರು ಪೂರ್ಣಾವಧಿ ಅಧಿಕಾರದಲ್ಲಿ ಇರುತ್ತಾರೆ. ಒಂದು ವೇಳೆ ಪರಿಸ್ಥಿತಿ ಬದಲಾದರೆ, ಅಂತಹ ಸಂದರ್ಭದಲ್ಲಿ ಪರಿಶಿಷ್ಟ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಆಗಲಿ ಎಂಬ ಹೇಳಿಕೆ ನೀಡಿದ ಬೆನ್ನಲ್ಲೇ ಆ ಸಮುದಾಯಕ್ಕೆ ಸೇರಿದ ನಾಯಕರುಗಳ ಸಭೆ ಸರಣಿಯಲ್ಲಿ ನಡೆಯಿತು.

ಈ ಹಿನ್ನೆಲೆಯಲ್ಲಿ ಡಾ.ಪರಮೇಶ್ವರ್, ಜಾರಕಿಹೊಳಿ ಅವರು ಪಕ್ಷದ ವರಿಷ್ಠರನ್ನು ಸಂಪರ್ಕಿಸಿ ಸರ್ಕಾರದಲ್ಲಿ ಪರಿಸ್ಥಿತಿಗಳು ಏರುಪೇರಾದರೆ ನಮಗೆ ಅವಕಾಶ ನೀಡಿ ಎಂದು ಕೋರಿದ್ದಾರೆ ಎನ್ನಲಾಗುತ್ತಿದೆ.

ಈ ನಡುವೆ ಹಲವು ಮುಖಂಡರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ರಾಜ್ಯ ರಾಜಕಾರಣಕ್ಕೆ ಬರಲಿ ಎಂಬ ಪ್ರಸ್ತಾಪವನ್ನೂ ಮುಂದಿಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಕೆಳಗಿಳಿಸುವ ಪ್ರಶ್ನೆಯೇ ಇಲ್ಲ

**(1ನೇ ಪುಟದಿಂದ)** ಬಿಜೆಪಿ ಮತ್ತು ಜೆಡಿಎಸ್ ಮುಡಾ ಹಗರಣ ಇಟ್ಟುಕೊಂಡು ಸಿದ್ದರಾಮಯ್ಯ ಅವರನ್ನು ಕುಗ್ಗಿಸಲು ಹೊರಟಿದ್ದಾರೆ, ಅವರನ್ನು ಕುಗ್ಗಿಸಿದರೆ ಸರ್ಕಾರವನ್ನು ಬೀಳಿಸಬಹುದೆಂಬ ಲೆಕ್ಕಾಚಾರ ಅವರದ್ದಾಗಿದೆ. ಇದೆಲ್ಲವನ್ನು ಗಮನದಲ್ಲಿ ಇಟ್ಟುಕೊಂಡಿರುವ ಪಕ್ಷದ ವರಿಷ್ಠರು ರಾಜಕೀಯವಾಗಿ ತೀರ್ಮಾನ ಕೈಗೊಂಡು ಸಿದ್ದರಾಮಯ್ಯ ಬೆನ್ನಿಗೆ ಬಲವಾಗಿ ನಿಂತಿದ್ದಾರೆ, ಆದ್ದರಿಂದ ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಸಿದ್ದರಾಮಯ್ಯ ವಿರುದ್ಧ ಯಾವುದೇ ಆರೋಪ ಸಾಬೀತಾಗಿಲ್ಲ, ಬೇಕಿದ್ದರೆ ತನಿಖೆ ಆಗಲಿ, ಬಿಜೆಪಿಯ ತೆರೆಮರೆಯ ಆಟ ಕರ್ನಾಟಕದಲ್ಲಿ ನಡೆಯುವುದಿಲ್ಲ ಎಂದರು.

ರಾಜ್ಯಪಾಲರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಸರ್ಕಾರವನ್ನು ಉರುಳಿಸುವ ಪ್ರಯತ್ನ ಮಾಡಿದ್ದಾರೆ. ಬಿಜೆಪಿ ಆಟದಿಂದ ನಾವು ಮತ್ತಷ್ಟು ಗಟ್ಟಿಯಾಗಿ, ಒಂದಾಗಿ ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದ್ದೇವೆ ಎಂದರು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ ದಕ್ಷಿಣ 40x60 (59 ಲಕ್ಷ), 50x80 ಪಶ್ಚಿಮ ರೂ. 2465-00 ಅಡಿಗೆ, 40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ) 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್ಸ್)
97315 63409, 98440 63409
120 ರಸ್ತೆ ಕಮರ್ಷಿಯಲ್ 40x60 ಉತ್ತರ (93 ಲಕ್ಷ)

**ಮನೆ ಬಾಡಿಗೆಗೆ / ಲೀಸ್‌ಗಿದೆ**
#679 ಕಸ್ತೂರಬಾ ಬಡಾವಣೆ, 9ನೇ ಅಡ್ಡ ರಸ್ತೆ, ದಾವಣಗೆರೆ.
1 BHK
ಸಸ್ಯಹಾರಿಗಳಿಗೆ ಮಾತ್ರ.
94800 00417

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಬೇಕಾಗಿದ್ದಾರೆ. ಈರ್ವರಿಗೂ ಸಂಬಳ ರೂ. 26000/- ರೂಂ ಮತ್ತು ಗ್ಯಾಸ್ ಉಚಿತ
97400 98047

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕೆಲಸಗಾರರು ಬೇಕಾಗಿದ್ದಾರೆ**
ದಾವಣಗೆರೆ ನಗರದ ಸುಪ್ರಸಿದ್ಧ ಹೋಟೆಲ್‌ನಲ್ಲಿ ಕೆಲಸ ಮಾಡಲು ಆಲ್-ರೌಂಡರ್ ಹಾಗೂ ಸಪ್ಲೈ ಮಾಡಲು ಮತ್ತು ರುಬ್ಬುವುದಕ್ಕೆ, ತರಕಾರಿ ಕತ್ತರಿಸುವುದಕ್ಕೆ ಪುರುಷರು ಮತ್ತು ಮಹಿಳೆಯರು ಹಾಗೂ ಪಾತ್ರೆಗಳನ್ನು ತೊಳೆಯಲು ಮಹಿಳೆಯರು ಬೇಕಾಗಿದ್ದಾರೆ.
Ph. 96863 63221

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**Property Hub**
• EC
• E-swathu
• Building Licence
• Khatha Change
96118 66449

**Car Loan / ಕಾರ್ ಲೋನ್**
Nationalised / ಸರ್ಕಾರಿ ಬ್ಯಾಂಕಿನಿಂದ ಮನೆಯಲ್ಲೇ ಕುಳಿತು ಕಾರ್ ಲೋನ್ ಪಡೆಯಿರಿ.
50gm ಬೆಳ್ಳಿ ಕಾಯಿನ್ ಉಚಿತವಾಗಿ ಪಡೆಯಿರಿ.
96325 54524
* conditions apply

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**ಮನೆ ಬಾಡಿಗೆಗೆ ಇದೆ**
ವಿವಿ ರೆಸಿಡೆನ್ಸ್, #1876/A, SS A ಬ್ಲಾಕ್, 2ನೇ ಕ್ರಾಸ್, ಪಾರ್ಕ್ ಎದುರು, 2 BHK ನೆಲಮಹಡಿ ಮನೆ, ಕಾರ್ ಪಾರ್ಕಿಂಗ್, ಬೋರ್‌ವೆಲ್ ವ್ಯವಸ್ಥೆ ಇದೆ.
94481 34340
9449615656, 94487 27266

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
98450-35710, 77607-39990

**Sri Nidhi Educational Trust (R)**
ನೇರ ಪರೀಕ್ಷೆಗಳು
SSLC, PUC, BA, B.Com, BCA, MA, M.Com, M.Sc, Diploma Course, BE, B.Tech, B.Lib, M.Lib, MBA, MCA & All Courses
77609 55550

**ಕೆಲಸಕ್ಕೆ ಬೇಕಾಗಿದ್ದಾರೆ**
SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಜ್ಯೋತಿ ಮೆಟಲ್ಸ್
ಹಳೇ ಬಸ್ ಸ್ಟ್ಯಾಂಡ್.ಪಿ.ಬಿ. ರಸ್ತೆ, ಗಣಪತಿ ದೇವಸ್ಥಾನದ ಪಕ್ಕ, ದಾವಣಗೆರೆ.
98800 34643, 94800 51462

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಚನ್ನಗಿರಿ, ಹೊಳಲ್ಕೆರೆ ಹೊನ್ನಾಳಿ, ಹೊಸದುರ್ಗ, ಚಿತ್ರದುರ್ಗ, ಚಳಕೇರಿ, ಹಿರಿಯೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐ.ಟಿ.ಐ. ಮತ್ತು ಡಿಪ್ಲೋಮಾ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ.
ಮೊ.: 9738735156, 9886515100

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**REQUIREMENT**
Receptionist
Age : 20-25
Salary: 10000 - 12000
Hairpoint Hair & beauty lounge, MCC 'B' block, 7th main, 3rd cross, Davanagere.
9738664400, 08192220755

**ಸೈಟು ಮಾರಾಟಕ್ಕಿದೆ**
30x65 ಅಳತೆ ಸೈಟು ನಂ.1 ಬನಶಂಕರಿ ಲೇಔಟ್, ದಾವಣಗೆರೆ ಪಶ್ಚಿಮ ದಿಕ್ಕು, ಸಂಭ್ರಮ ಹೋಟೆಲ್ ಪಕ್ಕದ ರಸ್ತೆ, ಹೈವೇ ಹತ್ತಿರ.
72597 35123

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಸಿರಿಗೆರೆ ಸುತ್ತ (ನೈಟ್) ಪ್ಲಾಂಟ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಬಳ : 10,000, ESI, PF ಸೌಲಭ್ಯವಿರುತ್ತದೆ.
ಜಿ.ಎನ್. ಸೆಕ್ಯೂರಿಟಿ, ದಾವಣಗೆರೆ.
89047 67479

**WANTED**
PUC or Degree Pass or Fail Computer Knowledge is must
EXCELLENT ELECTRONICS
# 2137/1, 4th Main, 3rd Cross, MCC 'A' Block, Davangere - 577 002.
Contact No.
98865 15100

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards, NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**REQUIRED**
OUTDOOR SALES MANGER
NILKAMAL FURNITURE
SS B Block, Opp. Sharadamba Temple, Davanagere.
82967 09299

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**WANTED**
Field Sales Executives for FMCG Products Candidates with bike preffered.
contact
80888 55579

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45, 20x45 (ಅಕ್ಕಪಕ್ಕ) ಪೂರ್ವ ಉತ್ತರ ಕಾರ್ನರ್ ಸೈಟುಗಳು. ದರ 2,500/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**WANTED**
Banking Sector Tele Caller (Female Only)
Qualification : Any Degree.
85500 23110
Interview Time - 11AM

**ಬೇಕಾಗಿದ್ದಾರೆ**
ಪೆಟ್ರೋಲ್‌ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
81478 03755
70266 43088

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಓದುಗರ ಗಮನಕ್ಕೆ**

**ಬಿಲ್ಡಿಂಗ್ ಮಾರಾಟಕ್ಕಿದೆ**
12x70 ಅಳತೆಯ ಬಿಲ್ಡಿಂಗ್ ಮಾರಾಟಕ್ಕಿದೆ.
ಮಂಡಿಪೇಟೆ, ದುರ್ಗಾ ಲಾಡ್ಜ್ ಎದುರು, ಸಂಪರ್ಕಿಸಿ.
99027 42652
94495 81118

**HOUSE TO LET**
Newly Built Independent Well Furnished House, (Vegetarian only)
Near Police Quarters, JH Patel Nagar Davangere
99868 86464

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
* ಕ್ಯಾಷಿಯರ್ * ಸಪ್ಲೈಯರ್ * ಕ್ಲೀನರ್ *ಸ್ವೀವರ್ಡ್ * ಹೆಲ್ಪರ್
ಭರತ್ ಹೋಟೆಲ್
KSRTC ಮುಂಭಾಗ, ದಾವಣಗೆರೆ.
99162 87164

ಜನ ಆಶಾ ಸೌಹ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**ಸೈಟುಗಳು ಮಾರಾಟಕ್ಕಿವೆ**
ಎಂಸಿಸಿ ಬಿ ಬ್ಲಾಕ್ 40x60 ಮನೆ ಬೇಕಾಗಿದೆ. ಎಸ್.ಎಸ್. ಲೇಔಟ್ 30x40, 30x40 ಮನೆ ಮಾರಾಟಕ್ಕಿದೆ. ಮಹಾಲಕ್ಷ್ಮಿ ಲೇಔಟ್ 30x50, 30x50, 40x60 ಬಾಲಾಜಿ 30x40, 30x50, 30x50 ದಾವಣಗೆರೆ ಸುತ್ತ ಸೈಟುಗಳು ಮಾರಾಟಕ್ಕೆ ಬೇಕಾಗಿರುತ್ತವೆ.
ಪ್ರಶಾಂತ್ : 99643 16777

**ಬೇಕಾಗಿದ್ದಾರೆ**
ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ
ಎನ್. ಆರ್. ರಸ್ತೆ, ದಾವಣಗೆರೆ.
* ಕಂಪ್ಯೂಟರ್ ಶಿಕ್ಷಕರು - 02
* ವಾಚ್ ಮ್ಯಾನ್ - ವಸತಿ ಸಹಿತ
78926 71878

**ಅಕ್ವಾ ಶೈನ್**
ಆರ್.ಓ. ವಾಟರ್ ಪ್ಯೂರಿಫೈಯರ್ ಕಂಪನಿಯಿಂದ ನೇರ ಮಾರಾಟ ಹಾಗೂ ವಾಟರ್ ಪ್ಯೂರಿಫೈಯರ್‌ನ ಎಲ್ಲಾ ಬಿಡಿ ಭಾಗಗಳು ಹೋಲ್ ಸೇಲ್ ದರದಲ್ಲಿ ಲಭ್ಯವಿರುತ್ತವೆ. ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈರ್ ಸರ್ವೀಸ್ ಮಾಡಲಾಗುತ್ತದೆ.
99807 27767

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಲೀಸ್‌ಗೆ / ಬಾಡಿಗೆಗಿದೆ**
1ನೇ ಮಹಡಿ 40x40, 10x15ಅಡಿಯ ಒಟ್ಟು 9 ರೂಂಗಳು, ದಕ್ಷಿಣ ಬಾಗಿಲು 2ನೇ ಮಹಡಿ 40x40, 20x20 ಅಡಿಯ ಒಟ್ಟು 4 ರೂಂಗಳು ಲಭ್ಯವಿವೆ. ಮಾರ್ಕೆಟಿಂಗ್ ಕಂಪನಿ / ಹಾಸ್ಟೆಲ್ / ಕಂಪ್ಯೂಟರ್ / ಟೈಲರಿಂಗ್ ನಡೆಸಲು ಯೋಗ್ಯವಾಗಿದೆ. ಬೋರ್ ವೆಲ್, ಕಾರ್ಪೊರೇಷನ್ ನೀರು, ಪಾರ್ಕಿಂಗ್ ವ್ಯವಸ್ಥೆ ಇದೆ. ವಿಜಯನಗರ, 3ನೇ ಕ್ರಾಸ್, ಏರ್‌ಟೆಲ್ ಟವರ್ ಹತ್ತಿರ, ಹೊಸ RTO ಆಫೀಸ್ ಎದುರು, ದಾವಣಗೆರೆ.
99022 99961 / 97417 46205
73493 97287 / 84312 55250

**WANTED**
ACCOUNTANTS - 1
(3-5 years Experience)
Shamanur Sugars Ltd.,
374, 4th main, PJ Extensions, Davangere.
98441 20003

**ROYALOAK FURNITURE**
we are Hiring
Sales & Marketing
Interview on 25.08.2024
Opp. Shellpetrol bunk, beside Sruthi Moters, P.B. Road, Davanagere-577006
Call on 63621 45757

**ಇಟ್ಟಿಗೆ (MOULD BRICKS) ಫ್ಯಾಕ್ಟರಿ ಬಾಡಿಗೆಗೆ / ಲೀಸ್‌ಗೆ**
ಜರೀಕಟ್ಟೆ-ಮಲೇಬೆನ್ನೂರು ರಸ್ತೆ, ದಾವಣಗೆರೆ ತಾ. ಮತ್ತು ಜಿಲ್ಲೆ.
99017 74089, 93802 99918

**WANTED**
MALE SALESMEN
PART-TIME / FULL-TIME
at the JOCKEY Exclusive Showroom
Contact us at
98867 57688

**ತಕ್ಷಣ ಬೇಕಾಗಿದೆ**
2016ರಿಂದ 2020ರವರೆಗಿನ ಮಾಡಲ್ MARUTHI SUZUKI Brezza Diesel Car (Only White Colour) ZDI+ ಬೇಕಾಗಿದೆ. ಸಂಪರ್ಕಿಸಿ.
89700 11711

# ನಾರಾಯಣ ಗುರುಗಳ 170ನೇ ಜಯಂತಿ



**ಹರಿಹರ**

ಹರಿಹರ, ಆ.20- ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ಬ್ರಹ್ಮ ಶ್ರೀ ನಾರಾಯಣ ಗುರುಗಳ 170ನೇ ಜಯಂತಿ ಆಚರಿಸಲಾಯಿತು. ಈ ವೇಳೆ ತಹಶೀಲ್ದಾರ್ ಗುರು ಬಸವರಾಜ್, ತಾ.ಪಂ ಇಓ ಸುಮಲತಾ ಚಂದ್ರಶೇಖರ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಸಿಪಿಐ ಎಸ್. ದೇವಾನಂದ್, ಕೃಷಿ ಇಲಾಖೆ ಎಇಇ ನಾರನಗೌಡ, ಬೆಸ್ಕಾಂ ಕಚೇರಿ ಎಇಇ ರಮೇಶ್ ನಾಯ್ಕ್, ಕಾರ್ಮಿಕ ಇಲಾಖೆ ಎಇಇ ಕವಿತಾ, ಹರಿಹರ ತಾಲ್ಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ವೈ.ಕೃಷ್ಣ ಮೂರ್ತಿ, ಕಾರ್ಯದರ್ಶಿ ಪ್ರೀತಂ ಬಾಬು, ಆನಂದ್, ಸುನಿಲ್ ಕುಮಾರ್, ಸೋಮಶೇಖರ್, ಹಿಂದುಳಿದ ವರ್ಗಗಳ ಸಮಾನ ಮನಸ್ಕರ ವೇದಿಕೆಯ ಹೆಚ್.ಕೆ. ಕೊಟ್ರಪ್ಪ, ಚಂದ್ರಶೇಖರಪ್ಪ ಗುಂಡೇರಿ, ಕೆ.ಬಿ. ರಾಜಶೇಖರ್, ಬಸಪ್ಪ ಚಿಕ್ಕಬಿದಿರಿ, ಎಸ್. ಹನುಮಂತಪ್ಪ, ರಾಘವೇಂದ್ರ ಕೊಂಡಜ್ಜಿ ಇನ್ನಿತರರಿದ್ದರು.

# ಧೂಳೆಹೊಳೆಯಲ್ಲಿ ಹಳೆ ವಿದ್ಯಾರ್ಥಿಗೆ ಸನ್ಮಾನ



ಮಲೇಬೆನ್ನೂರು, ಆ. 20 - ಧೂಳೆಹೊಳೆ ಗ್ರಾಮದ ಜಿಎಂಸಿಜಿ ಪ್ರೌಢ ಶಾಲೆಯಲ್ಲಿ ನಡೆದ 78 ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ, ಕನ್ನಡ ಭಾಷಾ ಶಿಕ್ಷಕ ಟಿ.ಶಶಿಧರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ದಾವಣಗೆರೆಯ ಲಲಿತ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿರುವ ಟಿ. ಶಶಿಧರ್ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪೂರ್ಣಾಂಕ ಗಳಿಸಲು ಉತ್ತಮ ಮಾರ್ಗದರ್ಶನ ಮಾಡಿರುವುದನ್ನು ಗಮನಿಸಿರುವ ಮೈಸೂರಿನ ಪರೀಕ್ಷಾ ಸ್ಫೂರ್ತಿ ಫೌಂಡೇಷನ್ ಇವರು ರಾಜ್ಯ ಮಟ್ಟದ ಶಿಕ್ಷಕ ಸಾಧಕ ರತ್ನ ಪ್ರಶಸ್ತಿ ನೀಡಿದ್ದಾರೆ.

# ಎಂಎಸ್ಸಿ ಕೃಷಿ: ಸಹನಾಗೆ 3 ಚಿನ್ನದ ಪದಕ



ದಾವಣಗೆರೆ, ಆ.20- ಬೆಂಗಳೂರಿನ ಜಿಕೆವಿಕೆ ಕಾಲೇಜಿನ ಎಂಎಸ್ಸಿ ಕೃಷಿ ಅಂತಿಮ ವರ್ಷದಲ್ಲಿ ನಗರದ ಎಸ್.ಎಂ. ಸಹನಾ 3 ಚಿನ್ನದ ಪದಕ ಪಡೆದಿದ್ದಾರೆ.

58ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು. ಕೃಷಿ ಸಚಿವ ಚೆಲವರಾಯಸ್ವಾಮಿ ಈ ಸಂದರ್ಭದಲ್ಲಿದ್ದರು.

ವಿದ್ಯಾರ್ಥಿನಿಯು ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಮೂಲದ ದಾವಣಗೆರೆ ನಿವಾಸಿ ಸಾಲಂಕಿ ಮಠದ ಎಸ್.ಎಂ. ವೀರೇಶ್ ಹಾಗೂ ಎಸ್.ಎಂ. ಪುಷ್ಪಲತಾ ದಂಪತಿ ಪುತ್ರಿ.

# ಹೊಸನಾಯಕನಹಳ್ಳಿ : ಇಂದು ಬರಡು ರಾಸುಗಳ ತಪಾಸಣಾ - ಚಿಕಿತ್ಸಾ ಶಿಬಿರ

ದಾವಣಗೆರೆ ತಾಲ್ಲೂಕಿನ ಹೊಸನಾಯಕನಹಳ್ಳಿ ಗ್ರಾಮದಲ್ಲಿ ದಾವಣಗೆರೆ ವಿವಿ ಸಮಾಜಕಾರ್ಯ ವಿಭಾಗದ ವತಿಯಿಂದ ನಡೆಯುತ್ತಿರುವ ಸಮಾಜಕಾರ್ಯ ಗ್ರಾಮೀಣ ಶಿಬಿರದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಉಚಿತ ಬರಡು ರಾಸು ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಸಂಜೆ 5.30 ಕ್ಕೆ ಜರುಗುವ ಸಂಪನ್ಮೂಲ ಉಪನ್ಯಾಸ ಕಾರ್ಯಕ್ರಮದಲ್ಲಿ ಕೆ.ಪಿ. ರುದ್ರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರಿಬಸಮ್ಮ, ಪಿ.ಕೆ. ಹಾಲಪ್ಪ, ಎ. ರಾಮಕೃಷ್ಣ, ಎಂ.ಬಿ.ಎಸ್. ಶ್ರೀಧರ್, ರವಿಕುಮಾರ್, ಕೆ.ಎಸ್. ತಿಪ್ಪೇಶ್, ಕೆ.ಬಿ. ನಾಗರಾಜ್, ಕೆ.ಎಸ್. ವಾಸುದೇವ್, ಎಂ. ನಿತ್ಯಾನಂದ, ನರೇಂದ್ರಕುಮಾರ್, ಹೆಚ್.ಪಿ. ಗಜೇಂದ್ರ, ಕೆ.ಎನ್. ತಿರುಮಲ, ಕೆ.ಪಿ. ಹರೀಶ್, ಎನ್.ಬಿ. ಪ್ರಶಾಂತ್, ಪ್ರವೀಣ ಕುಮಾರ್, ಎಂ. ವಿಜಯಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

## ಸೋಲುತ್ತಿರುವ ಸಮಾಜ

**ಕೋಲ್ಕತ್ತದ ಘಟನೆ ಕುರಿತಂತೆ**

ಬಿಳಿ ಕೋಟು ತೊಟ್ಟ ಮಗಳನ್ನು
ಕಂಡು ಹೆಮ್ಮೆಪಡುತ್ತಿದ್ದರು ಹೆತ್ತವರು
ಜೀವ ಉಳಿಸುವ ಕೆಲಸ ಮಾಡುವಳು
ಎಂದು ಅಭಿಮಾನದಿಂದ ನೋಡುತ್ತಿದ್ದ
ಕಣ್ಣುಗಳಲ್ಲಿ ಈಗ ನಿಲ್ಲದ ಕಣ್ಣೀರು

ಉಸಿರು ಉಳಿಸಲು ಹಗಲಿರುಳು
ಸೇವೆ ಮಾಡುತ್ತಿದ್ದ
ಜೀವಕ್ಕೆ
ಇದೆಂತಹ ಆಪತ್ತು
ಮತ್ತೊಬ್ಬರ ಪ್ರಾಣ
ಕಾಪಾಡುವ
ಕೈಗಳಿಗೇ ಬಂದಿತಲ್ಲ
ಕುತ್ತು

ಜೀವ ಉಳಿಸುವ ಜೀವಕ್ಕೆ
ಇಲ್ಲವಾಗಿದೆ ರಕ್ಷಣೆ
ಪ್ರಾಣ ಕಾಪಾಡುವ ಜಾಗದಲ್ಲಿ
ಅತ್ಯಾಚಾರ ಕೊಲೆ
ಇದೆಂತಹ ಶೋಷಣೆ

ನಾವು ಮನುಷ್ಯರಾಗಿ ಬದುಕುವ
ಅರ್ಹತೆ ಕಳೆದುಕೊಂಡು
ಸೋಲುತ್ತಿದ್ದೇವೆ
ಇದು ಸುಸಂಸ್ಕೃತ ಸಮಾಜದ
ಅಂತ್ಯವೇನು ?

- ಅನುಪಮ ವಿರೂಪಾಕ್ಷಪ್ಪ

# ಐಸಿಸಿ ಅಧ್ಯಕ್ಷರಾಗಿ ಜಯ್ ಷಾ ?



ದುಬೈ, ಆ. 20 - ಹಾಲಿ ಐಸಿಸಿ ಅಧ್ಯಕ್ಷ ಗ್ರೆಗ್ ಬಾರ್ಕಲೆಅವರುಮೂರನೇ ಅವಧಿಯಿಂದ ಹಿಂದೆ ಸರಿದಿದ್ದಾರೆ. ಅವರ ಅವಧಿ ನವೆಂಬರ್ 30ಕ್ಕೆ ಅಂತ್ಯ ವಾಗಲಿದೆ. ಈ ಹಿನ್ನೆಲೆ ಯಲ್ಲಿ ಬಿಸಿಸಿಐ ಕಾರ್ಯದರ್ಶಿ ಜಯ್ ಷಾ ಅವರು ಐಸಿಸಿ ಅಧ್ಯಕ್ಷರಾಗುವ ಮಾತುಗಳು ಕೇಳಿ ಬರುತ್ತಿವೆ. ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಆಗಸ್ಟ್ 27 ಕೊನೆಯ ದಿನವಾಗಿದೆ. ಆ ವೇಳೆಗೆ, ಜಯ್ ಷಾ ಈ ಹುದ್ದೆಯ ಬಗ್ಗೆ ಆಸಕ್ತಿ ಹೊಂದಿದ್ದಾರೆಯೇ ಎಂಬುದು ಸ್ಪಷ್ಟವಾಗಲಿದೆ. ಐಸಿಸಿ ಅಧ್ಯಕ್ಷರು ಎರಡು ವರ್ಷಗಳಂತೆ ಮೂರು ಅವಧಿಗೆ ಆಯ್ಕೆಯಾಗ ಬಹುದು. ನ್ಯೂಜಿಲ್ಯಾಂಡ್ ನ ಬಾರ್ಕಲೆ ಅವರು ಎರಡು ಅವಧಿಯನ್ನು ಪೂರೈಸಿದ್ದಾರೆ.



# ಗುರು ಕಾರುಣ್ಯ ನಮ್ಮನ್ನು ಸದಾ ರಕ್ಷಿಸುತ್ತದೆ

**ಶ್ರೀ ಪತಂಜಲಿ ಮಹರ್ಷಿ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಹಿರಿಯ ಪ್ರವಚನಕಾರ ವೇದಬ್ರಹ್ಮ ಗೋಪಾಲ ಆಚಾರ್ ಮಣ್ಣೂರ್**

ದಾವಣಗೆರೆ, ಆ. 20 - ಗುರುಸ್ಥಾನ ಬಹುದೊಡ್ಡದು. ಅದು ಬೆಲೆ ಕಟ್ಟಲಾಗದ ಸ್ಥಾನ, ಗುರು ಕಾರಣ್ಯ ನಮಗೆ ಇದ್ದರೆ ಸದಾ ನಮ್ಮನ್ನು ರಕ್ಷಿಸುತ್ತದೆ ಎಂದು ಹಿರಿಯ ಪ್ರವಚನಕಾರ ವೇದಬ್ರಹ್ಮ ಗೋಪಾಲ ಆಚಾರ್ ಮಣ್ಣೂರ್ ಅಭಿಪ್ರಾಯಪಟ್ಟರು.

ನಗರದ ಆದರ್ಶ ಯೋಗ ಪ್ರತಿಷ್ಠಾನದ ಶ್ರೀ ಮಹಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಶ್ರೀ ಪತಂಜಲಿ ಮಹರ್ಷಿ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಯದಿ ಹರಿಃ ವೃಷ್ಠತಿ ಗುರು: ರಕ್ಷತಿ, ಯದಿ ಗುರುಃ ವೃಷ್ಠತಿ ಹರಿಃ ಕದಾಪಿ ನ ರಕ್ಷತಿ ಎಂಬಂತೆ ಒಂದು ವೇಳೆ ದೇವರು ನಮ್ಮ ರಕ್ಷಣೆಗೆ ಬಾರದಿದ್ದಲ್ಲಿ ಗುರುವಿನ ಶ್ರೀರಕ್ಷೆಯಿಂದ ನಮಗೆ ರಕ್ಷಣೆ ದೊರೆಯುತ್ತದೆ. ಆದರೆ ಅದೇ ಗುರು ಸಿಟ್ಟಾದರೆ, ಮುನಿಸಿಕೊಂಡರೆ ಯಾವ ದೇವರೂ ನಮ್ಮನ್ನು ರಕ್ಷಿಸಲಾರ, ಗುರುವಿನ ಶಕ್ತಿ ಅಂತಹ ಮಹತ್ವವುಳ್ಳದ್ದು, ಅಂಧಕಾರದಲ್ಲಿ ಮುಳಗಿರುವ ನಮಗೆ ಸರಿಯಾದ ಮಾರ್ಗದರ್ಶನವನ್ನು ನೀಡುವವನೇ ನಿಜವಾದ ಗುರು ಎಂದು ತಿಳಿಸುತ್ತಾ, ಜಗತ್ತಿಗೆ ಪತಂಜಲಿ ಮಹರ್ಷಿಗಳ ಕೊಡುಗೆ ಅಪಾರವಾದದ್ದು, ಪತಂಜಲಿಯು ಯೋಗ ಪಿತಾಮಹರು, ದೇಹ ಮತ್ತು ಮನಸ್ಸಿನ ಸ್ವಾಸ್ಥ್ಯವನ್ನು ಕಾಪಾಡಲು ಆಯುರ್ವೇದ ಶಾಸ್ತ್ರ ಮನಸ್ಸಿನ ಮಲಿನವನ್ನು ಕಳೆಯಲು ಯೋಗ ಶಾಸ್ತ್ರವನ್ನು ಪರಿಚಯಿಸಿದ ಮೂಲ ತತ್ವಜ್ಞಾನಿ ಎಂದು ಹೇಳುತ್ತಾ, ಗುರುವಿನ ಶಕ್ತಿಯ ಮಹತ್ವವನ್ನು ಕೆಲವು ಉದಾಹರಣೆಯ ಮೂಲಕ ಸೊಗಸಾದ ಕಥೆಯನ್ನು ಹೇಳಿದರು.

ಪ್ರಾಸ್ತಾವಿಕ ನುಡಿಗಳನ್ನು ಪ್ರತಿಷ್ಠಾನದ ಯೋಗ ತಜ್ಞ ರಾಘವೇಂದ್ರ ಗುರೂಜಿ, ಶ್ರೀ ಪತಂಜಲಿ ಮಹರ್ಷಿ ಜನ್ಮರಹಸ್ಯ ಮತ್ತು ಅವರು ವಿಶೇಷವಾಗಿ ಸಂಸ್ಕೃತ ವ್ಯಾಕರಣ ಮಹಾಭಾಷ್ಯ, ಆಯುರ್ವೇದ, ಭರತನಾಟ್ಯ, ಯೋಗ ದರ್ಶನಗಳನ್ನು ಕೊಟ್ಟ ಅಪೂರ್ವ ಕೊಡುಗೆಗಳ ಬಗ್ಗೆ ಸ್ವಾರಸ್ಯಕರವಾದ ಕಥೆಯ ಮೂಲಕ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿದರು. ಪ್ರಾರಂಭದಲ್ಲಿ ಅಗ್ನಿಹೋತ್ರ ಹೋಮ ಮಾಡಲಾಯಿತು. ನಂತರ ವೇದಬ್ರಹ್ಮ ಶ್ರೀ ಗೋಪಾಲ ಆಚಾರ್ ಮಣ್ಣೂರ್ ಇವರ ದಿವ್ಯ ಮಾರ್ಗದರ್ಶನದಲ್ಲಿ ಪುರೋಹಿತ ಅಂತರವಳ್ಳಿ ಆರ್. ಮುರಳೀಧರ ಆಚಾರ್ ಮತ್ತು ಶ್ರೀಮತಿ ಲಾವಣ್ಯ ದಂಪತಿ ಷೋಡಶೋಪಚಾರ ಪೂಜಾ ವಿಧಿ ವಿಧಾನಗನ್ನು ನೆರವೇರಿಸಿದರು.

ಈ ಸುಸಂದರ್ಭದಲ್ಲಿ ಅದಮ್ಯ ಕಲಾ ಸಂಸ್ಥೆಯ ಸಂಸ್ಥಾಪಕಿ ಶ್ರೀಮತಿ ಗೀತಾ ಮಾಲತೇಶ್ ಇವರು ಸೊಗಸಾದ ವೀಣಾ ವಾದನ ಸೇವೆಯನ್ನು ಭಕ್ತಿಯಿಂದ ಅರ್ಪಿಸಿದರು ಮತ್ತು ಪ್ರತಿಷ್ಠಾನದಲ್ಲಿ ಒಂದು ವರ್ಷದ ಯೋಗ ಪದವಿ ಶಿಕ್ಷಣ ಪೂರೈಸಿದ ಶ್ರೀಮತಿ ಅಶ್ವಿನಿ ವಾದೋನಿ, ಮಹಾಂತೇಶ್, ಚಂದ್ರ ಎಸ್ ಇವರುಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಹಿರಿಯ ಯೋಗ ಶಿಕ್ಷಕ ಲಲಿತ್‌ಕುಮಾರ್ ವಿ. ಜೈನ್ ನಿರೂಪಿಸಿದರು. ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ಕೆ ಭಕ್ತಿಯನ್ನು ಸಮರ್ಪಿಸಿದ ಹಣಕಾಸು ಸಲಹೆಗಾರ ಹೆಚ್. ಮಂಜುನಾಥ್, ಸಿವಿಲ್ ಇಂಜಿನಿಯರ್ ಸತೀಶ್, ಉಪಹಾರ ಸೇವೆ ಅರ್ಪಿಸಿದ ಸಂತೋಷ್ ಹೆಚ್. ವಿಗ್ರಹ ತರಲು ಸಹಕರಿಸಿದ ಬ್ರಷ್‌ಮ್ಯಾನ್ ನಾಗರಾಜ್ ಮತ್ತು ಕುಟುಂಬದವರನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಯಶಸ್ವಿಗಾಗಿ ಸಹಕರಿಸಿದ ಶ್ರೀಮತಿ ರೇಖಾ ಕಲ್ಲೇಶ್, ಶ್ರೀಮತಿ ಸಾವಿತ್ರಿ, ಶ್ರೀಮತಿ ಜ್ಯೋತಿಲಕ್ಷ್ಮಿ ಶ್ರೀಮತಿ ರಂಗೋಲಿ ಗೌರಮ್ಮ, ಸಂಧ್ಯಾ ಮಂಗಳೂರು, ವೇದಿಕೆಯನ್ನು ಸಿದ್ದಪಡಿಸಿದ ಯಕ್ಷ ರಂಗದ ಭಾಸ್ಕರಣ್ಣ, ಭರತ್ ಬಿ.ಎನ್. ಅವರನ್ನು ಅಭಿನಂದಿಸಲಾಯಿತು.

ಕಲಾವಿದ ಎನ್.ಟಿ. ಮಂಜುನಾಥ್, ಯೋಗ ಗುರು ಕೆ. ಕರಿಬಸಪ್ಪ, ವನಿತಾ ಯೋಗ ಕೇಂದ್ರದ ಪ್ರಕಾಶ್ ಉತ್ತಂಗಿ, ಮಾಲತೇಶ್, ಕೊಟ್ರೇಶ್, ಬಾಬಾರಾಮ್‌ದೇವ್‌ನೇರ ಶಿಷ್ಯ ಸುನಿಲ್‌ಕುಮಾರ್ ಎನ್.ವಿ., ಶ್ರೀಮತಿ ಅಂಜಲಿದೇವಿ, ದಾವಣಗೆರೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಸುಮನ್, ಯೋಗ ಶಿಕ್ಷಕಿ ಶ್ರೀಮತಿ ರತ್ನಮ್ಮ ಇನ್ನಿತರರು ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದರು.

# 28ರಂದು ಶ್ರೀ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪನೆ, 22ರಂದು ಮೆರವಣಿಗೆ

ದಾವಣಗೆರೆ, ಆ.20- ಶ್ರೀ ಸೇವಾಲಾಲ್ ಮರಿಯಮ್ಮ ಜೀರ್ಣೋದ್ಧಾರ ಟ್ರಸ್ಟ್ ಹಾಗೂ ಮರಿಯಮ್ಮ ದೇವಸ್ಥಾನದ ಟ್ರಸ್ಟ್ ವತಿಯಿಂದ ಇದೇ ದಿನಾಂಕ 28ರಂದು ಶ್ರೀ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ವೆಂಕಟೇಶ್ ನಾಯ್ಕ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ನಾಡಿದ್ದು ದಿನಾಂಕ 22ರ ಗುರುವಾರ ಮಧ್ಯಾಹ್ನ ಬಂಜಾರ ಕಲಾ ತಂಡದೊಂದಿಗೆ ಶ್ರೀ ಲಿಂಗೇಶ್ವರ ದೇವಸ್ಥಾನದಿಂದ ಕುಂಭ ಮೇಳದೊಂದಿಗೆ ಭಾರತ್ ಕಾಲೋನಿ 9ನೇ ಕ್ರಾಸ್ ಶ್ರೀ ಸೇವಾಲಾಲ್ ದೇವಸ್ಥಾವದರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎನ್. ವೆಂಕಟೇಶ್ ನಾಯ್ಕ, ಆರ್.ಎಲ್. ದೇವೀರಮ್ಮ, ತಿಮ್ಮೇಶ್ ನಾಯ್ಕ, ರಮೇಶ್ ನಾಯ್ಕ, ಅಜಯ್ ನಾಯ್ಕ, ಹನುಮಂತ ನಾಯ್ಕ, ಕರಿಬಸವನಾಯ್ಕ ಇತರರಿದ್ದರು.

# ಸಮವಸ್ತ್ರ ಸಮಾನತೆಯ ಸಂಕೇತ : ಡಾ. ನಾ ಲೋಕೇಶ ಒಡೆಯರ್




ಆನಗೋಡು, ಆ. 20- ವಿದ್ಯಾರ್ಥಿ ಸಂಘಗಳು ಮಕ್ಕಳಲ್ಲಿರುವ ಸುಪ್ತಪ್ರತಿಭೆಯನ್ನು ಹೊರಹೊಮ್ಮಿಸುವ ವೇದಿಕೆಯಾಗಬೇಕು ಎಂದು ವಿಶ್ರಾಂತ ಪ್ರಾಚಾರ್ಯ ಡಾ. ನಾ ಲೋಕೇಶ ಒಡೆಯರ್ ತಿಳಿಸಿದರು.

ಇಲ್ಲಿನ ಶ್ರೀ ಮರುಳಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಉಚಿತ ಸಮವಸ್ತ್ರ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಡಾ. ಲೋಕೇಶ ಒಡೆಯರ್ ಮಾತನಾಡಿದರು.

ಸ್ವಾತಂತ್ರ್ಯ, ಸಮಾನತೆ, ಸೌಹಾರ್ದತೆಯು ಭಾರತ ಸಂವಿಧಾನದ ಆಶಯಗಳಾಗಿವೆ. ಅದರಂತೆ ಶಾಲಾ ಮಕ್ಕಳಲ್ಲಿ ಸಮಾನತೆ, ಸೌಹಾರ್ಧತೆಯ ವಾತಾವರಣ ಮೂಡಿಸಲು ಸಮವಸ್ತ್ರ ಕಾರಣವಾಗಿದೆ. ಉಸಿರು ಕಟ್ಟುವಂತಹ ವಾತಾವರಣದಲ್ಲಿ ಬದುಕುತ್ತಿರುವ ಇಂದಿನ ದಿನಗಳಲ್ಲಿ ನೆರೆಹೊರೆಯವರನ್ನು ಪ್ರೀತಿಸಬೇಕು, ಇಲ್ಲವಾದರೆ ಸಹಿಸಿಕೊಳ್ಳುವ ಗುಣವನ್ನಾದರೂ ರೂಢಿಸಿಕೊಳ್ಳಬೇಕು. ವಿದ್ಯೆಯ ಜೊತೆಗೆ ಅರಿವು ಇರಬೇಕು. ಕೇವಲ ಅಂಕ ಗಳಿಕೆಗೆ ಓದು ಸೀಮಿತವಾಗಬಾರದು ಎಂದು ಲೋಕೇಶ ಒಡೆಯರ್ ಕಿವಿ ಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯ ಎಚ್. ರವಿ ವಹಿಸಿದ್ದರು. ನಂದಿ ಕನಸ್ಟ್ರಕ್ಷನ್ ಸಂಸ್ಥೆಯ ಅಭಿನಂದನ್ ಮತ್ತು ಜಿ ಚಂದ್ರಶೇಖರ, ಶಿಕ್ಷಕರಾದ ಎಚ್.ಸಿ. ವೇದಮೂರ್ತಿ, ಡಾ. ವಿಜಯ ಕುಮಾರ್, ಜಿ ಸುವರ್ಣ, ಕೆ.ಎಸ್. ಮಮತ, ಬಿ.ಎಚ್ ಮಂಜುನಾಥ್ ಮುಂತಾದವರು ಭಾಗವಹಿಸಿದ್ದರು.

ಶಿಕ್ಷಕ ಎಚ್. ಎನ್. ನಾಗರಾಜ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ದಾನಿಗಳಿಂದ 130 ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು ವಿತರಿಸಲಾಯಿತು.

# ಜಿಲ್ಲಾ ಕಾಂಗ್ರೆಸ್‌ನಿಂದ ರಾಜೀವ್, ಅರಸು ಜನ್ಮದಿನಾಚರಣೆ



ದಾವಣಗೆರೆ, ಆ. 20- ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರ 80ನೇ ಜನ್ಮ ದಿನ ಹಾಗೂ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ನಗರದ ಡಾ. ಶಾಮನೂರು ಶಿವಶಂಕರಪ್ಪ ಭವನದಲ್ಲಿ ಇಂದು ನಡೆಸಲಾಯಿತು.

ಮಹಾನಗರ ಪಾಲಿಕೆ ಸದಸ್ಯ ಚಮನ್ ಸಾಬ್ ಮಾತನಾಡಿ, ರಾಜೀವ್ ಗಾಂಧಿ ಅವರು ಭಾರತದ ಪ್ರಧಾನಮಂತ್ರಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ಈ ಎರಡೂ ಮಹತ್ವದ ಹುದ್ದೆಗಳ ಅಧಿಕಾರ ಪಡೆದಿದ್ದು ದುರಂತದ ಸನ್ನಿವೇಶದಲ್ಲಿ. 31ನೇ ಅಕ್ಟೋಬರ್, 1984ರಲ್ಲಿ ತಮ್ಮ ತಾಯಿಯವರ ಬರ್ಬರ ಹತ್ಯೆ ನಂತರ ಅವರು ವೈಯಕ್ತಿಕ ದುಃಖ ಮತ್ತು ರಾಷ್ಟ್ರದ ಹೊಣೆಯನ್ನು ಸಮತೋಲನ, ಘನತೆ ಮತ್ತು ಸಂಯಮದಿಂದ ನಿಭಾಯಿಸಿದರು ಎಂದು ಶ್ಲಾಘಿಸಿದರು.

ದೂಡಾ ಅಧ್ಯಕ್ಷರೂ ಆಗಿರುವ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರು ಮಾತನಾಡಿ, ದೇವರಾಜ ಅರಸು ಒಬ್ಬ ಭಾರತೀಯ ರಾಜಕಾರಣಿಯಾಗಿದ್ದು, ಅವರು ದಕ್ಷಿಣ ಭಾರತದ ರಾಜ್ಯವಾದ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿದರು. ಅಧಿಕಾರವಧಿಯ ದಿನಗಳ ಪ್ರಕಾರ ಅವರು ಮುಖ್ಯಮಂತ್ರಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಇವರ ಅಧಿಕಾರವಧಿಯಲ್ಲಿ ಹಿಂದುಳಿದ ವರ್ಗದ ಆಯೋಗವನ್ನು ಎಲ್‌ಜಿ ಹಾವನೂರು ಅವರ ನೇತೃತ್ವದಲ್ಲಿ ಸ್ಥಾಪಿಸಿದರು. ಇವರ ಅಧಿಕಾರವಧಿಯಲ್ಲಿ ರಾಷ್ಟ್ರಪತಿ ಆಡಳಿತವು 2ನೇ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ಬಂದಿತು ಎಂದು ಹೇಳಿದರು.

ಮಹಿಳಾ ಮುಖಂಡರಾದ ಸಲ್ಮಾಬಾನು ಮಾತನಾಡಿದರು. ಉತ್ತರ ವಲಯದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಎಲ್.ಎಂ.ಹೆಚ್. ಸಾಗರ್, ಹನುಮಂತ್ (ಪಾಪಣ್ಣಿ) ಯುವರಾಜ್, ಶುಭಮಂಗಳ, ಕವಿತ ಚಂದ್ರಶೇಖರ, ಲಿಯಾಕತ್ ಅಲಿ, ಹರೀಶ್, ಶಬೀನಾ, ದ್ರಾಕ್ಷಾಯಣಮ್ಮ, ರಾಜೇಶ್ವರಿ, ಮಂಜುಳಮ್ಮ, ಮಂಗಳಮ್ಮ ಹಾಗೂ ಇತರರು ಉಪಸ್ಥಿತರಿದ್ದರು.

## ಓದುಗರ ಪತ್ರ

### ಫುಟ್‌ಪಾತ್ ಒತ್ತುವರಿ ಸರಿಪಡಿಸಿ, ಸುಗಮ ಸಂಚಾರ ಕಲ್ಪಿಸಿ



ಮಾನ್ಯರೇ,

ದಾವಣಗೆರೆ ನಗರದ ವಿಜಯಲಕ್ಷ್ಮಿ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ರಸ್ತೆಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದರಿಂದ ಪಾದಚಾರಿಗಳಿಗೆ, ವಾಹನ ಸಂಚಾರಿಗಳಿಗೆ ಮತ್ತು ವಾಹನ ನಿಲುಗಡೆಗೆ ಸಂಕಷ್ಟ ಎದುರಾಗಿದೆ.

ಈ ಭಾಗದಲ್ಲಿ ಅಂಗಡಿ ಮುಂಗಟ್ಟುಗಳ ಸಂಖ್ಯೆ ಅಧಿಕವಾಗಿದ್ದರಿಂದ ಜನ ದಟ್ಟಣೆ ಹೆಚ್ಚಾಗಿದ್ದು, ಹರ್ಡೇಕರ್ ಮಂಜಪ್ಪ ವೃತ್ತದಿಂದ ಕಾಳಿಕಾದೇವಿ ರಸ್ತೆಯ ವರೆಗೂ ತಳ್ಳುಗಾಡಿ ವ್ಯಾಪಾರಸ್ಥರು ರಸ್ತೆ ಆಕ್ರಮಿಸಿಕೊಂಡಿದ್ದಾರೆ.

ಮಾರುಕಟ್ಟೆಗೆ ಆಗಮಿಸುವ ಜನ ಟ್ರಾಫಿಕ್, ಹಾರ್ನ್ ಶಬ್ದ, ನೂಕು ನುಗ್ಗಲು ಹಾಗೂ ತಳ್ಳಾಟದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದ್ದರಿಂದ ಮಹಾನಗರ ಪಾಲಿಕೆ, ಆರ್‌ಟಿಒ, ಸ್ಮಾರ್ಟ್ ಸಿಟಿ ಹಾಗೂ ಸಂಚಾರಿ ಪೊಲೀಸರು ಈ ಬಗ್ಗೆ ಗಮನ ಹರಿಸಿ ಸಮಸ್ಯೆ ಪರಿಹರಿಸಬೇಕಾಗಿ ವಿನಂತಿ.

- ಬಿ.ಎಸ್. ರಾಘುವೇಂದ್ರ ಶೆಟ್ಟಿ., ವಕೀಲರು.



# ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾ ಕಿವುಡರ ಸಂಘದ ಪ್ರತಿಭಟನೆ

ದಾವಣಗೆರೆ, ಆ. 20- ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾ ಕಿವುಡರ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ ಡಿ ಗ್ರೂಪ್ ಕೆಲಸ ನೀಡಬೇಕು. ಭ್ರಷ್ಟ ಅಂಗವಿಕಲ ಕಲ್ಯಾಣಾಧಿಕಾರಿಯನ್ನು ವರ್ಗಾಯಿಸಬೇಕು. ಐ.ಎಸ್.ಎಲ್. ಸಂವಹನಕಾರರನ್ನು ನೇಮಿಸಬೇಕು.

ಶ್ರವಣದೋಷ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡದೇ ಮೋಸ ಮಾಡುತ್ತಿರುವ ಶಾಲೆಗೆ ಅನುದಾನ ತಡೆಯಬೇಕು.

ಐಎಸ್‌ಎಲ್ ತರಬೇತಿ ನಡೆಸಬೇಕು. ಶೇ.5ರ ಮೀಸಲಾತಿ ಸೌಲಭ್ಯ ನೀಡದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನಕಲಿ ಅಂಗವಿಕಲರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬಿತ್ಯಾದಿ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು.

ಸಂಘದ ಅಧ್ಯಕ್ಷ ಆಸೀಫ್ ಎಸ್., ಪ್ರಧಾನ ಕಾರ್ಯದರ್ಶಿ ರಾಜಶೇಖರ್ ಬಿ.ಕೆ.ಪಿ., ಖಜಾಂಚಿ ಪ್ರದೀಪ್ ಎನ್. ಹಾಗೂ ಪದಾಧಿಕಾರಿಗಳು ಈ ಸಂದರ್ಭದಲ್ಲಿದ್ದರು.

# ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

ದಾವಣಗೆರೆ, ಆ. 20 - ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ಕೆ.ಟಿ. ತಿಪ್ಪೇಸ್ವಾಮಿ ಅವರು ನಾಡಿದ್ದು 22 ರಂದು ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಆ. 22 ರಂದು ದಾವಣಗೆರೆ ಜಿಲ್ಲೆಯ ಹರಿಹರ ಮತ್ತು ಜಗಳೂರು ತಾಲ್ಲೂಕಿನ ಆಯ್ದ ಶಾಲೆ, ಪದವಿ ಪೂರ್ವ ಕಾಲೇಜು, ಗ್ರಾಮ ಪಂಚಾಯಿತಿ, ವಿದ್ಯಾರ್ಥಿಗಳ ವಸತಿ ನಿಲಯ, ಅಂಗನವಾಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು.

## ನಗರದಲ್ಲಿ ಇಂದು

ಇಂದು ಸಂಜೆ 5 ಗಂಟೆಗೆ ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೇವರಾಜು ಅರಸು ಬಡಾವಣೆ ಇಲ್ಲಿ ಡಿಎಲ್‌ಎಸ್‌ಎ ದ್ವಿಮಾಸಿಕ ಸಭೆ, ಜಿಲ್ಲಾ ಮಟ್ಟದ ಪೋಕ್ಸೋ ಸಭೆ, ಜಿಲ್ಲಾ ಮಟ್ಟದ ವಿಶೇಷ ಕಾರ್ಯಪಡೆ ಸಮಿತಿ ಸಭೆ, ಯುಟಿಆರ್‌ಸಿ ಸಭೆ, ಬಾಲ ನ್ಯಾಯ ಸಮಿತಿ ವಿಷಯದ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿದೆ

**ಸಾದರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ**

16, ಬಿ ಕ್ರಾಸ್, # 2000/A28, ತರಳಬಾಳು ಬಡಾವಣೆ, ದಾವಣಗೆರೆ-5.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಅರ್ಜಿಗಳ ಆಹ್ವಾನ**

ಬಿ.ಕಾಂ. ವಿದ್ಯಾರ್ಹತೆಯುಳ್ಳವರು ಮತ್ತು 18 ರಿಂದ 35 ವರ್ಷದೊಳಗಿರುವವರು, ಸ್ವ- ವಿವರವುಳ್ಳ ಸಂಪೂರ್ಣ ಮಾಹಿತಿಯನ್ನು, 2 ಭಾವಚಿತ್ರದೊಂದಿಗೆ, ದಿ.: 5.9.2024 ರೊಳಗಾಗಿ ಅರ್ಜಿಯನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು.

ಸಹಿ/- ಅಧ್ಯಕ್ಷರು

**ಬಾಪೂಜಿ ಕೋ-ಆಪ್. ಬ್ಯಾಂಕ್ ಲಿ.,**

ಆಡಳಿತ ಕಛೇರಿ, ನಂ. 120, ಹೆಚ್.ಎಂ. ರಸ್ತೆ
ದಾವಣಗೆರೆ-577 001.

**ಮಾನ್ಯ ಸದಸ್ಯರ ಗಮನಕ್ಕೆ**

ಬ್ಯಾಂಕಿನ ಉಪನಿಯಮ 20(1) (3) ರನ್ವಯ ಬ್ಯಾಂಕಿನ ಸದಸ್ಯರು ಕನಿಷ್ಟ ಷೇರು ಮೊತ್ತ ರೂ. 1000/- ಹೊಂದಿರತಕ್ಕದ್ದು ಮತ್ತು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಠ ವ್ಯವಹಾರವನ್ನು ಮಾಡುವುದು ಕಡ್ಡಾಯವಾಗಿರುತ್ತದೆ. ಬ್ಯಾಂಕಿನಲ್ಲಿ ಸದಸ್ಯತ್ವ ಹೊಂದಿರುವ ಸದಸ್ಯರ ಲಾಭಾಂಶದ ಮೊತ್ತವು ಹೊಂದಾಣಿಕೆಯಾದ ಮೂರು ವರ್ಷಗಳ ನಂತರ ಮೀಸಲು ನಿಧಿಗೆ ವರ್ಗಾವಣೆ ಮಾಡಬೇಕಾಗುತ್ತದೆ. ಆದ್ದರಿಂದ ಭಾಗಶಃ ಷೇರು ಮೊತ್ತ ಹೊಂದಿರುವ ಮತ್ತು ಉಳಿತಾಯ ಖಾತೆಯನ್ನು ಹೊಂದಿರದ ಮಾನ್ಯ ಸದಸ್ಯರುಗಳು ಈ ಕೂಡಲೇ ಆಡಳಿತ ಕಛೇರಿಗೆ/ಸಮೀಪದ ಶಾಖೆಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ. 1000/-ಗಳಿಗೆ ಸರಿ ಮಾಡಿಕೊಳ್ಳಲು ಹಾಗೂ ಉಳಿತಾಯ ಖಾತೆಯನ್ನು ತೆರೆಯಲು ಈ ಮೂಲಕ ಕೋರಲಾಗಿದೆ.

ಸದಸ್ಯರುಗಳಿಗೆ ಪ್ರತಿ ವರ್ಷದಂತೆ ಈ ವರ್ಷವೂ ವಾರ್ಷಿಕ ವರದಿ ಪುಸ್ತಕವನ್ನು ಅಂಚೆ ಮೂಲಕ ಕಳುಹಿಸುತ್ತಿದ್ದು ಸದಸ್ಯರು ತಮ್ಮ ವಾಸದ ವಿಳಾಸವನ್ನು ಸರಿಪಡಿಸಿಕೊಳ್ಳದ ಕಾರಣ ಬಹಳಷ್ಟು ಸದಸ್ಯರ ವಾರ್ಷಿಕ ವರದಿ ಪುಸ್ತಕಗಳು ವಾಪಸ್ಸಾಗುತ್ತಿರುತ್ತವೆ. ಆದ್ದರಿಂದ ಮಾನ್ಯ ಸದಸ್ಯರು ತಾವು ಖಾತೆಯನ್ನು ಹೊಂದಿರುವ ಶಾಖೆಗಳಲ್ಲಿ ವಾಸದ ವಿಳಾಸವನ್ನು ಸರಿಪಡಿಸಿಕೊಳ್ಳುವುದರೊಂದಿಗೆ ಮೊಬೈಲ್ ಸಂಖ್ಯೆ, ಕೆ.ವೈ.ಸಿ (KYC) ಮತ್ತು ಸಿ.ಕೆ.ವೈ.ಸಿ (CKYC) ದಾಖಲಾತಿಗಳೊಂದಿಗೆ ಷೇರು ಖಾತೆ ಮತ್ತು ಉಳಿತಾಯ ಖಾತೆಗಳನ್ನು ನವೀಕರಿಸಿಕೊಳ್ಳಲು ಕೋರಿದೆ.

ಎಂ. ಬಸವರಾಜ್
ಪ್ರಧಾನ ವ್ಯವಸ್ಥಾಪಕರು

ಎಸ್.ಎಸ್. ಮಲ್ಲಿಕಾರ್ಜುನ್,
ಉಪಾಧ್ಯಕ್ಷರು, ಗಣಿ, ಭೂ ವಿಜ್ಞಾನ
ಮತ್ತು ತೋಟಗಾರಿಕೆ ಸಚಿವರು

ಡಾ. ಶಾಮನೂರು ಶಿವಶಂಕರಪ್ಪನವರು
ಅಧ್ಯಕ್ಷರು, ಶಾಸಕರು
ದಾವಣಗೆರೆ ದಕ್ಷಿಣ

## ನಗರದಲ್ಲಿ ಇಂದು ರಾಯರ ಆರಾಧನೆ



ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ರಾಯರ ಆರಾಧನಾ ಮಹೋತ್ಸವವು ಇಂದು ಮತ್ತು ನಾಳೆ ನಡೆಯಲಿದೆ. ಇಂದು ಮಧ್ಯಾರಾಧನೆ ಪ್ರಯುಕ್ತ ಸಂಜೆ 6 ರಿಂದ ರಥೋತ್ಸವ, ಅಷ್ಟಾವಧಾನ, 7 ರಿಂದ ಸಂಜೀವ ಜೋಶಿ ಮತ್ತು ತಂಡದವರಿಂದ ಹರಿದಾಸವಾಣಿ ಆಯೋಜಿಸಲಾಗಿದೆ.

ನಾಳೆ ಗುರುವಾರ ಉತ್ತರಾರಾಧನೆ ಪ್ರಯುಕ್ತ ಬೆಳಿಗ್ಗೆ 10.30 ರಿಂದ ಶ್ರೀ ಮಂತ್ರಾಲಯ ಪ್ರಭುಗಳು ರಚಿಸಿರುವ ಶ್ರೀ ಮನ್ನ್ಯಾಯ ಸುಧಾ ಪರಿಮಳ ಗ್ರಂಥದೊಂದಿಗೆ ಶ್ರೀ ಗುರು ಸಾರ್ವಭೌಮರ ಮಹಾರಥೋತ್ಸವ ಜರುಗಲಿದೆ. ನಂತರ ಸಂಜೆ 6ಕ್ಕೆ ಶುಭದಾ ಮತ್ತು ತಂಡದ 30 ಜನರಿಂದ ವೀಣಾ ವಾದನ ನಡೆಯಲಿದೆ ಎಂದು ಶ್ರೀ ಗುರುರಾಜ ಸೇವಾ ಸಂಘದ ಪ್ರಕಟಣೆ ತಿಳಿಸಿದೆ.

## ಶಿವಮೊಗ್ಗ : ಅಗ್ನಿವೀರರ ನೇಮಕಾತಿ ರ‍್ಯಾಲಿ

ದಾವಣಗೆರೆ, ಆ. 20 - ಶಿವಮೊಗ್ಗದಲ್ಲಿ ನಾಡಿದ್ದು ದಿನಾಂಕ 22ರಂದು ನಡೆಯುವ ಅಗ್ನಿಪಥ್ ಯೋಜನೆಯಡಿ ಅಗ್ನಿವೀರ್ ಸೇನಾ ನೇಮಕಾತಿ ರ‍್ಯಾಲಿಯಲ್ಲಿ ಭಾಗವಹಿಸಲು ಆಗಮಿಸುತ್ತಿರುವ ಅಭ್ಯರ್ಥಿಗಳಿಗೆ ತಾತ್ಕಾಲಿಕ ವಿಶ್ರಾಂತಿಗಾಗಿ ಇಲ್ಲಿನ ಕೆಇಬಿ ವೃತ್ತದ ಸರ್ಕಾರಿ ನೌಕರರ ನೂತನ ಸಮುದಾಯ ಭವನದಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಶಿವಮೊಗ್ಗ ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಡಾ. ಶಿವಮೂರ್ತಿ ಶ್ರೀಗಳೇ ಸಿರಿಗೆರೆ ಮಠಕ್ಕೆ ಮುಂದುವರೆಯಲಿ

## ರಕ್ತದಲ್ಲಿ ಸಹಿ ಮಾಡಿ ಪತ್ರ ಬರೆದು ಮಠಕ್ಕೆ ಕಳುಹಿಸಿದ ಹೆಮ್ಮನಬೇತೂರು ಗ್ರಾಮದ ಭಕ್ತರು

ದಾವಣಗೆರೆ,ಆ.20- ಸಿರಿಗೆರೆಯ ಶ್ರೀ ತರಳಬಾಳು ಮಠದ ಜಗದ್ಗುರುಗಳಾಗಿ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮೀಜಿ ಅವರೇ ಮುಂದುವರೆಯಬೇಕು ಎಂದು ತಾಲ್ಲೂಕಿನ ಹೆಮ್ಮನಬೇತೂರು ಗ್ರಾಮದ ಭಕ್ತರು ಆಗ್ರಹಿಸಿದ್ದಾರೆ.

ಈ ಕುರಿತು ಗ್ರಾಮದಲ್ಲಿ ಸಭೆ ನಡೆಸಿರುವ ಭಕ್ತರು, ಶ್ರೀಗಳೇ ಪೀಠದಲ್ಲಿ ಮುಂದುವರಿಯಬೇಕೆಂದು ಒಮ್ಮತದಿಂದ ನಿರ್ಣಯ ತೆಗೆದುಕೊಂಡು ರಕ್ತದಲ್ಲಿ ಸಹಿ ಮಾಡಿ ಮಠಕ್ಕೆ ಪತ್ರ ಕಳುಹಿಸಿಕೊಟ್ಟಿದ್ದಾರೆ.

ಶ್ರೀಗಳ ವಿರುದ್ಧ ವಿರುದ್ಧ ಇಷ್ಟು ದಿನ ಇಲ್ಲದ ಗೊಂದಲ, ಸುಳ್ಳು ಆರೋಪ, ಪಿತೂರಿ ಈಗ ಹೆಚ್ಚಾಗಿ ನಡೆಯುತ್ತಿದೆ. ನಾವೆಲ್ಲರೂ ಶ್ರೀಗಳ ಪರ ನಿಲ್ಲುವ ಮೂಲಕ ಸರಿಯಾದ ಉತ್ತರ ನೀಡೋಣ ಎಂದು ಗ್ರಾಮಸ್ಥರು ತಿಳಿಸಿದರು.



ಸ್ವಾಮೀಜಿ ಅವರು ಹೆಮ್ಮಬೇತೂರು ಸೇರಿದಂತೆ ಸುತ್ತಮುತ್ತ ಹಳ್ಳಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ ಆಧುನಿಕ ಭಗೀರಥರು. ಅವರಿಂದ ಕಾರ್ಯಗತ ಗೊಂಡಿರುವ 20ಕ್ಕೂ ಹೆಚ್ಚು ಏತ ನೀರಾವರಿ ಯೋಜನೆಗಳ ಅಡಿಯಲ್ಲಿ ಸಾವಿರಾರು ಕೆರೆಗಳಿಗೆ ನೀರು ತುಂಬಿದಂತಾಗಿದೆ ಎಂದು ಗ್ರಾಮಸ್ಥರು ಹೇಳಿದರು.

ಸಭೆಯಲ್ಲಿ ಎಸ್. ಆರ್. ಪ್ರಕಾಶ್, ನಾಗರಾಜಪ್ಪ, ಎಸ್. ಎನ್. ಕಲ್ಲೇಶಪ್ಪ, ಎನ್. ಎಂ. ಪ್ರಸನ್ನ, ಎಸ್. ಬಸವರಾಜ್, ಬಿ. ಎಸ್. ಸಚಿನ್, ಪಂಪಣ್ಣ, ಸಿ. ಎಸ್. ಪ್ರಕಾಶ, ಹೆಚ್. ಆರ್. ಶಿವಕುಮಾರ, ಇ. ರಮೇಶ, ಕರಿಬಸಣ್ಣ, ಎಸ್. ಎಸ್. ಸೋಮಶೇಖರ್, ಯು. ಆರ್. ಎಸ್. ಶ್ರೀನಿವಾಸ್, ಜಿ ಎಸ್ ರಾಜಶೇಖರ್, ತಿಪ್ಪೇಸ್ವಾಮಿ, ಪರಿಶಿಷ್ಟ ಪಂಗಡ ಸಮಾಜದ ಮುಖಂಡ ಟಿ ಡಿ ರಮೇಶ್, ಬಕ್ಕೇಶ್ ಮತ್ತಿತರರು ಹಾಜರಿದ್ದರು.

# ಪಾರಂಪರಿಕ ವೈದ್ಯಕ್ಕೆ ಪ್ರಕೃತಿಯೇ ಗುರು : ಹೆಬ್ಬಾಳು ಶ್ರೀ



**ಪ್ರಾಚೀನ ಪಾರಂಪರಿಕ ಗುರು-ಶಿಷ್ಯ ಪರಂಪರೆಯ ತರಬೇತಿಯ ಉದ್ಘಾಟನಾ ಸಮಾರಂಭ**

ದಾವಣಗೆರೆ, ಆ. 20- ಪಾರಂಪರಿಕ ವೈದ್ಯಕ್ಕೆ ಪ್ರಕೃತಿಯೇ ಗುರು ಎಂದು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತರುದ್ರೇಶ್ವರ ಶ್ರೀಗಳು ಹೇಳಿದರು.

ಪಾರಂಪರಿಕ ವೈದ್ಯ ಪರಿಷತ್, ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಹಾಗೂ ಪಾರಂಪರಿಕ ವೈದ್ಯ ಗುರುಕುಲ ಇವರ ಸಹಯೋಗದಲ್ಲಿ ನಗರದ ಓಂ ವೆಲ್‌ನೆಸ್ ಸೆಂಟರ್‌ನಲ್ಲಿ ಮೊನ್ನೆ ಏರ್ಪಡಿಸಿದ್ದ ಪ್ರಾಚೀನ ಪಾರಂಪರಿಕ ಗುರು-ಶಿಷ್ಯ ಪರಂಪರೆಯ ತರಬೇತಿ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಪಶು ಪಕ್ಷಿಗಳಿಗೆ ಏನಾದರೂ ಅಜೀರ್ಣ ಆದರೆ, ಲಾಂಟನ್ ಸೊಪ್ಪು ತಿಂದು ವಾಂತಿ ಮಾಡಿಕೊಂಡು ಆರೋಗ್ಯ ಸರಿಪಡಿಸಿಕೊಳ್ಳುತ್ತವೆ. ಇವುಗಳಿಗೆ ಹೇಳಿಕೊಟ್ಟು ಗುರು ಯಾರು? ಇವುಗಳಿಗೆಲ್ಲಾ ಪ್ರಕೃತಿಯೇ ಗುರು ಎಂದರು. ಅದೇ ರೀತಿ ಪಾರಂಪರಿಕ ವೈದ್ಯರು ಪ್ರಕೃತಿಯಲ್ಲಿನ ಸಸ್ಯಗಳನ್ನು ಗುರುತಿಸಿ, ರೋಗ ಗುಣಪಡಿಸುವುದನ್ನು ಕಂಡುಕೊಂಡಿದ್ದಾರೆ. ಇಂತಹ ಪರಂಪರೆಯ ವೈದ್ಯ ವೃತ್ತಿಯನ್ನು ತರಬೇತಿಯ ಮೂಲಕ ಮಾಹಿತಿ ಪಡೆದುಕೊಂಡು ತಮ್ಮ ಜೀವನದಲ್ಲಿ ಉಪಯೋಗಿಸಿಕೊಳ್ಳಿ ಎಂದರು.

ಪಾರಂಪರಿಕ ವೈದ್ಯ ಪರಿಷತ್ ಕರ್ನಾಟಕ ಅಧ್ಯಕ್ಷ ಡಾ. ಜಿ. ಮಹಾದೇವಪ್ಪ ಮೂಳೆ ಮುರಿತ ಚಿಕಿತ್ಸೆ ಬಗ್ಗೆ ಮಾತನಾಡಿದರು.

ಪಾರಂಪರಿಕ ವೈದ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ವೈದ್ಯ ನೇರ್ಲಿಗೆ ಗುರುಸಿದ್ದಪ್ಪ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಮನೆಯೇ ಮೊದಲ ಪಾಠಶಾಲೆ ಹೇಗೋ ಹಾಗೆ ಮನೆ ಮೊದಲ ವೈದ್ಯ ಶಾಲೆಯಾಗಬೇಕೆಂಬುದೇ ವೈದ್ಯ ಪರಿಷತ್ ಉದ್ದೇಶವೆಂದು ತಿಳಿಸಿದರು.

ದಾವಣಗೆರೆ ತಾಲ್ಲೂಕು ವೈದ್ಯ ಪರಿಷತ್ ಅಧ್ಯಕ್ಷರಾದ ಶಿವಲಿಂಗಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ವೈದ್ಯ ಪರಿಷತ್ ಉಪಾಧ್ಯಕ್ಷರಾದ ಡಾ. ಕೆ.ಪಿ. ಲತಾ, ವೈದ್ಯ ಪರಿಷತ್ ಕಾರ್ಯದರ್ಶಿ ಮಮತಾ ನಾಗರಾಜ್, ಸಹ ಕಾರ್ಯದರ್ಶಿ ರೇಖಾ, ಓಂ ವೆಲ್‌ನೆಸ್ ಸೆಂಟರ್‌ನ ಸುನಿಲ್, ಹಿರಿಯ ವೈದ್ಯ ಬಿ.ಎಂ. ಶಿವಮೂರ್ತಿ, ತರೀಕೆರೆ ತಾಲ್ಲೂಕು ಮಾಜಿ ಅಧ್ಯಕ್ಷ ವೈದ್ಯ ಭೈರಲಿಂಗಪ್ಪ, ತರಬೇತುದಾರ ಸತ್ಯನಾರಾ ಯಣ ಭಟ್ರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಿಐಇಟಿಗೆ ಅತ್ಯುತ್ತಮ ಯೋಜನೆ ರಾಜ್ಯ ಪ್ರಶಸ್ತಿ



ದಾವಣಗೆರೆ, ಆ. 20 - ರಾಜ್ಯ ವಿಜ್ಞಾನ ಪರಿಷತ್ತು (ಬೆಂಗಳೂರು) ಇವರ ಸಹಯೋಗದೊಂದಿಗೆ ಕಲ್ಬುರ್ಗಿಯ ಶರಣ ಬಸವ ವಿಶ್ವವಿದ್ಯಾಲಯದಲ್ಲಿ ಕಳೆದ ವಾರ ನಡೆದ ರಾಜ್ಯ ಮಟ್ಟದ 47ನೇ ಸಾಲಿನ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮದಲ್ಲಿ ನಗರದ ಬಿಐಇಟಿ ಕಾಲೇಜಿಗೆ 'ವರ್ಷದ ಅತ್ಯುತ್ತಮ ಯೋಜನೆ' ಪ್ರಶಸ್ತಿ ಲಭಿಸಿದೆ.

ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ವಿವಿಧ ಇಂಜಿನಿಯರಿಂಗ್ ಕಾಲೇಜುಗಳಿಂದ ಸುಮಾರು 354 ಯೋಜನೆಗಳು ಪ್ರದರ್ಶಿತಗೊಂಡಿದ್ದವು, ಇವುಗಳಲ್ಲಿ 48 ಯೋಜನೆಗಳು ವರ್ಷದ ಅತ್ಯುತ್ತಮ ಯೋಜನೆ ಪ್ರಶಸ್ತಿಗೆ ಆಯ್ಕೆಯಾಗಿದ್ದವು. ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವಿವಿಧ ವಿಭಾಗಗಳಿಂದ ಒಟ್ಟು ಐದು ಯೋಜನೆಗಳನ್ನು ಕಾರ್ಯಕ್ರಮದಲ್ಲಿ ಪ್ರದರ್ಶಿತಗೊಳಿಸಲಾಗಿದ್ದು, ಇವುಗಳಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ 'ಅಂತರ್ಜಲವನ್ನು ಬಳಸಿಕೊಂಡು ಕ್ಷೇತ್ರ ನಿಗಾ ವ್ಯವಸ್ಥೆಯನ್ನು ಹೊಂದಿರುವ ಕೃಷಿ ಉಪಯುಕ್ತ ವಾಹನ' ಎನ್ನುವ ಯೋಜನೆಗೆ ವರ್ಷದ ಅತ್ಯುತ್ತಮ ಯೋಜನೆ ಪ್ರಶಸ್ತಿ ಲಭ್ಯವಾಗಿದೆ.

ವಿದ್ಯಾರ್ಥಿಗಳಾದ ಸೂರಜ್ ಪ್ರಕಾಶ್ ಕಡೂರ್, ಪ್ರಿಯಾಂಕ ನಿಂಗಪ್ಪ, ಸಹನಾ ರಮೇಶ ಮೇಟಿ ಹಾಗೂ ಸ್ನೇಹ, ರಮೇಶ ಸೊರಟೂರು ಇವರುಗಳು ಡಾ. ಶಿವಕುಮಾರ ಸ್ವಾಮಿಯವರ ಮಾರ್ಗ ದರ್ಶನದಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ ಪ್ರದರ್ಶಿಸಿದ್ದರು.

ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನದ ಹಣ ನೀಡಿ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ್ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮತ್ತು ಆಡಳಿತ ಮಂಡಳಿಯವರು ಸನ್ಮಾನಿಸಿದರು.

## ಸ್ವಾಮೀಜಿ ನೂತನ ಪೀಠಾಧಿಪತಿ



**(1ನೇ ಪುಟದಿಂದ)** ಸಿದ್ದೇಶ್ವರ ಸ್ವಾಮೀಜಿಯವರಿಗೆ ಐರಣಿ ಶ್ರೀಮಠದ ಬಸವ ಕೇಂದ್ರ ಸ್ವಾಮೀಜಿಯವರಿಗೆ ಶ್ರೀ ಅಭಿನವ ಕೃಪಾನಂದ ಭಾರತಿ ಸ್ವಾಮೀಜಿ ಎಂದು ನಾಮಕರಣ ಮಾಡಿ, ನಂತರ ಬ್ರಹ್ಮಾನಂದ ಸ್ವಾಮಿ ಮಠದ ಉತ್ತರಾಧಿಕಾರಿಯಾಗಿ ಪೀಠಾರೋಹಣ ಮಾಡಲಾಯಿತು.

ಗೀತಮ್ಮ ತಾಯಿ ಪ್ರಾರ್ಥಿಸಿದರು. ಹದಡಿ ಚಂದ್ರಗಿರಿ ಮಠದ ಶ್ರೀ ಮುರುಳೀಧರ ಸ್ವಾಮೀಜಿಯವರು ಅಭಿನವ ಕೃಪಾ ನಂದ ಭಾರತಿ ಸ್ವಾಮಿಗಳಿಗೆ ಶ್ರೀಮಠದ ಲಾಂಛನವಾದ ಜೋಳಿಗೆ, ಬೆತ್ತ ನೀಡುವ ಮೂಲಕ ನೂತನ ಶ್ರೀಗಳಿಗೆ ಶ್ರೀಮಠದ ಭಕ್ತರ ಸಮೂಹದಲ್ಲಿ ಹಸ್ತಾಂತರಿಸಿ, ಆಶೀರ್ವದಿಸಿದರು. ಜಗದ್ಗುರು ಶ್ರೀ ಪ್ರಭುಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.

ಹದಡಿ ಚಂದ್ರಗಿರಿ ಮಠದ ಶ್ರೀ ಮುರಳೀಧರ ಸ್ವಾಮೀಜಿ ಮಾತನಾಡಿ, ಶ್ರೀ ಅಭಿನವ ಕೃಪಾನಂದ ಭಾರತಿ ಸ್ವಾಮಿಗಳು ನಿರಂತರ ಶ್ರೀಮಠದ ಭಕ್ತರೊಂದಿಗೆ ಸಂಪರ್ಕದಲ್ಲಿರುವಂತೆ ತಿಳಿಸಿದರು.

ಶ್ರೀ ಪ್ರಿಯಾನಂದ ಸ್ವಾಮೀಜಿ ಮಾತನಾಡಿ, ಅಭಿನವ ಕೃಪಾನಂದ ಶ್ರೀಗಳು ಶ್ರೀಮಠದ ಕಳಸ ಪ್ರಾಯವಾಗಲಿ ಎಂದು ಆಶಿಸಿದರು. ಶ್ರೀಮಠದ ಆಡಳಿತಾಧಿಕಾರಿಗಳಾದ ಬಿ. ವಿವೇಕಾನಂದ ಸ್ವಾಮಿಗಳು ಶ್ರೀ ಅಭಿನವ ಕೃಪಾನಂದ ಭಾರತಿ ಸ್ವಾಮಿಯವರ ಕಿರು ಪರಿಚಯ ಮಾಡಿದರು. ದೇವಾಂಗ ಸಮಾಜದ ಗುರುಗಳಾದ ಮಲ್ಲಿಕಾರ್ಜುನ ಸ್ವಾಮಿ, ಅಕ್ಕನ ಬಳಗದ ರೂಪಕ್ಕ, ಹರಿಹರದ ಕ್ಷೇತ್ರ ಶಿಕ್ಷಣಾಧಿಕಾರಿ ದುರ್ಗಪ್ಪ, ಕೆಪಿಸಿಸಿ ಸದಸ್ಯ ಬಿ ರೇವಣಸಿದ್ದಪ್ಪ ಹಾಗೂ ಅತಿಥಿಗಳು ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

## ಜಾರ್ಖಂಡ್ : ತರಬೇತಿ ವಿಮಾನ ನಾಪತ್ತೆ

ಜಮ್‌ಷೆಡ್‌ಪುರ, ಆ. 20 - ಜಾರ್ಖಂಡ್‌ನ ಪೂರ್ವ ಸಿಂಗಭೂಮ್ ಜಿಲ್ಲೆಯ ವಿಮಾನ ನಿಲ್ದಾಣದಿಂದ ಹಾರಿದ ಎರಡು ಸೀಟುಗಳ ತರಬೇತಿ ವಿಮಾನ ನಾಪತ್ತೆಯಾಗಿದೆ. ವಿಮಾನದ ಪತ್ತೆಗಾಗಿ ಬೃಹತ್ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಲ್ಕೆಮಿಸ್ಟ್ ಏವಿಯೇಷನ್ ಸಂಸ್ಥೆಯ ಮಾಲೀಕತ್ವದ ವಿಮಾನ ಬೆಳಿಗ್ಗೆ 11 ಗಂಟೆಗೆ ಸೊನಾಮಿ ಏರೋಡ್ರೋಮ್‌ನಿಂದ ಹಾರಾಟ ಆರಂಭಿಸಿತ್ತು.

# ಚಿತ್ರರಂಗದಲ್ಲಿ ಲೈಂಗಿಕ ಶೋಷಣೆ : ಹೇಮಾ ಸಮಿತಿ ವರದಿಯಿಂದ ಕೇರಳದಲ್ಲಿ ರಾಜಕೀಯ ಬಿರುಗಾಳಿ

ತಿರುವನಂತಪುರಂ, ಆ. 20 - ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರ ಲೈಂಗಿಕ ಶೋಷಣೆ ನಡೆಯುತ್ತಿರುವ ಬಗ್ಗೆ ನ್ಯಾಯಮೂರ್ತಿ ಹೇಮಾ ಸಮಿತಿ ಸಲ್ಲಿಸಿರುವ ವರದಿ ಕೇರಳದಲ್ಲಿ ರಾಜಕೀಯ ಬಿರುಗಾಳಿ ಎಬ್ಬಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ಈ ಬಗ್ಗೆ ಮೌನವಾಗಿತ್ತು ಎಂದು ಪ್ರತಿಪಕ್ಷಗಳು ಆರೋಪಿಸಿವೆ. ಆದರೆ ಸಂತ್ರಸ್ತರಿಗೆ ಬೆಂಬಲ ನೀಡುತ್ತಿರುವುದಾಗಿ ಕೇರಳ ಸರ್ಕಾರ ಸಮರ್ಥಿಸಿಕೊಂಡಿದೆ.

ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಎಡರಂಗ ಸರ್ಕಾರ ಈ ವರದಿಯನ್ನು ಮುಚ್ಚಿಟ್ಟಿತ್ತೇ? ಎಂದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟ ಪ್ರಶ್ನಿಸಿದೆ. ಪಿಣರಾಯಿ ವಿಜಯನ್ ಸರ್ಕಾರ ಸಂತ್ರಸ್ತರಿಗೆ ನೆರವಾಗುವ ಬದಲು ಪೀಡಕರಿಗೆ ನೆರವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡಿರುವ ಕೇರಳ ಸಂಸ್ಕೃತಿ ವ್ಯವಹಾರಗಳ ಸಚಿವ ಸಾಜಿ ಚೆರಿಯನ್, ಸರ್ಕಾರ ಸದಾ ಸಂತ್ರಸ್ತರ ಪರವಾಗಿದೆ. ಮಹಿಳಾ ಸಮುದಾಯದ ಪರವಾಗಿ ನಿಂತಿದೆ. ವರದಿಯಲ್ಲಿ ಯಾವುದೇ ನಿರ್ದಿಷ್ಟ ಹೆಸರನ್ನು ಉಲ್ಲೇಖಿಸಿಲ್ಲ ಎಂದಿದ್ದಾರೆ.

ವರದಿಯ ಯಾವ ಭಾಗವನ್ನು ಬಿಡುಗಡೆ ಮಾಡಬೇಕು ಎಂಬ ಬಗ್ಗೆ ಹೈಕೋರ್ಟ್ ಹಾಗೂ ಮಾಹಿತಿ ಆಯೋಗಗಳು ನಿರ್ಧರಿಸಿವೆ. ಸರ್ಕಾರ ವರದಿಯ ಎಲ್ಲಾ ಅಂಶಗಳನ್ನು ಚರ್ಚಿಸಲಿದೆ ಹಾಗೂ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ಚೆರಿಯನ್ ಹೇಳಿದ್ದಾರೆ.

ಈ ವರದಿ ಬಿಡುಗಡೆ ಮಾಡಬಾರದು ಎಂದು ನ್ಯಾಯಮೂರ್ತಿ ಹೇಮಾ ಅವರೇ ಮೊದಲು ತಿಳಿಸಿದ್ದರು ಎಂದು ಸಚಿವರು ಹೇಳಿದ್ದಾರೆ.

ಆದರೆ ಸಚಿವರ ವಾದವನ್ನು ಒಪ್ಪದ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು, ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಸರ್ಕಾರ ವರದಿಯನ್ನು ಗೌಪ್ಯವಾಗಿಟ್ಟಿದೆ ಎಂದು ಆರೋಪಿಸಿವೆ.

ಆರೋಪಿಗಳನ್ನು ರಕ್ಷಿಸಲು ಸರ್ಕಾರ ಪ್ರಯತ್ನ ನಡೆಸಿದೆ. ಹೇಮಾ ಸಮಿತಿ ವರದಿ ಆಧರಿಸಿ ಸರ್ಕಾರ ಪ್ರಕರಣ ದಾಖಲಿಸಬೇಕು ಎಂದು ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ವಿ.ಡಿ. ಸತೀಶನ್ ಒತ್ತಾಯಿಸಿದ್ದಾರೆ.

ವರದಿಯ ಬಗ್ಗೆ ಇದುವರೆಗೂ ಕ್ರಮ ತೆಗೆದುಕೊಳ್ಳದೇ ಇರುವ ಕಾರಣ ಸಚಿವರು ಅಪರಾಧದ ಭಾಗವಾಗಿದ್ದಾರೆ. ಅಧಿಕಾರದಲ್ಲಿ ಮುಂದುವರೆಯಲು ಚೆರಿಯನ್ ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದು ಬಿಜೆಪಿ ಹಿರಿಯ ನಾಯಕ ವಿ. ಮುರುಳೀಧರನ್ ಹೇಳಿದ್ದಾರೆ.

ಸೋಮವಾರ ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಿಡುಗಡೆ ಮಾಡಲಾಗಿತ್ತು. ಅಪರಾಧಿಕ ತಂಡ ಚಿತ್ರರಂಗವನ್ನು ನಿಯಂತ್ರಿಸುತ್ತಿದ್ದು, ಇಲ್ಲಿ ಮಹಿಳೆಯರ ಶೋಷಣೆ ವ್ಯಾಪಕವಾಗಿದೆ ಎಂದು ತಿಳಿಸಲಾಗಿತ್ತು.

## ಕಕ್ಕರಗೊಳ್ಳ : ಪಟೇಲ್ ವೀರಪ್ಪ ಶಾಲೆಯ ಗಗನ್‌ಗೆ ಚಿಣ್ಣರ ಚಿತ್ರ ಚಿತ್ತಾರ ಪ್ರಶಸ್ತಿ



ದಾವಣಗೆರೆ, ಆ. 20- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದ ಪಟೇಲ್ ವೀರಪ್ಪ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿ ಗಗನ್ ಬಿ.ಸಿ. ಇವರು ಧಾರವಾಡ ಕೃಷಿ ವಿಶ್ವ ವಿದ್ಯಾಲಯದ ಸಭಾಂಗಣದಲ್ಲಿ ನಡೆದ ರಾಷ್ಟ್ರಮಟ್ಟದ ಮಕ್ಕಳ ಚಿತ್ರಕಲೋತ್ಸವ ಕಾರ್ಯಕ್ರಮದಲ್ಲಿ 'ಚಿಣ್ಣರ ಚಿತ್ರ ಚಿತ್ತಾರ 2023-24'ರ ಪ್ರಶಸ್ತಿ ಪಡೆದಿದ್ದಾರೆ.

ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ಗದಗ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ (ಧಾರವಾಡ) ಮತ್ತು ಬಾಲ ಭವನ ಸೊಸೈಟಿ (ಬೆಂಗಳೂರು) ಇವರು ಕಾರ್ಯಕ್ರಮ ಆಯೋಜಿಸಿದ್ದರು.

ಪ್ರಶಸ್ತಿ ಪಡೆದ ವಿದ್ಯಾರ್ಥಿಯನ್ನು ಮತ್ತು ಮಾರ್ಗದರ್ಶಿ ಶಿಕ್ಷಕರಾದ ಶ್ರೀಮತಿ ಪಿ.ಬಿ. ಉಮಾ ಅವರನ್ನು ಶಾಲಾ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀಮತಿ ಪ್ರಣಿತ ಗಿರಿರಾಜ್ ಸಂಯೋಜಕರಾದ ಸೋಮಶೇಖರಪ್ಪ ಮತ್ತು ಕಲಿವೀರಪ್ಪ ಮತ್ತು ಶಿಕ್ಷಕರುಗಳು ಅಭಿನಂದಿಸಿದ್ದಾರೆ.

## ಕಾಗಿನೆಲೆ ಶಾಖಾ ಮಠಕ್ಕೆ ಮೇಘಾಲಯ ರಾಜ್ಯಪಾಲರ ಭೇಟಿ



ಮಲೇಬೆನ್ನೂರು, ಆ.20- ಮೇಘಾ ಲಯ ರಾಜ್ಯದ ರಾಜ್ಯಪಾಲ ಸಿ.ಹೆಚ್.ವಿಜಯ ಶಂಕರ್ ಅವರು ಮಂಗಳವಾರ ಬೆಂಗಳೂರಿನ ಕೇತೋಹಳ್ಳಿ ಯಲ್ಲಿರುವ ಕಾಗಿನೆಲೆ ಕನಕ ಗುರುಪೀಠದ ಶಾಖಾಮಠಕ್ಕೆ ಭೇಟಿ ನೀಡಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ದರ್ಶನಾಶೀರ್ವಾದ ಪಡೆದು ಶ್ರೀಮಠದ ಕಾಮಗಾರಿಯನ್ನು ವೀಕ್ಷಿಸಿದರು.

## ಅರಕೆರೆ : ಚಿರತೆ ಸೆರೆ, ಜನತೆ ನಿರಾಳ



ಹೊನ್ನಾಳಿ, ಆ.20- ತಾಲ್ಲೂಕಿನ ಅರಕೆರೆ, ಕೋಟೆ ಮಲ್ಲೂರು, ಬೇಲಿಮಲ್ಲೂರು, ಹಿರೇಗೋಣಿಗೆರೆ, ಹೊನ್ನೂರು, ವಡ್ಡರಹಟ್ಟಿ ಸುತ್ತ ಮುತ್ತಲಿನ ಗ್ರಾಮದ ರೈತರಿಗೆ, ಸಾಕು ಪ್ರಾಣಿಗಳಿಗೆ ಹಾಗೂ ಸಾರ್ವಜನಿಕರಲ್ಲಿ ಭಯದ ವಾತಾವರಣ ಮೂಡಿಸಿದ್ದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಇಂದು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ಇದನ್ನು ಗಮನಿಸಿದ ಹಾಗೂ ವಿಷಯ ತಿಳಿದ ಸ್ಥಳೀಯ ನಿವಾಸಿಗಳು ಭಯದಿಂದ ಹೊರಬಂದು ನಿರಾಳ ವಾತಾವರಣ ಕಂಡು ಬಂದಿದೆ.

## ಬಿಜೆಪಿ ಮಹಿಳಾ ಮೋರ್ಚಾದಿಂದ ಮಂಗಳಗೌರಿ ಪೂಜೆ




ದಾವಣಗೆರೆ, ಆ. 20- ಜಿಲ್ಲಾ ಬಿಜೆಪಿ ಕಛೇರಿಯಲ್ಲಿ ಮಹಿಳಾ ಮೋರ್ಚಾ ವತಿಯಿಂದ ಮಂಗಳ ಗೌರಿ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್, ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಹೆಚ್.ಸಿ. ಜಯಮ್ಮ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಮಂಜುಳ ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ ವಾಲಿ, ಭಾಗ್ಯ ಪಿಸಾಳೆ, ಪದಾಧಿಕಾರಿಗಳಾದ ಗೌರಮ್ಮ ಪಾಟೀಲ್, ಕುಮಾರಿ, ಭಾಗ್ಯ ಶ್ರೀನಿವಾಸ, ಕಮಲ, ಮಂಜುಳ ಗದುಗೇಶ್, ರೇಣುಕಾ, ಸರಸ್ವತಿ, ಜಯಲಕ್ಷ್ಮಿ, ನೇತ್ರಾವತಿ, ರತ್ನ, ಸಾವಿತ್ರ, ಪುಷ್ಪ, ಕವಿತಾ ಉಪಸ್ಥಿತರಿದ್ದರು.

## 'ಗೃಹಲಕ್ಷ್ಮಿ' ಸುಳ್ಳು ವದಂತಿ ನಂಬಬೇಡಿ

ಚನ್ನಗಿರಿ, ಆ. 20 - ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಯ 11 ಮತ್ತು 12ನೇ ಕಂತುಗಳು ಜಮೆಯಾಗಲು ಸ್ವಲ್ಪ ತಡವಾಗಿದ್ದು, ಇದನ್ನೇ ಬಂಡವಾಳ ಮಾಡಿಕೊಂಡು ಕೆಲವು ಸ್ಥಳೀಯ ಆನ್‌ಲೈನ್ ಸೆಂಟರ್‌ನವರು ಇ-ಕೆವೈಸಿ ಮಾಡಿಸಬೇಕು, ಪಿಂಕ್ ಸ್ಮಾರ್ಟ್ ಕಾರ್ಡ್ ಇದ್ದರೆ ಮಾತ್ರ ಗೃಹಲಕ್ಷ್ಮಿ ಹಣ ಬರುತ್ತದೆ ಎಂಬ ಸುಳ್ಳು ವದಂತಿ ಹರಡುತ್ತಿದ್ದಾರೆ. ಫಲಾನುಭವಿ ಗಳನ್ನು ನಂಬಿಸಿ ಅವರಿಂದ ಇಂತಿಷ್ಟು ಹಣ ಪಡೆದುಕೊಂಡು ಎಡಿಟ್ ಮಾಡಿ ಡೂಪ್ಲಿಕೇಟ್ ಪಿಂಕ್ ಸ್ಮಾರ್ಟ್ ಕಾರ್ಡ್ ಮಾಡಿಕೊಟ್ಟು ವಂಚಿಸುತ್ತಿದ್ದಾರೆ. ಆದ್ದ ರಿಂದ ಇಂತಹ ವಂಚಕರಿಂದ ಜಾಗೃತರಾಗಿರಲು ತಿಳಿಸಿ, ಸರ್ಕಾರ ಇಂತಹ ಕಾರ್ಡ್‌ಗಳಿಗೆ ಯಾವುದೇ ಅಧಿಕೃತ ಆದೇಶ ನೀಡಿರುವುದಿಲ್ಲ ಎಂದು ಚನ್ನಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 20.08.2024ರ ಮಂಗಳವಾರ
ಬೆಂಗಳೂರಿನಲ್ಲಿ ಹೃದಯಘಾತದಿಂದ ನಿಧನರಾದ
ದಾವಣಗೆರೆ ಕ್ಲಬ್‌ನ ಹಿರಿಯ ಸದಸ್ಯರಾದ
**ಸುರೇಶ ಎಂ.ಎಸ್**
ಇವರ ಆತ್ಮಕ್ಕೆ ದೇವರು ಶಾಂತಿ ನೀಡಲಿ ಎಂದು ಮತ್ತು ಇವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

♣ ವೈ.ಬಿ. ಸತೀಶ್ ♣ ಎಸ್.ಜಿ. ಉಳುವಯ್ಯ ♣ ಹೆಚ್.ಎಂ. ನಾಗರಾಜ ♣ ಎಸ್. ನಾಗರಾಜ ♣ ಬಿ.ರಮೇಶ್ ♣ ಹೆಚ್.ಎಸ್. ಸಂಗಮೇಶ್ ♣ ಟಿ.ಎಂ. ಮಂಜುನಾಥ ♣ ಬೆಳ್ಳೂಡಿ ಶಿವಕುಮಾರ್



**ವಿದೇಶ ಪ್ರಯಾಣದ ಶುಭ ಹಾರೈಕೆ**

ಮಗಳು, ಅಳಿಯ ಹಾಗೂ ಮೊಮ್ಮಗಳನ್ನು ನೋಡಲು ಅಮೇರಿಕಾ ದೇಶದಲ್ಲಿರುವ ಟೆಕ್ಸಾಸ್ ನಗರಕ್ಕೆ ಪ್ರವಾಸ ಹೊರಟಿರುವ
**ಶ್ರೀ ಹೆಚ್.ಎಂ. ಮಹಾರುದ್ರಸ್ವಾಮಿ**
ಇವರಿಗೆ ಶುಭ ಕೋರುವವರು.



**ಶಾರದಾಂಬ ಸರ್ಕಲ್ ರಿಯಲ್ ಎಸ್ಟೇಟ್ ಸ್ನೇಹಿತರ ಬಳಗ**
ಎಸ್.ಎಸ್. ಲೇಔಟ್, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas